● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಒಳ ಪುಟಗಳು



ವಿಧಾನಮಂಡಲದ ಬಜೆಟ್ ಅಧಿವೇಶನ ಇಂದಿನಿಂದ ಆರಂಭ

ಕಲಾಪವೋ ಕಲಹವೋ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಮಂಡಲದ ಬಜೆಟ್ ಅಧಿವೇಶನ ಸೋಮವಾರದಿಂದ ಆರಂಭವಾಗಲಿದ್ದು, ಹತ್ತು ದಿನಗಳ ಕಲಾಪದಲ್ಲಿ ಪ್ರಬಲ ಅಸ್ತ್ರಗಳನ್ನು ಪ್ರಯೋಗಿಸುವ ಮೂಲಕ ಸರ್ಕಾರವನ್ನು ಕಟ್ಟಿಹಾಕಲು ಬಿಜೆಪಿ–ಜೆಡಿಎಸ್ ಮೈತ್ರಿಕೂಟ ಸಜ್ಜಾಗಿದೆ. ‘ಕೇಂದ್ರದ ಅನ್ಯಾಯ’ ಮುಂದಿಟ್ಟು ದೆಹಲಿವರೆಗೂ ರಾಜ್ಯದ ಕೂಗನ್ನು ಕೊಂಡೊಯ್ದಿದ್ದ ಸರ್ಕಾರದ ನೇತಾರರು, ಇದೇ ಪ್ರತ್ಯಸ್ತ್ರ ಮುಂದಿಟ್ಟು ಎದುರಾಳಿಗಳನ್ನು ಕಟ್ಟಿಹಾಕಲು ಅಣಿಯಾಗಿದ್ದಾರೆ.

ಸದ್ಯವೇ ಎದುರಾಗಲಿರುವ ಲೋಕಸಭಾ ಚುನಾವಣೆಯಲ್ಲಿ ಲಾಭ ಗಳಿಸುವ ಉದ್ದೇಶದ ರಾಜಕೀಯ ದಾಳಗಳಿಗೆ ಈ ಅಧಿವೇಶನ ವೇದಿಕೆಯಾಗುವ ಸಾಧ್ಯತೆ ದಟ್ಟವಾಗಿದೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಸೋಮವಾರ ಮಧ್ಯಾಹ್ನ 12 ಗಂಟೆಗೆ ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡುವರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ (ಫೆಬ್ರುವರಿ 16) 2024–25ನೇ ಆರ್ಥಿಕ ವರ್ಷದ ಬಜೆಟ್ ಮಂಡಿಸುವರು.

7ನೇ ಪುಟ ನೋಡಿ

ವಿರೋಧ ಪಕ್ಷಗಳ ಅಸ್ತ್ರ v/s ಸರ್ಕಾರದ ಪ್ರತ್ಯಸ್ತ್ರ

ವಿರೋಧ ಪಕ್ಷಗಳ ಅಸ್ತ್ರ

- ರಾಜ್ಯದ ವಿವಿಧೆಡೆ ಉಲ್ಬಣಿಸುತ್ತಿರುವ ಕುಡಿಯುವ ನೀರಿನ ಸಮಸ್ಯೆ
- ಬರಗಾಲದಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ಪರಿಹಾರ ವಿತರಣೆಯಲ್ಲಿನ ವಿಳಂಬ ಸೇರಿದಂತೆ ಬರ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂಬ ವಾದ
- ರಾಜ್ಯದ ವಿವಿಧೆಡೆ ಅಪರಾಧ ಕೃತ್ಯಗಳಲ್ಲಿ ಹೆಚ್ಚಳ, ಸಂಘರ್ಷದ ವಾತಾವರಣ ನಿರ್ಮಾಣ ಆಗಿದೆ ಎಂಬ ಆರೋಪ

ಸರ್ಕಾರದ ಪ್ರತ್ಯಸ್ತ್ರ

- ಬರದ ಸಮರ್ಥ ನಿರ್ವಹಣೆ, ಸಮಸ್ಯೆ ಪರಿಹಾರಕ್ಕೆ ಜಿಲ್ಲಾಡಳಿತವನ್ನು ಸಜ್ಜುಗೊಳಿಸಲಾಗಿದೆ ಎಂಬ ವಾದ
- ಸಂತ್ರಸ್ತರ ಖಾತೆಗೆ ಪರಿಹಾರ ಜಮೆಯ ವಿವರಗಳನ್ನು ಮುಂದಿಟ್ಟು, ಬರ ಪರಿಹಾರ ಕೋರಿ ಮನವಿ ಸಲ್ಲಿಸಿ ಐದು ತಿಂಗಳು ಕಳೆದರೂ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಪರಿಹಾರ ನೀಡಿಲ್ಲ
- ಈಗ ಎನ್‌ಡಿಎ ಮೈತ್ರಿ ಕೂಟದ ಭಾಗವಾಗಿರುವ ಎಚ್.ಡಿ. ಕುಮಾರಸ್ವಾಮಿ, ಮುಖ್ಯಮಂತ್ರಿಯಾಗಿದ್ದಾಗ ಬಿಜೆಪಿ ವಿರುದ್ಧ ಮಾಡಿದ್ದ ಆರೋಪಗಳನ್ನು ಸದನದ ಮುಂದಿಟ್ಟು ಇಕ್ಕಟ್ಟಿಗೆ ಸಿಲುಕಿಸುವ ತಂತ್ರ

ತೆರಿಗೆ ಕದನದತ್ತ ಕುತೂಹಲ

ತೆರಿಗೆ ಪಾಲು ಮತ್ತು ಅನುದಾನದ ಹಂಚಿಕೆಯಲ್ಲಿ ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂದು ಆರೋಪಿಸಿ ಸಿದ್ದರಾಮಯ್ಯ ನೇತೃತ್ವದಲ್ಲಿ ದೆಹಲಿಯಲ್ಲಿ ನಡೆದ ಪ್ರತಿಭಟನೆಯೂ ಅಧಿವೇಶನದಲ್ಲಿ ಚರ್ಚೆಯಾಗುವ ಸಾಧ್ಯತೆ ಇದೆ.

ಆರ್ಥಿಕ ಸ್ಥಿತಿ ಕುರಿತ ಶ್ವೇತ ಪತ್ರ ಪ್ರಕಟಿಸಿ ಕೇಂದ್ರದ ವಿರುದ್ಧ ಮತ್ತೊಮ್ಮೆ ಆರೋಪ ಮಾಡಲು ರಾಜ್ಯ ಸರ್ಕಾರ ಸಿದ್ಧತೆ ನಡೆಸಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಬಜೆಟ್ ಅನುದಾನ ಹಂಚಿಕೆಗೂ ಮೀರಿ, ಕಾಮಗಾರಿಗಳಿಗೆ ಅನುಮೋದನೆ ನೀಡಿರುವುದನ್ನೂ ವಿರೋಧ ಪಕ್ಷಗಳ ವಿರುದ್ಧದ ಅಸ್ತ್ರವಾಗಿ ಸರ್ಕಾರ ಬಳಸುವ ಸಂಭವ ಇದೆ. 15ನೇ ಹಣಕಾಸು ಆಯೋಗದ ಅನುದಾನದ ಹಂಚಿಕೆ ಸೂತ್ರಗಳಿಗೆ ಯುಪಿಎ ಸರ್ಕಾರ ಕಾರಣ ಎಂಬ ತಿರುಗೇಟು ನೀಡುವುದಕ್ಕೆ ಬಿಜೆಪಿ ಮತ್ತು ಜೆಡಿಎಸ್ ಸಜ್ಜಾಗುತ್ತಿವೆ.



ಮೈಸೂರು ಜಿಲ್ಲೆ ಸುತ್ತೂರಿನಲ್ಲಿ ಭಾನುವಾರ ನಡೆದ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸನ್ಮಾನಿಸಿದರು —ಪ್ರಜಾವಾಣಿ ಚಿತ್ರ

ಅಯೋಧ್ಯೆಯಲ್ಲಿ ಸುತ್ತೂರು ಮಠದ ಶಾಖೆ: ಶಾ ಶ್ಲಾಘನೆ

ಪ್ರಜಾವಾಣಿ ವಾರ್ತೆ

ಸುತ್ತೂರು (ಮೈಸೂರು ಜಿಲ್ಲೆ): ‘ಅಯೋಧ್ಯೆಯಲ್ಲಿ ಸುತ್ತೂರು ಶಾಖಾ ಮಠ ಸ್ಥಾಪಿಸಲು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮುಂದಾಗಿರುವುದು ಅಭಿನಂದನೀಯ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ಇಲ್ಲಿ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದ ಕಡೆಯ ದಿನವಾದ ಭಾನುವಾರ ‘ಪಾರ್ವತಮ್ಮ–ಶಾಮನೂರು ಶಿವಶಂಕರಪ್ಪ ಅತಿಥಿ ಗೃಹ’ ಉದ್ಘಾಟಿಸಿ, ನಂತರ ನಡೆದ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಮಠವು ಅಯೋಧ್ಯೆಯಲ್ಲಿ ಜನರ ಸೇವಾ ಕಾರ್ಯಗಳನ್ನು ಆರಂಭಿಸುತ್ತಿರುವುದು ಸಂತೋಷ ತಂದಿದೆ’ ಎಂದರು.

‘ಶಿವರಾತ್ರೀಶ್ವರರಿಂದ ದೇಶಿಕೇಂದ್ರ ಸ್ವಾಮೀಜಿವರೆಗೆ 24 ಮಠಾಧೀಶರೂ ದೇಶ, ಸಮಾಜಕ್ಕಾಗಿ ನಿಸ್ವಾರ್ಥ ಸೇವೆ ಮಾಡಿದ್ದಾರೆ. ಮಕ್ಕಳಿಗೆ ಶಿಕ್ಷಣ ನೀಡಿ ಬೆಳಕಾಗಿದ್ದಾರೆ. ಅವರನ್ನು ನೆನಪಿಸಿಕೊಳ್ಳುತ್ತಲೇ, ಜಗಜ್ಯೋತಿ ಬಸವೇಶ್ವರರನ್ನೂ ಸ್ಮರಿಸುವೆ. ವಚನಗಳ ಮೂಲಕ ದೇಶದ ಕೋಟಿ ಕೋಟಿ ಜನರನ್ನು ತಲುಪಿದ್ದಾರೆ’ ಎಂದು ನೆನೆದರು.

‘ಜೆಎಸ್‌ಎಸ್‌ನ 350ಕ್ಕೂ ಹೆಚ್ಚು ಸಂಸ್ಥೆಗಳಿವೆ. 20 ಸಾವಿರ ಸಿಬ್ಬಂದಿ ಇದ್ದಾರೆ. ಒಂದು ಲಕ್ಷಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಅಂಗವಿಕಲರಿಗೂ ಪಾಲಿಟೆಕ್ನಿಕ್ ತೆರೆದಿರುವುದು ಪುಣ್ಯದ ಕೆಲಸ’ ಎಂದು ಶ್ಲಾಘಿಸಿದರು. ‘ಪ್ರಧಾನಿ ನರೇಂದ್ರ ಮೋದಿ ಭಾರತೀಯ ಸಂಸ್ಕೃತಿ, ಪರಂಪರೆಯನ್ನು ಪುನರ್‌ಸ್ಥಾಪಿಸುವ ಕೆಲಸ ಮಾಡುತ್ತಿದ್ದಾರೆ. ಶ್ರೀರಾಮ ಮಂದಿರ ನಿರ್ಮಾಣ, ಕಾಶಿ ವಿಶ್ವನಾಥ ಹಾಗೂ ಉಜ್ಜಯಿನಿ ಮಹಾಕಾಲೇಶ್ವರ ಕಾರಿ ಡಾರ್, ಕೇದಾರ, ಬದರಿ ನಗರಗಳ ಪುನರುತ್ಥಾನ ಮಾಡುತ್ತಿದ್ದಾರೆ’ ಎಂದರು.

4ನೇ ಪುಟ ನೋಡಿ

ಗೋ ಬ್ಯಾಕ್ ಅಮಿತ್ ಶಾ: ಪ್ರತಿಭಟನೆ

ಮೈಸೂರು: ‘ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ತೆರಿಗೆ ಹಂಚಿಕೆಯಲ್ಲಿ ಅನ್ಯಾಯ ಎಸಗುತ್ತಿದೆ’ ಎಂದು ಆರೋಪಿಸಿ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ನಗರದ ವಿನೋಬಾ ರಸ್ತೆಯಲ್ಲಿರುವ ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡದ ಕಾಂಪೌಂಡ್‌ಗೆ ಪೋಸ್ಟರ್‌ಗಳನ್ನು ಅಂಟಿಸಿ ಭಾನುವಾರ ಪ್ರತಿಭಟಿಸಿದರು. ‘ಕೇಂದ್ರ ಸಚಿವರೇ ರಾಜ್ಯಕ್ಕೆ ನ್ಯಾಯ ಒದಗಿಸದೇ ರಾಜ್ಯ ಪ್ರವಾಸವನ್ನೇಕೆ ಕೈಗೊಂಡಿದ್ದೀರಿ? ಬರಿಗೈಲಿ ಬಂದಿದ್ದೀರೇಕೆ’ ಎಂದು ಕೇಳಿದ ಅವರು, ‘ಗೋ ಬ್ಯಾಕ್, ಗೋ ಬ್ಯಾಕ್’’ ಎಂದು ಘೋಷಣೆ ಹಾಕಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಂದು ಲಕ್ಷ ಮಂದಿಗೆ ನೇಮಕಾತಿ ಪತ್ರ ಇಂದು

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಿಗೆ ಆಯ್ಕೆಯಾಗಿರುವ 1 ಲಕ್ಷಕ್ಕೂ ಹೆಚ್ಚು ಮಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ (ಫೆ.12) ವಿಡಿಯೊ ಕಾನ್ಫರೆನ್ಸ್ ಮೂಲಕ ನೇಮಕಾತಿ ಪತ್ರಗಳನ್ನು ವಿತರಿಸಲಿದ್ದಾರೆ.

ದೇಶದಾದ್ಯಂತ 47 ಕಡೆಗಳಲ್ಲಿ ರೋಜ್‌ಗಾರ್ ಮೇಳ ನಡೆಯಲಿದೆ. ಕಂದಾಯ, ಗೃಹ ವ್ಯವಹಾರ, ಉನ್ನತ ಶಿಕ್ಷಣ, ಪ್ರಾಥಮಿಕ ಶಿಕ್ಷಣ, ರಕ್ಷಣೆ, ಆರೋಗ್ಯ ಸೇರಿದಂತೆ ವಿವಿಧ ಇಲಾಖೆಗಳಿಗೆ ಆಯ್ಕೆಯಾದವರು ನೇಮಕಾತಿ ಪತ್ರಗಳನ್ನು ಪಡೆಯಲಿದ್ದಾರೆ ಎಂದು ಪ್ರಧಾನಮಂತ್ರಿಯವರ ಕಾರ್ಯಾಲಯ ತಿಳಿಸಿದೆ.

ಈ ಮೇಳವು ಉದ್ಯೋಗ ಸೃಷ್ಟಿಗೆ ಹೆಚ್ಚಿನ ಆದ್ಯತೆಯನ್ನು ನೀಡುವ ಪ್ರಧಾನಿಯವರ ಬದ್ಧತೆಯನ್ನು ಈಡೇರಿಸುವ ದಿಸೆಯಲ್ಲಿ ಪ್ರಮುಖ ಹೆಜ್ಜೆಯಾಗಿದೆ ಎಂದು ಹೇಳಿದೆ. ಇಲ್ಲಿ ನಿರ್ಮಾಣವಾಗಲಿರುವ ‘ಕರ್ಮಯೋಗಿ ಭವನ’ದ ಮೊದಲನೇ ಹಂತದ ಕಾಮಗಾರಿಗೆ ಇದೇ ಸಂದರ್ಭದಲ್ಲಿ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದು ತಿಳಿಸಲಾಗಿದೆ.

313 ವಾರ್ಡನ್ ಹುದ್ದೆಗೆ ಬಡ್ತಿ ರದ್ದು: ಕೆಎಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು 313 ನಿಲಯ ಮೇಲ್ವಿಚಾರಕರಿಗೆ (ಹಾಸ್ಟೆಲ್ ಸೂಪರಿಂಟೆಂಡೆಂಟ್), ನಿಲಯ ಪಾಲಕ (ಹಾಸ್ಟೆಲ್ ವಾರ್ಡನ್) ಹುದ್ದೆಗಳಿಗೆ ನೀಡಿದ್ದ ಬಡ್ತಿಯನ್ನು ರದ್ದುಪಡಿಸಿ ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ಫೆ. 5ರಂದು ಆದೇಶ ಹೊರಡಿಸಿದೆ.

ಈ ಮುಂಬಡ್ತಿಯಿಂದ ಬಾಧಿತರಾದ ನೌಕರರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಕೆಎಟಿ, ನಿಯಮಬಾಹಿರವಾಗಿ ಬಡ್ತಿ ನೀಡಲಾಗಿದೆ ಎಂದು ಅಭಿಪ್ರಾಯಪಟ್ಟಿದೆ. ಅಲ್ಲದೆ, ಈ ಬಡ್ತಿಯನ್ನು ರದ್ದುಪಡಿಸುವಂತೆ ಕೋರಿ ಕೆಎಟಿ ಮೆಟ್ಟಿಲೇರಿದ ಎಲ್ಲ ಅರ್ಜಿದಾರರಿಗೆ ಇಲಾಖೆಯು ಒಂದು ತಿಂಗಳ ಒಳಗೆ ತಲಾ ₹5 ಸಾವಿರದಂತೆ ಪರಿಹಾರ ನೀಡಬೇಕು ಎಂದು ಆದೇಶದಲ್ಲಿ ವಿವರಿಸಲಾಗಿದೆ.

‘ಕರ್ನಾಟಕ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸೇವಾ (ವೃಂದ ಮತ್ತು ನೇಮಕಾತಿ) ನಿಯಮಗಳು–2019’ರ ಪ್ರಕಾರ ವಾರ್ಡನ್ ಹುದ್ದೆಗೆ ನೇಮಕಾತಿಗೆ ನಿರ್ಬಂಧವಿದೆ.’

7ನೇ ಪುಟ ನೋಡಿ

ಸತ್यमेव जयते
Goverment Of India

‘ವಿಕಸಿತ ಭಾರತ’ ಸಂಕಲ್ಪವು ಯುವ ಶಕ್ತಿಯ ಸಾಮರ್ಥ್ಯದಿಂದಾಗಿ ಸಾಕಾರವಾಗಿದೆ ಮತ್ತು ಇನ್ನಷ್ಟು ಸಶಕ್ತವಾಗಿದೆ



ಉದ್ಯೋಗ ಮೇಳ ಮುಖಾಂತರ ಯುವಕರನ್ನು ಸರ್ಕಾರದ ನೇಮಕಾತಿಗಳಿಗೆ ನೇಮಕಮಾಡಿಕೊಳ್ಳಲಾಗುತ್ತಿದೆ

ದೇಶಾದ್ಯಂತ ಸರ್ಕಾರಿ ನೌಕರಿಗಳಿಗೆ ಆಯ್ಕೆಗೊಂಡಿರುವ 1 ಲಕ್ಷಕ್ಕೂ ಹೆಚ್ಚಿನ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ವಿತರಣೆ

ಪ್ರಧಾನಮಂತ್ರಿ

ನರೇಂದ್ರ ಮೋದಿ

ಇವರಿಂದ

12 ಫೆಬ್ರವರಿ 2024 ಬೆಳಗ್ಗೆ 10:30 ಗಂಟೆಗೆ

(ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ)

CBC19101/13/0020/2324

- ಭಾರತ ಸರ್ಕಾರ, ರಾಜ್ಯ ಸರ್ಕಾರಗಳ ಪಾಲುದಾರಿಕೆಯ ಸಹಯೋಗದೊಂದಿಗೆ, ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ.
- ಮಹಿಳೆಯರಿಗೆ, ದಿವ್ಯಾಂಗಜನರಿಗೆ ಮತ್ತು ಜಿಲ್ಲೆಯ ಆಕಾಂಕ್ಷಿ ಅಭ್ಯರ್ಥಿಗಳಿಗೆ ವಿಶೇಷ ಲಾಭ.
- ಸುಲಭ, ನ್ಯಾಯಸಮ್ಮತ ಮತ್ತು ಪಾರದರ್ಶಕ ಆಯ್ಕೆ ಪ್ರಕ್ರಿಯೆ
- ಯುಪಿಎಸ್‌ಸಿ, ಎಸ್‌ಎಸ್‌ಸಿ, ರೈಲ್ವೇ ನೇಮಕಾತಿ ಮಂಡಳಿ, ಐಬಿಪಿಎಸ್ ನಂತಹ ಸಂಸ್ಥೆಗಳ ಮುಖಾಂತರ ಎಲ್ಲಾ ನೇಮಕಾತಿಗಳನ್ನು ಮಾಡಲಾಗುತ್ತದೆ.
- ವಿಶೇಷ ಆನ್‌ಲೈನ್ ವ್ಯವಸ್ಥೆಯ ಮುಖಾಂತರ ಖಾಲಿಹುದ್ದೆಗಳ ಮೇಲೆ ಮತ್ತು ನೇಮಕಾತಿ ಪ್ರಕ್ರಿಯೆಯ ಮೇಲೆ ನಿಗಾವಹಿಸಲಾಗಿದೆ.
- ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹೊಸದಾಗಿ ನೇಮಕಗೊಳ್ಳುವ ಪ್ರತಿಯೊಬ್ಬರಿಗೂ ಕರ್ಮಯೋಗಿ ಪ್ರಾರಂಭ ಮಾಡ್ಯೂಲ್ ಮುಖಾಂತರ ಆನ್‌ಲೈನ್ ಓರಿಯಂಟೇಶನ್ ಕ್ಲಾಸ್ ನೀಡಲಾಗುತ್ತದೆ.

DD NEWS ಡಿಡಿ ನ್ಯೂಸ್ ವಾಹಿನಿಯಲ್ಲಿ ಕಾರ್ಯಕ್ರಮದ ನೇರಪ್ರಸಾರ ವೀಕ್ಷಿಸಿರಿ

ಕರ್ಮಯೋಗಿ ಪ್ರಾರಂಭ ಮಾಡ್ಯೂಲ್ ಬಗ್ಗೆ ತಿಳಿಯಲು https://igotkarmayogi.gov.in/ ಪೋರ್ಟಲ್‌ಗೆ ಭೇಟಿ ಕೊಡಿ ಅಥವಾ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ

₹ 1,000 ಕೋಟಿ ಅನುದಾನಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಕಾರ್ಮಿಕರ ಅಭಿವೃದ್ಧಿ ಹಾಗೂ ಅವರ ಬೇಡಿಕೆಗಳನ್ನು ಈಡೇರಿಸಲು ಮುಂಬರುವ ಬಜೆಟ್‌ನಲ್ಲಿ ₹1,000 ಕೋಟಿ ಅನುದಾನ ಮೀಸಲಿಡಬೇಕು' ಎಂದು ಒತ್ತಾಯಿಸಿ ರಾಜ್ಯ ಕಟ್ಟಡ ನಿರ್ಮಾಣ ಮತ್ತು ಅಸಂಘಟಿತ ಕಾರ್ಮಿಕರ ಒಕ್ಕೂಟದ ಪದಾಧಿಕಾರಿಗಳು ನಗರದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಪ್ರತಿಭಟನಾಕಾರರು, ಬೇಡಿಕೆ ಈಡೇರಿಕೆಗಾಗಿ ಘೋಷಣೆ ಕೂಗಿದರು. 'ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ವಸತಿ ಸೌಲಭ್ಯಕ್ಕೆ ₹ 5 ಲಕ್ಷ ನೀಡಬೇಕು. ಕಟ್ಟಡ ಕಾರ್ಮಿಕರು ಬಸ್‌ಗಳಲ್ಲಿ ಸಂಚರಿಸಲು ಉಚಿತ ಪಾಸ್ ಒದಗಿಸಬೇಕು. ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಕಾರ್ಮಿಕ ಕಲ್ಯಾಣ ಮಂಟಪ ಮತ್ತು ಕಾರ್ಮಿಕ ಸಮುದಾಯ ಭವನ ನಿರ್ಮಿಸಬೇಕು. ಕಾರ್ಮಿಕರಿಗೆ ಕನಿಷ್ಠ ₹ 35 ಸಾವಿರ ಮಾಸಿಕ ವೇತನ ನಿಗದಿಪಡಿಸಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಇಥಿಯೋಪಿಯಾ ಮಕ್ಕಳಿಗೆ ಹೃದಯ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೋಟರಿ ಬೆಂಗಳೂರು ಮಿಡ್‌ಟೌನ್ ಸಹಯೋಗದಲ್ಲಿ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ಇಥಿಯೋಪಿಯಾದ ಐವರು ಮಕ್ಕಳಿಗೆ ಹೃದಯ ಶಸ್ತ್ರ ಚಿಕಿತ್ಸೆ ನಡೆಸಿದೆ.

ಈ ಶಸ್ತ್ರಚಿಕಿತ್ಸೆಗಳಿಗೆ ಒಟ್ಟು ₹ 7.5 ಲಕ್ಷ ವೆಚ್ಚವಾಗಿದ್ದು, ಈ ಮೊತ್ತವನ್ನು ರೋಟರಿ ಬೆಂಗಳೂರು ಮಿಡ್‌ಟೌನ್‌ನ ಸದಸ್ಯ ಬಿಮಲ್ ದೇಸಾಯಿ ಭರಿಸಿದ್ದಾರೆ. ಇದರಿಂದಾಗಿ ಜನ್ಮಜಾತ ಹೃದಯ ಸಂಬಂಧಿ ಸಮಸ್ಯೆಗಳಿಂದ ಬಳಲುತ್ತಿದ್ದ ಮಕ್ಕಳು ಚೇತರಿಸಿಕೊಂಡಿದ್ದಾರೆ.

'ಜನ್ಮಜಾತ ಹೃದಯ ಸಂಬಂಧಿ ಸಮಸ್ಯೆ ಎದುರಿಸುತ್ತಿದ್ದ ಇಥಿಯೋಪಿಯಾದ ಮಕ್ಕಳು ಚಿಕಿತ್ಸೆಗಾಗಿ ಇಲ್ಲಿಗೆ ಬಂದಿದ್ದರು. ದಾನಿಗಳ ನೆರವಿನಿಂದ ಹೃದಯ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಮಾಡಲಾಗಿದೆ' ಎಂದು ಸಂಸ್ಥೆ ತಿಳಿಸಿದೆ.

ದೇಶ ಒಡೆಯಲು ಮುಂದಾದ ಕಾಂಗ್ರೆಸ್: ಬಿಜೆಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿತ್ಯವೂ ಸುಳ್ಳು ಹೇಳುತ್ತಿರುವ ಸಿಎಂ ಸಿದ್ದರಾಮಯ್ಯ ಅವರು 'ಸುಳ್ಳಾಸುರ' ಎಂಬ ನೊಬೆಲ್ ಪ್ರಶಸ್ತಿ ಇಟ್ಟಿದ್ದರೆ ಅದನ್ನು ಗೆಲ್ಲುವ ಮೊದಲ ಸದಸ್ಯರಾಗಿರುತ್ತಿದ್ದರು' ಎಂದು ಬಿಜೆಪಿ ಲೇವಡಿ ಮಾಡಿದೆ.

'ಕಾಂಗ್ರೆಸ್ ತನ್ನ ವೈಫಲ್ಯ ಮುಚ್ಚಿಕೊಳ್ಳಲು ಉತ್ತರ ಭಾರತ, ದಕ್ಷಿಣ ಭಾರತ ಎಂದು ದೇಶ ಒಡೆಯಲು ಮುಂದಾಗಿದೆ. ಜಾತಿ–ಮತದ ಹೆಸರಿನಲ್ಲೂ ಸಮಾಜವನ್ನು ಇಬ್ಭಾಗ ಮಾಡುತ್ತಿದೆ. ಇದು ದುರಂತ' ಎಂದು ಬಿಜೆಪಿ 'ಎಕ್ಸ್' ಮೂಲಕ ಹರಿಹಾಯ್ದಿದೆ.

'ತಮ್ಮವರನ್ನೇ ಯಾಮಾರಿಸಿ ಮತ್ತೊಬ್ಬರ ಮೇಲೆ ಗೂಬೆ ಕೂರಿಸುವ ಚಾಕಚಕ್ಯತೆಯನ್ನು ಸಿದ್ದರಾಮಯ್ಯ ಸಾಹೇಬರು ಒಲಿಸಿಕೊಂಡು ಬಂದಿರುವುದಕ್ಕೆ ಕಾರಣ ಅವರು ತಮ್ಮ ರಾಜಕೀಯ ಜೀವನದಲ್ಲಿ ಸಾಧಿಸಿದ ಅನನ್ಯ ತಪಸ್ಸು' ಎಂದು ಹೇಳಿದೆ.

'ಕೇವಲ 5 ವರ್ಷದಲ್ಲಿ ದೇಶದಲ್ಲಿ 13.5 ಕೋಟಿ ಬಡವರು ಕಡು ಬಡತನದಿಂದ ಹೊರ ಬಂದಿದ್ದಾರೆ.

₹36 ಸಾವಿರ ಲಕ್ಷ ಕೋಟಿ ಡಿಬಿಟಿ ವರ್ಗಾವಣೆ ಮೂಲಕ 16 ಕೋಟಿಗೂ ಹೆಚ್ಚು ಬಡವರಿಗೆ ವಿವಿಧ ಯೋಜನೆಗಳಲ್ಲಿ ಹಣ ಸಂದಾಯವಾಗಿದೆ. 10 ಕೋಟಿ ಮಹಿಳೆಯರಿಗೆ ಎಲ್‌ಪಿಜಿ ಸಂಪರ್ಕ ಕಲ್ಪಿಸಿಕೊಡಲಾಗಿದೆ. ಜಲಜೀವನ್ ಮಿಷನ್ ಯೋಜನೆ ಅಡಿ 11 ಕೋಟಿ ಕುಟುಂಬಗಳು ಕುಡಿಯುವ ನೀರಿನ ಸಂಪರ್ಕ ಪಡೆದಿವೆ' ಎಂದು ಬಿಜೆಪಿ ಹೇಳಿದೆ.

300ಕ್ಕೂ ಹೆಚ್ಚು ಬಾರಿ ಸಂಚಾರ ನಿಯಮ ಉಲ್ಲಂಘನೆ • ಪ್ರಕರಣ ದಾಖಲಿಸುವ ಎಚ್ಚರಿಕೆ

ದ್ವಿಚಕ್ರ ವಾಹನಕ್ಕೆ ₹3 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ 300ಕ್ಕೂ ಹೆಚ್ಚು ಬಾರಿ ಸಂಚಾರ ನಿಯಮಗಳನ್ನು ಉಲ್ಲಂಘಿಸಿದ್ದ ಆರೋಪದಡಿ ದ್ವಿಚಕ್ರ ವಾಹನವೊಂದರ ಮೇಲೆ ₹ 3.04 ಲಕ್ಷ ದಂಡ ವಿಧಿಸಲಾಗಿದ್ದು, ಬಾಕಿ ದಂಡ ಪಾವತಿಗೆ ಪೊಲೀಸರು ಗಡುವು ನೀಡಿದ್ದಾರೆ.

'ಸುಧಾಮನಗರ ನಿವಾಸಿಯೊಬ್ಬರ ಹೆಸರಿನಲ್ಲಿರುವ ಆಕ್ಟಿವ್ ಹೊಂಡಾ ದ್ವಿಚಕ್ರ ವಾಹನದ (ಕೆಎ 05 ಕೆಎಫ್ 7969) ಮೇಲೆ ₹ 3.04 ಲಕ್ಷ ದಂಡ ಬಾಕಿ ಇದೆ. ಇದರ ವಸೂಲಿಗಾಗಿ ನಿವಾಸಿಗೆ ಮನೆಗೆ ಹೋಗಿ ನೋಟಿಸ್ ನೀಡಲಾಗಿದೆ' ಎಂದು ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಹೆಲ್ಮೆಟ್ ರಹಿತ ಚಾಲನೆ, ಸವಾರಿ ವೇಳೆ ಮೊಬೈಲ್ ಬಳಕೆ, ಸಿಗ್ನಲ್ ಜಂಪ್ ಸೇರಿದಂತೆ ಹಲವು ಸಂಚಾರ ನಿಯಮಗಳನ್ನು ಉಲ್ಲಂಘಿಸಲಾಗಿದೆ. ₹50 ಸಾವಿರ ಮೇಲ್ಪಟ್ಟು ದಂಡ ಬಾಕಿ ಉಳಿಸಿಕೊಂಡವರ ಮನೆಗಳಿಗೆ ಹೋಗಿ, ದಂಡ ವಸೂಲಿ ಮಾಡಲಾಗುತ್ತಿದೆ. ಇದರ ಭಾಗವಾಗಿ, ಸುಧಾಮನಗರ ನಿವಾಸಿ ಮನೆಗೂ ಹೋಗಿ ಬರಲಾಗಿದೆ' ಎಂದು ತಿಳಿಸಿದರು.

ದ್ವಿಚಕ್ರ ವಾಹನ ಜಪ್ತಿಗೆ ಒಪ್ಪದ ಪೊಲೀಸರು: 'ದ್ವಿಚಕ್ರ ವಾಹನ ಮಾಲೀಕನ ಮನೆಗೆ ಹೋಗಿದ್ದ ಪೊಲೀಸರು, ದಂಡ ತುಂಬುವಂತೆ ಹೇಳಿದ್ದರು. ಅಷ್ಟು ಹಣವಿಲ್ಲವೆಂದು ಹೇಳಿದ್ದ ಮಾಲೀಕ, ದ್ವಿಚಕ್ರ ವಾಹನವನ್ನು ಜಪ್ತಿ ಮಾಡಿ ಕೊಂಡೊಯ್ಯುವಂತೆ ಹೇಳಿದ್ದರು. ಆದರೆ, ಪೊಲೀಸರು ಅದಕ್ಕೆ ಒಪ್ಪಿಲ್ಲ. ದಂಡ ಪಾವತಿ ಕಡ್ಡಾಯ. ಇಲ್ಲದಿದ್ದರೆ, ಪ್ರಕರಣ ದಾಖಲಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಸವಾರ, ದಂಡ ಪಾವತಿಸಲು ಸಮಯ ಪಡೆದುಕೊಂಡಿದ್ದಾರೆ' ಎಂದು ಅಧಿಕಾರಿ ಹೇಳಿದರು.

'ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಲಾಗುತ್ತಿದೆ. ದಂಡ ಬಾಕಿ ಉಳಿಸಿಕೊಂಡಿರುವ ಜನರು, ಕೂಡಲೇ ದಂಡ ಪಾವತಿ ಮಾಡಬೇಕು. ಇಲ್ಲದಿದ್ದರೆ, ಪೊಲೀಸರು ಮನೆ ಬಾಗಿಲಿಗೆ ಬಂದು ದಂಡ ವಸೂಲಿ ಮಾಡಲಿದ್ದಾರೆ' ಎಂದು ತಿಳಿಸಿದರು.



ಹೆಲ್ಮೆಟ್ ಧರಿಸದೇ ಮೊಬೈಲ್‌ನಲ್ಲಿ ಮಾತನಾಡುತ್ತ ದ್ವಿಚಕ್ರ ವಾಹನ ಚಲಾಯಿಸಿದ್ದ ಸವಾರ

ಪ್ರತಿಭಾ ಪುರಸ್ಕಾರ: ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರೇಹಳ್ಳಿ ಶ್ರೀಲಕ್ಷ್ಮಿನರಸಿಂಹ ಸ್ವಾಮಿ ಕೈಂಕರ್ಯ ಸಭಾದ ವತಿಯಿಂದ ಪ್ರತಿಭಾ ಪುರಸ್ಕಾರಕ್ಕಾಗಿ ವೈಷ್ಣವ (ಅಯ್ಯಂಗಾರ್) ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

2022–23ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿ, ಡಿಪ್ಲೊಮಾ, ವೈದ್ಯಕೀಯ/ತಾಂತ್ರಿಕ ಪದವಿಗಳಲ್ಲಿ ಉತ್ತಮ ಅಂಕಗಳಿಸಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಅರ್ಜಿಯಲ್ಲಿ ಪೂರ್ಣ ವಿಳಾಸ, ಮೊಬೈಲ್ ಸಂಖ್ಯೆಯ ವಿವರಗಳೊಂದಿಗೆ, ಭಾವಚಿತ್ರ ಹಾಗೂ ದೃಢೀಕೃತ ಅಂಕಪಟ್ಟಿಯ ಛಾಯಾಪ್ರತಿಯನ್ನು ಫೆ.25ರ ಒಳಗೆ ಅಧ್ಯಕ್ಷರು/ಗೌರವ ಕಾರ್ಯದರ್ಶಿಗಳು, ನಂ.:15, 7ನೇ ಅಡ್ಡರಸ್ತೆ, ಈಜುಕೊಳದ ರಸ್ತೆ, ಮಲ್ಲೇಶ್ವರ, ಬೆಂಗಳೂರು–560003 – ಈ ವಿಳಾಸಕ್ಕೆ ತಲುಪಿಸಬೇಕು. ಹೆಚ್ಚಿನ ಮಾಹಿತಿಗಾಗಿ 94499 05340.

ಅಪರಾಧ ಸುದ್ದಿ

ಜನಸ್ಪಂದನದಲ್ಲಿ ಸಚಿವರ ಅವಹೇಳನ: ಚಾಲಕ ಬಂಧನ

ಬೆಂಗಳೂರು: ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದ ಆರೋಪದಡಿ ಮುನೇಗೌಡ (50) ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ವಿಧಾನಸೌಧ ಎದುರು ಫೆ. 8ರಂದು ಆಯೋಜಿಸಿದ್ದ ಜನಸ್ಪಂದನಾ ಕಾರ್ಯಕ್ರಮದ ಸಂದರ್ಭದಲ್ಲಿ ನಡೆದಿದ್ದ ಘಟನೆ ಬಗ್ಗೆ ಸಾರಿಗೆ ಇಲಾಖೆ ಅಧಿಕಾರಿಗಳು ದೂರು ನೀಡಿದ್ದರು. ಅದರನ್ವಯ ಪ್ರಕರಣ ದಾಖಲಿಸಿಕೊಂಡು ಆರೋಪಿ ಮುನೇಗೌಡನನ್ನು ಶನಿವಾರ ಬಂಧಿಸಲಾಗಿದೆ. ಸದ್ಯ ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ದೊಡ್ಡಬಳ್ಳಾಪುರದ ಮುನೇಗೌಡ, ವಾಹನ ಚಾಲಕ. ತನ್ನ ಚಾಲನಾ ಪರವಾನಗಿ (ಡಿ.ಎಲ್) ನವೀಕರಣಕ್ಕಾಗಿ ಆರ್‌ಟಿಒ ಬಳಿ ಅರ್ಜಿ ಸಲ್ಲಿಸಿದ್ದ. ನಿಗದಿತ ಪ್ರಕ್ರಿಯೆಗಳನ್ನೂ ಪೂರ್ಣಗೊಳಿಸಿದ್ದ. ಆದರೆ, ಹಲವು ದಿನವಾದರೂ ಡಿ.ಎಲ್ ಕೈಗೆ ಸಿಕ್ಕಿರಲಿಲ್ಲ.'

'ಡಿ.ಎಲ್ ನೀಡುವಂತೆ ಹಲವು ಬಾರಿ ಆರ್‌ಟಿಒ ಕಚೇರಿ ಅಧಿಕಾರಿಗಳನ್ನು ಕೋರಿದ್ದ. ಆದರೆ, ಸ್ಪಂದನೆ ಸಿಕ್ಕಿರಲಿಲ್ಲ. ಅಧಿಕಾರಿಗಳು ಕಾಲಹರಣ ಮಾಡುತ್ತಿದ್ದರು. ಇದರಿಂದ ನೊಂದ ಮುನೇಗೌಡ, ಜನಸ್ಪಂದನಾ ಕಾರ್ಯಕ್ರಮದಲ್ಲಿ ಅಹವಾಲು ಸಲ್ಲಿಸಲು ಬಂದಿದ್ದ. ಅಧಿಕಾರಿಗಳು ಸೂಕ್ತ ರೀತಿಯಲ್ಲಿ ಅಹವಾಲು ಆಲಿಸಿರಲಿಲ್ಲ. ಮತ್ತಷ್ಟು ಸಿಟ್ಟಾದ ಮುನೇಗೌಡ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದ' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

'ವ್ಯವಸ್ಥೆಯಿಂದ ನೊಂದು, ತಾಳ್ಮೆ ಕಳೆದುಕೊಂಡು ಅವಹೇಳನಕಾರಿಯಾಗಿ ಮಾತನಾಡಿದೆ' ಎಂಬುದಾಗಿ ಆರೋಪಿ ಹೇಳಿಕೆ ನೀಡಿದ್ದಾರೆ' ಎಂದು ಅಧಿಕಾರಿ ಹೇಳಿದರು.

ಪೈಪ್‌ಲೈನ್‌ಗಾಗಿ ಅಗೆದಿದ್ದ ಗುಂಡಿಯಲ್ಲಿ ಬಿದ್ದು ವ್ಯಕ್ತಿ ಸಾವು

ಕನಕಪುರ: ರಸ್ತೆಯಲ್ಲಿ ಪೈಪ್‌ಲೈನ್ ಅಳವಡಿಸಲು ಅಗೆದಿದ್ದ ಗುಂಡಿಯಲ್ಲಿ ಬಿದ್ದು ದ್ವಿಚಕ್ರವಾಹನ ಸವಾರ, ಬೆಂಗಳೂರಿನ ಕಗ್ಗಲಿಪುರ ವ್ಯಾಪ್ತಿಯ ವಾಸುದೇವಪುರ ಗ್ರಾಮದ ಪುಟ್ಟರಾಜು (37) ಎಂಬುವರು ಸಾವಿಗೀಡಾಗಿದ್ದಾರೆ.



ಪುಟ್ಟರಾಜು

ಪೈಪ್‌ಲೈನ್ ಅಳವಡಿಸಲು ರಸ್ತೆ ಅಗೆದು ಸುರಕ್ಷತಾ ಕ್ರಮ ಕೈಗೊಳ್ಳದ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ವಿರುದ್ಧ ಮೃತನ ಸಹೋದರ ಶನಿವಾರ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಜಮೀನಿನ ಕೆಲಸಕ್ಕೆ ಫೆ. 8ರಂದು ಹಲಗೂರಿಗೆ ದ್ವಿಚಕ್ರವಾಹನದಲ್ಲಿ ಹೋಗಿ ರಾತ್ರಿ ವಾಪಸ್ ಬರುತ್ತಿದ್ದಾಗ ಶಿವನಹಳ್ಳಿ ಸಮೀಪದಲ್ಲಿ ರಸ್ತೆಯಲ್ಲಿ ಅಗೆದಿದ್ದ ಗುಂಡಿಗೆ ಪುಟ್ಟರಾಜು ಬೈಕ್ ಸಮೇತ ಬಿದ್ದಿದ್ದರು.

ರಸ್ತೆಯಲ್ಲಿ ಹೋಗುತ್ತಿದ್ದವರು ನೋಡಿ ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಆಂಬ್ಯುಲೆನ್ಸ್‌ನಲ್ಲಿ ದಯಾನಂದ ಸಾಗರ್ ಆಸ್ಪತ್ರೆಗೆ ದಾಖಲಿಸಿ ಕುಟುಂಬದವರಿಗೆ ಮಾಹಿತಿ ನೀಡಿದ್ದರು. ಪ್ರಾಥಮಿಕ ಚಿಕಿತ್ಸೆ ನೀಡಿದ ಆಸ್ಪತ್ರೆಯ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ಕಳಿಸಿದ್ದರು.

ಚಿಕಿತ್ಸೆಗೆ ಸ್ಪಂದಿಸದೆ ಶುಕ್ರವಾರ ರಾತ್ರಿ ಪುಟ್ಟರಾಜು ಮೃತಪಟ್ಟಿದ್ದಾರೆ. ತನ್ನ ಸಹೋದರನ ಸಾವಿಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾರಣವಾಗಿದ್ದು, ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮೃತರ ಸಹೋದರ ಷಣ್ಮುಖ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ. ಗ್ರಾಮಾಂತರ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸುದ್ದಿ 2 ನಿಮಿಷ

ಹೆಣ್ಣು ಭ್ರೂಣ ಹತ್ಯೆ: ಆರೋಗ್ಯ ಇಲಾಖೆಗೆ ವರದಿ

ಬೆಂಗಳೂರು: ಹೆಣ್ಣು ಭ್ರೂಣ ಹತ್ಯೆ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು, ಪ್ರಕರಣದ ಬಗ್ಗೆ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ತನಿಖಾ ವರದಿ ಸಲ್ಲಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಬೈಯಪ್ಪನಹಳ್ಳಿ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ಕೈಗೆತ್ತಿಕೊಂಡಿರುವ ಸಿಐಡಿ ಅಧಿಕಾರಿಗಳು, ವೈದ್ಯರು ಸೇರಿ ಹಲವರನ್ನು ಈಗಾಗಲೇ ಬಂಧಿಸಿ ವಿಚಾರಣೆ ನಡೆಸಿದ್ದಾರೆ. 900ಕ್ಕೂ ಹೆಚ್ಚು ಭ್ರೂಣ ಹತ್ಯೆ ಮಾಡಿರುವ ಮಾಹಿತಿ ತನಿಖೆಯಿಂದ ಲಭ್ಯವಾಗಿದೆ. ಭ್ರೂಣ ಹತ್ಯೆ ಜಾಲದ ಬಗ್ಗೆ ಮಾಹಿತಿ ಸಂಗ್ರಹಿಸಿರುವ ಸಿಐಡಿ ಅಧಿಕಾರಿಗಳು, ಪುರಾವೆ ಸಮೇತ ವರದಿಯಲ್ಲಿ ಉಲ್ಲೇಖಿಸಿರುವುದಾಗಿ ಗೊತ್ತಾಗಿದೆ.

'ಸ್ಕ್ಯಾನಿಂಗ್ ಯಂತ್ರಗಳ ಅಕ್ರಮ ಮಾರಾಟ ಹಾಗೂ ಬಳಕೆಗೆ ಸಂಬಂಧಪಟ್ಟ ಅಂಶಗಳು ತನಿಖೆಯಲ್ಲಿ ಪತ್ತೆಯಾಗಿವೆ. ವೈದ್ಯರು ಹಾಗೂ ಇತರರು, ಹೆಚ್ಚು ಹಣ ಸಂಪಾದಿಸಲು ತಮ್ಮದೇ ತಂಡ ಕಟ್ಟಿಕೊಂಡು ಕೃತ್ಯ ಎಸಗುತ್ತಿದ್ದರು. ಎಲ್ಲ ಅಂಶಗಳನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಕಾಯ್ದೆ ಪ್ರಕಾರ ವರದಿಯೊಂದನ್ನು ಆರೋಗ್ಯ ಅಧಿಕಾರಿಗಳಿಗೆ ನೀಡಬೇಕು. ವರದಿ ಹಸ್ತಾಂತರಿಸುವ ಪ್ರಕ್ರಿಯೆ ಆರಂಭಿಸಬೇಕಿದೆ. ನ್ಯಾಯಾಲಯಕ್ಕೂ ದೋಷಾರೋಪ ಪಟ್ಟಿ ಸಲ್ಲಿಸಲು ತಯಾರಿ ನಡೆದಿದೆ' ಎಂದು ಮೂಲಗಳು ಹೇಳಿವೆ.

'ಬಂಡೀಪುರ ಉಳಿಸಿ' ಅಭಿಯಾನ



ಬೆಂಗಳೂರು: 'ಕರ್ನಾಟಕದ ನಂಜನಗೂಡು– ಕೇರಳದ ನೀಲಾಂಬುರ್ ರೈಲ್ವೆ ಯೋಜನೆ ರದ್ದುಪಡಿಸಬೇಕು' ಎಂದು ಆಗ್ರಹಿಸಿ ಸ್ವಯಂ ಜಾಗೃತಿ ಸೇವಾ ಟ್ರಸ್ಟ್ ಪದಾಧಿಕಾರಿಗಳು ಬೆಂಗಳೂರು ವಿಶ್ವವಿದ್ಯಾಲಯದ ಗಾಂಧಿಭವನ ಬಳಿ ಭಾನುವಾರ ಪ್ರತಿಭಟನೆ ನಡೆಸಿದರು.

ಯೋಜನೆಯನ್ನು ಖಂಡಿಸಿರುವ ಹಲವರು, 'ಬಂಡೀಪುರ ಉಳಿಸಿ' ಅಭಿಯಾನಕ್ಕೆ ಕರೆ ನೀಡಿದ್ದಾರೆ. ಇದಕ್ಕೆ ಬೆಂಬಲ ವ್ಯಕ್ತಪಡಿಸಿರುವ ರಾಜ್ಯದ ಹಲವು ಸಂಘಟನೆಗಳು, ಯೋಜನೆ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿವೆ. ಬೆಂಗಳೂರು ವಿಶ್ವವಿದ್ಯಾಲಯದ ಗಾಂಧಿಭವನದ ಬಳಿ ಪ್ರತಿಭಟನೆ ಹಮ್ಮಿಕೊಂಡಿದ್ದ ಸ್ವಯಂ ಜಾಗೃತಿ ಸೇವಾ ಟ್ರಸ್ಟ್ ಪದಾಧಿಕಾರಿಗಳು, ಪತ್ರಗಳನ್ನು ಬರೆದು ಪ್ರಧಾನ ಮಂತ್ರಿ, ಮುಖ್ಯಮಂತ್ರಿ ಅವರಿಗೆ ಕಳುಹಿಸಿದರು.

'ಯೋಜನೆ ಹೆಸರಿನಲ್ಲಿ ಕಾಡು ನಾಶ ಮಾಡುವ ಹುನ್ನಾರವಿದೆ. ಯೋಜನೆಯಿಂದ ಕಾಡು ಪ್ರಾಣಿಗಳಿಗೆ ತೊಂದರೆ ಉಂಟಾಗಲಿದೆ. ಮಾನವ – ಪ್ರಾಣಿ ಸಂಘರ್ಷಗಳಿಗೂ ಯೋಜನೆ ಕಾರಣವಾಗಲಿದೆ' ಎಂದು ಪ್ರತಿಭಟನಕಾರರು ದೂರಿದರು.

'ರೈಲ್ವೆ ಯೋಜನೆ ರದ್ದುಪಡಿಸಬೇಕು. ಬಂಡೀಪುರದಲ್ಲಿ ರಾತ್ರಿ ಸಂಚಾರ ನಿಷೇಧಿಸಬೇಕೆಂದು ಆಗ್ರಹಿಸಿ ಪ್ರಧಾನ ಮಂತ್ರಿ ಹಾಗೂ ಮುಖ್ಯಮಂತ್ರಿಗೆ ಪತ್ರ ಬರೆಯಲಾಗಿದೆ' ಎಂದೂ ಅವರು ಹೇಳಿದರು.



ಸಂಕಷ್ಟ... ನಗರದ ಅವೆನ್ಯೂ ರಸ್ತೆಯ ಪಕ್ಕದಲ್ಲಿರುವ ಚರಂಡಿಯಲ್ಲಿ ಕೊಳಚೆ ನೀರು ಸರಾಗವಾಗಿ ಹರಿಯದೆ ರಸ್ತೆಯ ಮೇಲೆ ಹರಿಯುತ್ತಿದ್ದು ಪಾದಚಾರಿಗಳು, ವ್ಯಾಪಾರಸ್ಥರು ಹಾಗೂ ವಾಹನ ಸವಾರರು ಮೂಗು ಮುಚ್ಚಿಕೊಂಡು ಓಡಾಟ ನಡೆಸುವ ಸ್ಥಿತಿಯಿದೆ –ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ನಗರದಲ್ಲಿ ಇಂದು

ಪ್ರವಚನ ವಾಹಿನಿ: 'ಭಗವದ್ಗೀತೆ' ಕುರಿತು ಉಪನ್ಯಾಸ: ಗೋಪಾಲ್ ಅಯ್ಯಂಗಾರ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ವಿದ್ಯಾರತ್ನಕರತೀರ್ಥರ 'ಮಧ್ವಾಷ್ಟಕ' ಕುರಿತು ಪ್ರವಚನ: ಮರುತಾಚಾರ್ಯ, ಆಯೋಜನೆ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ **nagaradalli_indu@prajavani.co.in**

26 ವರ್ಷದ ಬಳಿಕ ಸಿಕ್ಕ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯೊಬ್ಬರ ಸರ ಕಳ್ಳತನ ಮಾಡಿದ್ದ ಪ್ರಕರಣದಲ್ಲಿ ಜಾಮೀನು ಪಡೆದು ತಲೆಮರೆಸಿಕೊಂಡಿದ್ದ ಆರೋಪಿ ಗುಲಾಬ್ ಖಾನ್ ಅಲಿಯಾಸ್ ಗುಲ್ಲು (50) 26 ವರ್ಷಗಳ ಬಳಿಕ ಜಯನಗರ ಠಾಣೆ ಪೊಲೀಸರ ಕೈಗೆ ರಾಮನಗರದಲ್ಲಿ ಸಿಕ್ಕಿಬಿದ್ದಿದ್ದಾನೆ.

'1998ರ ಜನವರಿ 20ರಂದು ಕೃತ್ಯ ಎಸಗಿದ್ದ ಗುಲಾಬ್ ಖಾನ್, ಜಾಮೀನು ಪಡೆದು ನ್ಯಾಯಾಲಯದ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ. ಇದೀಗ, 26 ವರ್ಷಗಳ ನಂತರ ಈತ ನಮ್ಮ ಕೈಗೆ ಸಿಕ್ಕಿಬಿದ್ದಿದ್ದಾನೆ. ಈತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

24 ಗ್ರಾಂ ತೂಕದ ಮಾಂಗಲ್ಯ ಸರ: '41 ವರ್ಷದ ಮಹಿಳೆಯೊಬ್ಬರು ಜಯನಗರ 5ನೇ ಹಂತದ 11ನೇ ಮುಖ್ಯರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದರು. ಆಟೊದಲ್ಲಿ ಹಿಂಬಾಲಿಸಿದ್ದ ಆರೋಪಿ ಗುಲಾಬ್ ಖಾನ್, ಮಹಿಳೆಯ 24 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಸ್ಥಳದಿಂದ ಪರಾರಿಯಾಗಿದ್ದ' ಎಂದು ತಿಳಿಸಿದರು.

'ಮಾತೃ ಭಾಷೆಯಲ್ಲೇ ನಿಜ ಶಕ್ತಿ'

ಚಾರುಮತಿ ಪ್ರಕಾಶನದ ಕಾರ್ಯಕ್ರಮದಲ್ಲಿ ಕವಿ ಎಚ್‌.ಎಸ್‌. ವೆಂಕಟೇಶಮೂರ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತೀಯ ಸಂಸ್ಕೃತಿಯ ಹೃದಯ ಸ್ಪಂದನ ಕಾವ್ಯವಾಗಿದೆ. ಆದ್ದರಿಂದಲೇ ಕವಿತೆಯನ್ನು ಓದದವರೂ ಕಾವ್ಯವನ್ನು ಕೇಳಿ ಸಂತೋಷಪಡುತ್ತಾರೆ' ಎಂದು ಕವಿ ಎಚ್.ಎಸ್. ವೆಂಕಟೇಶಮೂರ್ತಿ ತಿಳಿಸಿದರು.

ಚಾರುಮತಿ ಪ್ರಕಾಶನ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸತೀಶ್ ಹುಳಿಯಾರ್ ಅವರ 'ಯಾರೋ ಇರುವ ಭಾವನೆ...' ಕವನ ಸಂಕಲನ ಬಿಡುಗಡೆಮಾಡಿ, ಮಾತನಾಡಿದರು.

'ನಮ್ಮ ಭಾಷೆಯಲ್ಲಿ ಮಾತನಾಡಿದಾಗ ಮಾತ್ರ ನಮ್ಮಲ್ಲಿನ ನಿಜ ಶಕ್ತಿ ವ್ಯಕ್ತವಾಗುತ್ತದೆ. ಆದ್ದರಿಂದ ಕವಿಯಾದವನು ತನ್ನ ಭಾಷೆಯಲ್ಲಿಯೇ ಕವಿತೆಗಳನ್ನು ರಚಿಸಬೇಕು. ಭಾಷೆ ಶಬ್ದಕೋಶದ ವಿಷಯವಾದರೆ, ಮಾತು ಹೃದಯ ಮತ್ತು ನಾಲಿಗೆಗೆ ಸಂಬಂಧಿಸಿದ ವಿಷಯವಾಗಿದೆ. ಮಾತಿನ ಬಗ್ಗೆ ಸಂಕೋಚ, ಗೌರವ ಇರುವವರು ಕವಿಯಾಗುತ್ತಾರೆ. ರೂಪಕ, ಪ್ರತಿಮೆ ಹಾಗೂ ಪ್ರತೀಕವೇ ಕವಿಯ ಬಂಡವಾಳ. ಕಾದಂಬರಿಗೆ ನೂರು ವರ್ಷಗಳ ಪರಂಪರೆ ಇದ್ದರೆ, ಕಾವ್ಯಕ್ಕೆ ಒಂದೂವರೆ ಸಾವಿರ ವರ್ಷಗಳ ಇತಿಹಾಸವಿದೆ. ನಾವು ಕಾವ್ಯದ ವಾರಸುದಾರರಾಗಬೇಕು' ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ಎಚ್‌.ಎಸ್‌. ವೆಂಕಟೇಶಮೂರ್ತಿ ಅವರು (ಎಡದಿಂದ ಮೂರನೆಯವರು) ಸತೀಶ್ ಹುಳಿಯಾರ್ (ಎಡದಿಂದ ನಾಲ್ಕನೆಯವರು) ಅವರ 'ಯಾರೋ ಇರುವ ಭಾವನೆ...' ಪುಸ್ತಕ ಬಿಡುಗಡೆ ಮಾಡಿದರು. (ಎಡದಿಂದ) ಚಾರುಮತಿ ಪ್ರಕಾಶನದ ಪ್ರಕಾಶಕ ಬಿ.ಎಸ್‌. ವಿದ್ಯಾರಣ್ಯ, ಡುಂಡಿರಾಜ್‌, ಮಮತಾ ಸಾಗರ್ ಮತ್ತು ರಂಗಕರ್ಮಿ ಶ್ರೀನಿವಾಸ್ ಜಿ. ಕಪ್ಪಣ್ಣ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಕವಿ ಮಮತಾ ಸಾಗರ್, 'ಪ್ರತಿ ಕಾಲವೂ ಒಂದೊಂದು ಪಾಠವನ್ನು ಕಲಿಸುತ್ತದೆ. ಬದಲಾದ ಕಾಲಘಟ್ಟದಲ್ಲಿ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಆದ್ದರಿಂದ ಕುಟುಂಬ, ಊರನ್ನು ಈ ಮೊದಲಿನಂತೆ ಸಾಂಪ್ರದಾಯಿಕ ದೃಷ್ಟಿಕೋನದಲ್ಲಿ ನೋಡುವುದನ್ನು ನಿಲ್ಲಿಸಬೇಕು. ಹೆಣ್ಣು ಮತ್ತು ಗಂಡಿನ ನಡುವಿನ ಕಂದಕವನ್ನು ದೂರ ಮಾಡಬೇಕು. ಕವನ ಬರೆಯುವ ಪುರುಷರನ್ನು ಕವಿಯೆಂದು ಗುರುತಿಸಿದರೆ, ಮಹಿಳೆಯರನ್ನು ಕವಯಿತ್ರಿ ಎಂದು ಕರೆಯಲಾಗುತ್ತಿದೆ. ಮಹಿಳೆಯರನ್ನೂ ಕವಿಯೆಂದೇ ಗುರುತಿಸಬೇಕು. ಇವತ್ತಿನ ಕಾಲಘಟ್ಟದಲ್ಲಿ ಬರವಣಿಗೆ ಪ್ರೀತಿ ಹಂಚುವ ಸಾಧನ ಆಗಬೇಕು' ಎಂದು ತಿಳಿಸಿದರು.

ಕವಿ ಡುಂಡಿರಾಜ್, 'ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಹಾಗೂ ಶಾಲಾ–ಕಾಲೇಜುಗಳ ಅಧ್ಯಾಪಕರು ಮಾತ್ರ ಕವಿತೆಯನ್ನು ಬರೆಯುತ್ತಾರೆ ಎಂಬ ಮನೋಭಾವ ಒಂದು ಕಾಲದಲ್ಲಿತ್ತು. ಈಗ ಸಾಫ್ಟ್‌ವೇರ್ ಕಂಪನಿಗಳು, ಬ್ಯಾಂಕ್‌ಗಳಲ್ಲಿ ಇರುವವರೂ ಕವಿತೆ ಬರೆಯುತ್ತಿದ್ದಾರೆ. ಕಾವ್ಯದ ಬಗ್ಗೆ ಪ್ರೀತಿ ಇದ್ದರೆ ಮಾತ್ರ ಕವಿತೆ ಬರೆಯಲು ಸಾಧ್ಯ. ಬೇಂದ್ರೆ ಸೇರಿ ವಿವಿಧ ಸಾಹಿತಿಗಳ ಕವಿತೆಗಳನ್ನು ಓದಿಕೊಂಡು ನಮ್ಮ ವೈಶಿಷ್ಟ್ಯತೋರಿಸಬೇಕು. ಮೊದಲು ನಾವು ಎಲ್ಲರು ತೆರಳಿದ ಹೆದ್ದಾರಿಯಲ್ಲಿ ಸಲೀಸಾಗಿ ಸಾಗಿ, ಒಳದಾರಿ ಕಂಡುಕೊಳ್ಳಬೇಕು. ಆಗ ಭಿನ್ನವಾಗಿ ಬರೆಯಲು ಸಾಧ್ಯವಾಗುತ್ತದೆ. ಹಳೆಯ ವಿಷಯವನ್ನು ಹೊಸ ರೀತಿ ಹೇಳಿದರೆ ಜನರಿಗೆ ಇಷ್ಟ ಆಗುತ್ತದೆ' ಎಂದರು.

ಪುಸ್ತಕ ಪರಿಚಯ

ಪುಸ್ತಕ: 'ಯಾರೋ ಇರುವ ಭಾವನೆ...'
ಕವಿ: ಸತೀಶ್ ಹುಳಿಯಾರ್
ಪುಟಗಳು: 88
ಬೆಲೆ: ₹ 100
ಪ್ರಕಾಶನ: ಚಾರುಮತಿ

ಸ್ವದೇಶಿ ಜಾಗರಣ ಮಂಚ್‌ನಲ್ಲಿ ಸಂಸದ ತೇಜಸ್ವಿ ಸೂರ್ಯ ಅಭಿಮತ


'ನೆಹರೂ ನೀತಿ ಸಣ್ಣ ಕೈಗಾರಿಕೆಗೆ ಮಾರಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವಾತಂತ್ರ್ಯ ನಂತರ ನೆಹರೂ ಆದಿಯಾಗಿ ಕೆಲವರು ಪಾಲಿಸಿಕೊಂಡು ಬಂದ ಆರ್ಥಿಕ ನೀತಿಯು ನಮ್ಮ ದೇಶದ ತಳಹದಿಯಾಗಿದ್ದ ಸಣ್ಣ ಕೈಗಾರಿಕೆಗಳನ್ನೇ ಮುಚ್ಚುವಂತೆ ಮಾಡಿತು' ಎಂದು ಸಂಸದ ತೇಜಸ್ವಿ ಸೂರ್ಯ ಅಸಮಾಧಾನ ವ್ಯಕ್ತಪಡಿಸಿದರು.

ಸ್ವದೇಶಿ ಜಾಗರಣ ಮಂಚ್–ಕರ್ನಾಟಕ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸ್ವದೇಶಿ ಮೇಳದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದರು.

'ಆತ್ಮನಿರ್ಭರ ಭಾರತಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಕರೆ ಕೊಟ್ಟ ಬಳಿಕ ನೆಲದ ಸಂಸ್ಕೃತಿ ಮತ್ತು ನಮ್ಮ ಗುಡಿ ಕೈಗಾರಿಕೆಗಳು ಬೆಳೆಯಲು ದೊಡ್ಡ ಮಟ್ಟದ ಅವಕಾಶಗಳು ದೊರೆತವು. ಸ್ವದೇಶಿ ಚಿಂತನೆಯನ್ನು ಮತ್ತೆ ಸಂಪೂರ್ಣವಾಗಿ ತರಲು ಇನ್ನೂ ಹದಿನೈದರಿಂದ ಇಪ್ಪತ್ತು ವರ್ಷಗಳು ಬೇಕಿವೆ. ಇಡೀ ಜಗತ್ತು ಭಾರತದೆಡೆ ತಿರುಗಿ ನೋಡುತ್ತಿರುವ ಈ ಸಂದರ್ಭದಲ್ಲಿ ನಮ್ಮಲ್ಲಿನ ಉತ್ಪಾದನೆಗೆ ಮತ್ತು ಸ್ವದೇಶಿ ವಸ್ತುಗಳಿಗೆ ಹೆಚ್ಚಿನ ಉತ್ತೇಜನ ಸಿಗುತ್ತಿದೆ. ಚಿಗುರುತ್ತಿರುವ ಉದ್ಯಮಶೀಲತೆಯನ್ನು ಬೆಳೆಸುವ ಹೊಣೆ ನಮ್ಮದಾಗಿದೆ' ಎಂದು ಹೇಳಿದರು.



ಸ್ವದೇಶಿ ಮೇಳದ ಮಳಿಗೆಗಳಲ್ಲಿದ್ದ ಕರಕುಶಲ ವಸ್ತುಗಳನ್ನು ಸಿ.ಕೆ. ರಾಮಮೂರ್ತಿ, ತೇಜಸ್ವಿ ಸೂರ್ಯ ವೀಕ್ಷಿಸಿದರು –ಪ್ರಜಾವಾಣಿ ಚಿತ್ರ

ಸ್ವದೇಶಿ ಜಾಗರಣ ಮಂಚ್‌ನ ರಾಷ್ಟ್ರೀಯ ಸಹ ಸಂಯೋಜಕ ಅಶ್ವನಿ ಮಹಾಜನ್, 'ಸ್ವದೇಶಿ ಮೇಳವನ್ನು ದೊಡ್ಡ ನಗರಗಳಲ್ಲಿ ಮಾತ್ರವಲ್ಲದೇ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟಗಳಲ್ಲೂ ಮಾಡುವ ಉದ್ದೇಶವಿದೆ. ದೇಶದ ಎಲ್ಲೆಡೆ ಇರುವ ಸಣ್ಣ ಉದ್ಯಮಿಗಳು ಈ ರೀತಿಯ ಮೇಳದಲ್ಲಿ ತೊಡಗಿಸಿಕೊಳ್ಳುತ್ತಿರುವುದನ್ನು ಗಮನಿಸಿದರೆ ಭಾರತ ಹೊಸ ದಿಕ್ಕಿನತ್ತ ನಡೆಯುತ್ತಿರುವುದು ಸ್ಪಷ್ಟವಾಗಿದೆ. ಭಾರತವನ್ನು ಹಿಂದೆ ಕೀಳಾಗಿ ಕಂಡವರೇ ಈಗ ಬೆರಗಿನಿಂದ ನೋಡುತ್ತಿದ್ದಾರೆ. ದೇಶ ಸ್ವಾವಲಂಬನೆ ಸಾಧಿಸುವುದಲ್ಲದೇ, ಜಗತ್ತಿನ ಇತರ ದೇಶಗಳಿಗೂ ಇಲ್ಲಿನ ಉತ್ಪನ್ನಗಳನ್ನು ನೀಡುವಂತಾಗಬೇಕು' ಎಂದರು.

ಬೇಲಿಮಠದ ಶಿವರುದ್ರ ಸ್ವಾಮೀಜಿ, 'ಸ್ವದೇಶಿ ಮೇಳ ಸ್ವಾಭಿಮಾನದ ಪ್ರತೀಕ. ಭಾರತ ಯಾವತ್ತೂ ಯಾರ ಆಶ್ರಯದಲ್ಲಿಯೂ ಇರಲಿಲ್ಲ. ಜಗತ್ತಿಗೆ ಸಂಸ್ಕಾರ, ಯೋಜನೆ ಮತ್ತು ಯೋಚನೆಯನ್ನು ಕಲಿಸಿಕೊಟ್ಟದೆ. ವ್ಯಾಪಾರಕ್ಕಾಗಿ ಬಂದ ದೇಶಗಳು ತಮ್ಮ ಆಟ ನಡೆಯದಾಗ ಕುತಂತ್ರದಿಂದ ನಮ್ಮನ್ನು ದಾಸರನ್ನಾಗಿ ಮಾಡಿದರು. ನಮ್ಮ ಚಿಂತನೆಗಳು ಸರಿಯಿಲ್ಲ ಎಂಬ ವಿಷವನ್ನು ನಮ್ಮಲ್ಲಿ ತುಂಬಿದ್ದರು. ಸ್ವದೇಶಿ ಚಿಂತನೆಗಳನ್ನು ಮತ್ತೆ ಬಿತ್ತಲು ತೊಡಗಿದಾಗ ಅದರ ಮಹತ್ವ ಅರಿವಿದ್ದವರು ಅಧಿಕಾರಕ್ಕೆ ಬರಲಿಲ್ಲ. ನಾವು ಮತ್ತೆ ನಮ್ಮತನಕ್ಕೆ ಮರಳಬೇಕೆಂಬ ಯೋಚನೆಯನ್ನು ಮುನ್ನೆಲೆಗೆ ತಂದಿದ್ದು ಆತ್ಮನಿರ್ಭರ ಭಾರತದ ಪರಿಕಲ್ಪನೆ' ಎಂದು ಹೇಳಿದರು.

ಜಯನಗರ ವಿಧಾನಸಭಾ ಕ್ಷೇತ್ರದ ಶಾಸಕ ಸಿ.ಕೆ. ರಾಮಮೂರ್ತಿ, ಮೇಳದ ಸಂಯೋಜಕ ಅಶ್ವತ್ಥ ನಾರಾಯಣ ಹಾಗೂ ಸಂಘಟಕ ಅಮಿತ್ ಅಮರನಾಥ್ ಪಾಲ್ಗೊಂಡಿದ್ದರು.

ನಿರೀಕ್ಷೆಗೂ ಮೀರಿ ಸೇರಿದ್ದ ಪುಸ್ತಕ ಪ್ರೇಮಿಗಳು • ರಸದೌತಣ ನೀಡಿದ ಸಾಂಸ್ಕೃತಿಕ ಕಾರ್ಯಕ್ರಮ

ಪುಸ್ತಕ ಸಂತೆ: ಸಾಹಿತ್ಯ ಪ್ರಿಯರ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಎಚ್‌ಎಸ್‌ಆರ್ ಬಡಾವಣೆಯ ಸ್ವಾಭಿಮಾನ ಉದ್ಯಾನದಲ್ಲಿ ಎರಡು ದಿನಗಳ ಕಾಲ ನಡೆದ ‘ಪುಸ್ತಕ ಸಂತೆ’ಗೆ ಭಾನುವಾರ ರಾತ್ರಿ ಸಂಭ್ರಮದ ತೆರೆಬಿತ್ತು.

ರಾಜ್ಯದ ಹಿರಿಯ ಹಾಗೂ ಕಿರಿಯ ಪ್ರಕಾಶನ ಸಂಸ್ಥೆಗಳು ಒಗ್ಗೂಡಿ ವೀರಲೋಕ ಪುಸ್ತಕ ಪ್ರಕಾಶನದ ನೇತೃತ್ವದಲ್ಲಿ ಮೊದಲ ಬಾರಿಗೆ ನಗರದಲ್ಲಿ ಪುಸ್ತಕ ಸಂತೆ ಆಯೋಜಿಸಲಾಗಿತ್ತು. ಪುಸ್ತಕ ಸಂತೆಯಲ್ಲಿದ್ದ 135ಕ್ಕೂ ಹೆಚ್ಚು ಮಳಿಗೆಗಳು ಸಾಹಿತ್ಯಾಸಕ್ತರ ಗಮನ ಸೆಳೆದವು.

ಎರಡು ದಿನಗಳ ಕಾಲ ನಡೆದ ಸಂತೆಯಲ್ಲಿ ಪಾಲ್ಗೊಂಡಿದ್ದವರು ತಮ್ಮಿಷ್ಟದ ಪುಸ್ತಕ ಖರೀದಿಸಿ ಸಂಭ್ರಮಿಸಿದರು. ಬೆಂಗಳೂರು ನಗರ ಸೇರಿದಂತೆ ಹೊರ ಜಿಲ್ಲೆಗಳಿಂದಲೂ ಸಾಹಿತ್ಯಾಸಕ್ತರು ಪುಸ್ತಕ ಸಂತೆಗೆ ಬಂದಿದ್ದರು.

ಸಾಹಿತ್ಯ ಸಮ್ಮೇಳನಗಳಲ್ಲಿ ಪುಸ್ತಕ ಪ್ರದರ್ಶನ ಹಾಗೂ ಮಾರಾಟಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ. ಆದರೆ, ಇದೆ ಮೊದಲ ಬಾರಿಗೆ ಸಂತೆ ಸ್ವರೂಪ ನೀಡಲಾಗಿತ್ತು. ಪುಸ್ತಕ ಸಂತೆಯು ಪ್ರಕಾಶಕರು, ಲೇಖಕರು ಮತ್ತು ಓದುಗರನ್ನು ಒಟ್ಟಿಗೆ ಬೆಸೆಯಿತು. ಶಾಲಾ ಮಕ್ಕಳಿಗೆ ಅಗತ್ಯವಿದ್ದ ಪಠ್ಯಪುಸ್ತಕಗಳು ಲಭ್ಯವಿದ್ದವು. ಸಂಗೀತ ಕಾರ್ಯಕ್ರಮ ರಸದೌತಣ ಉಣಬಡಿಸಿತು.

ಪುಸ್ತಕ ಸಂತೆಯ ಎರಡನೆ ದಿನವಾದ ಭಾನುವಾರ ನಿರೀಕ್ಷೆಗೂ ಮೀರಿ ಪುಸ್ತಕ ಪ್ರೇಮಿಗಳು ಸೇರಿದ್ದರು. ಸಮಾರೋಪ ಸಮಾರಂಭದಲ್ಲಿ ಜೋಗಿಲ ಸಿದ್ದರಾಜು ಅವರಿಂದ ಜಾನಪದ ಗೀತೆಗಳ ಗಾಯನ ಮತ್ತು ಚೌಡಿಕೆ ಪದಗಳ ಗಾಯನ ನಡೆಯಿತು.

ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ರಾಜ್ಯ ಅಧ್ಯಕ್ಷ ರವಿ ಕೃಷ್ಣಾರೆಡ್ಡಿ ಅವರ ‘ಸಹಜ ಜೀವನ’ ಕೃತಿಯನ್ನು ಗಣ್ಯರು ಬಿಡುಗಡೆ ಮಾಡಿದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್‌ದಾಸ್ ಮಾತನಾಡಿ, ‘ಮನುಷ್ಯರಾದ ನಾವು ಪರಸ್ಪರ ಪ್ರೀತಿಸೋಣ. ಯಾವ ಕ್ರಾಂತಿಯೂ ತರಲಾರದಷ್ಟು ಬದಲಾವಣೆಯನ್ನು ಪುಸ್ತಕಗಳು ತಂದಿವೆ. ಪುಸ್ತಕ ಓದೋಣ, ಬರೆಯೋಣ, ಪುಸ್ತಕ ಉಡುಗೊರೆ ನೀಡೋಣ’ ಎಂದು ಕರೆ ನೀಡಿದರು.

> **ಕರ್ನಾಟಕದಲ್ಲಿ ವಾಸಿಸುವ ಎಲ್ಲರೂ ಕನ್ನಡ ಕಲಿತು ಕನ್ನಡದಲ್ಲೇ ವ್ಯವಹರಿಸಬೇಕು**
> **ಎಚ್.ಎನ್.ನಾಗಮೋಹನ್‌ದಾಸ್**
> ನಿವೃತ್ತ ನ್ಯಾಯಮೂರ್ತಿ

‘ವರಮಾನದಲ್ಲಿ ಸ್ವಲ್ಪಭಾಗವನ್ನು ಪುಸ್ತಕ ಖರೀದಿಗೆ ಮೀಸಲಿಟ್ಟರೆ ಒಳ್ಳೆಯದು’ ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ವಿ.ಎಸ್. ಉಗ್ರಪ್ಪ, ‘ಜನರನ್ನು ಒಡೆಯುವ ಶಕ್ತಿಗಳು ನಮ್ಮ ಮಧ್ಯೆ ಕೆಲಸ ಮಾಡುತ್ತಿವೆ. ಇದಕ್ಕೆ ಸೊಪ್ಪು ಹಾಕಬಾರದು. ಈ ಪುಸ್ತಕ ಸಂತೆಯನ್ನು ಭವಿಷ್ಯದಲ್ಲೂ ಮುಂದುವರಿಸೋಣ’ ಎಂದು ಹೇಳಿದರು.

ಸರ್ಕಾರಿ ಶಾಲೆಗಳಿಗೆ ‘ಸಾರ್ವಜನಿಕರಿಂದ ಉಚಿತ ಪುಸ್ತಕ ಉಡುಗೊರೆ’ ಅಭಿಯಾನದಲ್ಲಿ ಸುಮಾರು 500ಕ್ಕೂ ಹೆಚ್ಚು ಪುಸ್ತಕಗಳು ಸಂಗ್ರಹವಾದವು.




ಪುಸ್ತಕ ಸಂತೆಯ ಸಮಾರಂಭದಲ್ಲಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ರಾಜ್ಯ ಅಧ್ಯಕ್ಷ ರವಿ ಕೃಷ್ಣಾರೆಡ್ಡಿ ಅವರ ‘ಸಹಜ ಜೀವನ’ ಕೃತಿಯನ್ನು ಗಣ್ಯರು ಬಿಡುಗಡೆ ಮಾಡಿದರು. ವೀರಲೋಕ ಪುಸ್ತಕ ಪ್ರಕಾಶನದ ವೀರಕಪುತ್ರ ಎಂ. ಶ್ರೀನಿವಾಸ, ಲೇಖಕ ಬೋಳುವಾರು ಮಹಮ್ಮದ್ ಕುಂಞಿ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌.ನಾಗಮೋಹನ್‌ದಾಸ್, ಕಾಂಗ್ರೆಸ್ ಮುಖಂಡ ವಿ.ಎಸ್‌.ಉಗ್ರಪ್ಪ ಸೇರಿದಂತೆ ಮೊದಲಾದವರು ಪಾಲ್ಗೊಂಡಿದ್ದರು (ಎಡಚಿತ್ರ) ಪುಸ್ತಕ ಸಂತೆಯ ಸಮಾರೋಪ ಸಮಾರಂಭದಲ್ಲಿ ಜನಪದ ಗೀತ ಗಾಯನವನ್ನು ಆಸ್ವಾದಿಸಿದ ಪ್ರೇಕ್ಷಕರು

ಪ್ರಕಾಶಕರು, ಓದುಗರ ಅನಿಸಿಕೆಗಳು

ಎಚ್‌ಎಸ್‌ಆರ್ ಬಡಾವಣೆಯಲ್ಲಿ ಕನ್ನಡಿಗರೇ ಇಲ್ಲ. ಅಲ್ಲಿಗ್ಯಾಕೆ ಹೋಗ್ತೀರಿ ಎಂದು ಮೂಗು ಮುರಿದವರೇ ಹೆಚ್ಚು. ₹50 ಸಾವಿರ ಮೌಲ್ಯದ ಪುಸ್ತಕ ಮಾರಾಟವಾಗಿವೆ.
ನಂದೀಶ್, ಸಾವಣ್ಣ ಪ್ರಕಾಶನ

ಶನಿವಾರಕ್ಕೆ ಹೋಲಿಸಿದರೆ ಭಾನುವಾರ ಪುಸ್ತಕಗಳ ಮಾರಾಟ ಕಡಿಮೆ ಇದೆ. ಆದರೆ ನಿರಾಸೆಯಾಗಿಲ್ಲ.
ಬೆಟ್ಟಸ್ವಾಮಿ, ನವ ಕರ್ನಾಟಕ ಪ್ರಕಾಶನ

ಪೂರ್ಣಚಂದ್ರ ತೇಜಸ್ವಿ, ಕುವೆಂಪು ಅವರ ಪುಸ್ತಕಗಳು ಅತಿ ಹೆಚ್ಚು ಮಾರಾಟವಾಗಿವೆ.
ಲಕ್ಷ್ಮಿಕಾಂತ್, ಟೋಟಲ್ ಕನ್ನಡ

ಮೊದಲಿನಿಂದಲೂ ಓದುವ ಅಭ್ಯಾಸ ಇದೆ. ಪೂರ್ಣಚಂದ್ರ ತೇಜಸ್ವಿ ಅವರ ಬರಹಗಳನ್ನು ಇಷ್ಟಪಡುತ್ತೇನೆ. ಈ ಪುಸ್ತಕ ಸಂತೆ ಪ್ರತೀ ವರ್ಷವೂ ನಡೆಯಬೇಕು.
ಹರೀಶ್, ಎಂಜಿನಿಯರ್, ಎಚ್‌ಎಸ್‌ಆರ್ ಬಡಾವಣೆ

ಮಹಿಳೆಯರಿಗೆ ಅರ್ಚಕ ವೃತ್ತಿ ಸರಿಯಲ್ಲ: ಕಣ್ಣನ್

‘ದೇವಾಲಯ ಸರ್ಕಾರದ ಸ್ವತ್ತಲ್ಲ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಮುಜರಾಯಿ ಇಲಾಖೆಗೆ ಸೇರಿದ ದೇವಾಲಯದಲ್ಲಿ ವಸ್ತ್ರಸಂಹಿತೆ ಇಲ್ಲವೆಂದು ಸರ್ಕಾರ ಹೇಳಿದಾಗ ಯಾರೂ ಪ್ರಶ್ನಿಸಲಿಲ್ಲವೇಕೆ? ಹೇಗೆ ಬೇಕಾದರೂ ಬಟ್ಟೆ ಧರಿಸಿಕೊಂಡು ದೇವಸ್ಥಾನಕ್ಕೆ ಬರುವುದಾದರೆ ಧಾರ್ಮಿಕ ಸ್ವಾತಂತ್ರ್ಯ ಉಳಿಯುವುದಾದರೂ ಹೇಗೆ’ ಎಂದು ಚಿಂತಕ ಹಿರೇಮಗಳೂರು ಕಣ್ಣನ್ ಕೇಳಿದರು.

ದೇವಾಲಯ ಸಂವರ್ಧನಾ ಸಮಿತಿ ಕರ್ನಾಟಕ ವತಿಯಿಂದ ನಗರದ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಭಾನುವಾರ ಆಯೋಜಿಸಿದ್ದ ‘ಹಿಂದೂ ದೇವಾಲಯ ಭಕ್ತ ಮಂಡಳಿ’ ಸದಸ್ಯರ ಚಿಂತನಾ ಸಭೆಯಲ್ಲಿ ಅವರು ಮಾತನಾಡಿದರು.

‘ದೇವಾಲಯ ಸಾರ್ವಜನಿಕರ ಸ್ವತ್ತೇ ಹೊರತು ಸರ್ಕಾರದ್ದಲ್ಲ. ಅವು ನಮ್ಮ ಸಂಸ್ಕೃತಿ ಮತ್ತು ಪರಂಪರೆ ಉಳಿಸಲು ಪೂರ್ವಿಕರು ಬಿಟ್ಟು ಹೋದ ಆಸ್ತಿಗಳಾಗಿವೆ. ಅವುಗಳನ್ನು ನಿರ್ವಹಣೆಗಾಗಿ ಸರ್ಕಾರಕ್ಕೆ ನೀಡಿದ್ದೇವೆಯಷ್ಟೆ. ಅವು ಸಂಸ್ಕಾರದ ಕೇಂದ್ರಗಳು ಎಂಬುದನ್ನು ನಾವು ಮರೆಯಬಾರದು’ ಎಂದು ಹೇಳಿದರು.

‘ನಮ್ಮ ಸಂಸ್ಕೃತಿ ಮತ್ತು ಜನರ ಸಂಸ್ಕಾರದ ಉಳಿವಿಗೆ ದೇವಸ್ಥಾನದ ಅರ್ಚಕ ವೃತ್ತಿಯನ್ನು ಪುರುಷರಿಗೆ ಮಾತ್ರವೇ ಮೀಸಲಿಡಬೇಕು. ಮಹಿಳೆ ಯರನ್ನು ಅರ್ಚಕರನ್ನಾಗಿ ನೇಮಿಸುವ ನಿರ್ಧಾರಗಳೂ ಸೂಕ್ತವಲ್ಲ’ ಎಂದರು.



ಹಿರೇಮಗಳೂರು ಕಣ್ಣನ್

‘ಮಠಗಳು ಒಂದು ಸಮುದಾಯ ಮತ್ತು ಜಾತಿಯ ಪ್ರತಿನಿಧಿಯಾಗುತ್ತವೆ. ಆದರೆ, ದೇವಾಲಯಗಳು ಇಡೀ ಸಮಾಜದ ಪ್ರತಿನಿಧಿಯಾಗುತ್ತವೆ. ಅದು ಜಾತ್ಯತೀತವಾಗಿರಬೇಕು. ಸಂಪ್ರದಾಯ–ಸಂಪ್ರದಾಯಗಳ ನಡುವೆ ಜಗಳ ಮಾಡಬಾರದು ಎಂದರು.

ಪ್ರತಿ ದೇವಾಲಯವೂ ಇರುವುದು ಮಾನವನ ಉದ್ಧಾರಕ್ಕಾಗಿಯೇ. ನಾನು ಕನ್ನಡದಲ್ಲಿ ಮಂತ್ರ ಹೇಳುತ್ತೇನೆ ಎಂದು ಕೆಲ ಸಂಪ್ರದಾಯಸ್ಥರಿಗೆ ಸಿಟ್ಟಿದೆ. ನಾವು ಹೇಳುವ ಮಂತ್ರ ಎಲ್ಲರಿಗೂ ಅರ್ಥವಾದರೆ ಮಾತ್ರ ಒಳಗೊಳ್ಳುವಿಕೆ ಸಾಧ್ಯ. ದೇವಸ್ಥಾನವು ಧರ್ಮದರ್ಶಿಗಳ ಪ್ರತಿಷ್ಠೆಗೆ ವೇದಿಕೆಯಾಗಬಾರದು’ ಎಂದು ಹಿರೇಮಗಳೂರು ಕಣ್ಣನ್ ನುಡಿದರು.



ಪ್ರತಿಭಟನೆ

‘ಕಬ್ಬನ್ ಉದ್ಯಾನದೊಳಗೆ ತಿಂಗಳ ಎರಡನೇ ಹಾಗೂ ನಾಲ್ಕನೇ ಶನಿವಾರದಂದು ವಾಹನಗಳ ಸಂಚಾರಕ್ಕೆ ಅವಕಾಶ ನೀಡಿರುವ ಆದೇಶವನ್ನು ಹಿಂಪಡೆಯಬೇಕು. ಚುನಾವಣಾ ಆಯೋಗದ ಪುರಾತನ ಕಟ್ಟಡ ಸ್ಥಳದಲ್ಲಿ ಬಹುಮಹಡಿ ಕಟ್ಟಡ ನಿರ್ಮಿಸಬಾರದು’ ಎಂದು ಆಗ್ರಹಿಸಿ ಕಬ್ಬನ್ ಉದ್ಯಾನ ನಡಿಗೆದಾರರ ಸಂಘದ ಸದಸ್ಯರು ಭಾನುವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಬಾವಿ ಮುಚ್ಚಲು ಸೂಚನೆ: ಆಕ್ರೋಶ

ಪ್ರಜಾವಾಣಿ ವಾರ್ತೆ

ಶಿರಸಿ: ಅಂಗನವಾಡಿ ಮಕ್ಕಳಿಗೆ ನೀರಿನ ವ್ಯವಸ್ಥೆಗೆ ಪೂರಕವಾಗಿ ಒಂಟಿಯಾಗಿ ಬಾವಿ ತೋಡುತ್ತಿದ್ದ ಇಲ್ಲಿನ ಗಣೇಶನಗರದ ಗೌರಿ ನಾಯ್ಕ ಅವರಿಗೆ ತೋಡುತ್ತಿರುವ ಬಾವಿ ಮುಚ್ಚುವಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸೂಚನೆ ನೀಡಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಿಡಿಪಿಒ ಹಾಗೂ ಸೂಪರ್‌ವೈಸರ್ ಸ್ಥಳಕ್ಕೆ ಭೇಟಿ ನೀಡಿ ಬಾವಿ ತೋಡುವುದನ್ನು ನಿಲ್ಲಿಸಿ, ಮುಚ್ಚುವಂತೆ ಸೂಚಿಸಿದ್ದಾಗಿ ಗೌರಿ ನಾಯ್ಕ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

'ಅಂಗನವಾಡಿಯ ಹಿಂದೆ ಬಾವಿ ತೋಡುವ ಬಗ್ಗೆ ಸ್ಥಳೀಯ ಗ್ರಾಮ ಪಂಚಾಯಿತಿಯಿಂದ ಅನುಮತಿ ದೊರಕಿತ್ತು. ಬಾಲ ವಿಕಾಸ ಸಮಿತಿಯಲ್ಲೂ ಬಾವಿ ತೋಡುವ ಬಗ್ಗೆ ಠರಾವು ಮಾಡಲಾಗಿತ್ತು. ಜತೆಗೆ, ಬಾವಿ ತೋಡುತ್ತಿರುವ ಬಗ್ಗೆ ಅಧಿಕಾರಿಗಳಿಗೆ ತಿಳಿಸಲಾಗಿತ್ತು. ಆದರೆ, ಇದೀಗ ಇಲಾಖೆಗೆ ಪತ್ರ ಬರೆದು ಅನುಮತಿ ಪಡೆದುಕೊಂಡಿಲ್ಲ ಎಂಬ ಕಾರಣ ನೀಡಿ ಬಾವಿ ತೋಡಲು ಅಡ್ಡಗಾಲು ಹಾಕುತ್ತಿರುವುದು ಸರಿಯಲ್ಲ’ ಎಂದು ಅವರು ಹೇಳಿದರು.



ಶಿರಸಿಯ ಗಣೇಶನಗರ ಅಂಗನವಾಡಿ ಕೇಂದ್ರ 6ರ ಬಳಿ ತಾವು ತೋಡುತ್ತಿರುವ ಬಾವಿಯ ಬಳಿ ನಿಂತಿರುವ ಗೌರಿ ನಾಯ್ಕ

‘ಅಂಗನವಾಡಿ ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಇಲಾಖೆ ಉಪನಿರ್ದೇಶಕಿ ಹುಲಿಗೆಮ್ಮ ಅವರ ಆದೇಶದ ಹಿನ್ನೆಲೆಯಲ್ಲಿ ಬಾವಿ ತೋಡುವುದನ್ನು ನಿಲ್ಲಿಸಬೇಕು, ಯಥಾ ಸ್ಥಿತಿ ಕಾಪಾಡಿಕೊಳ್ಳಬೇಕು ಎಂದು ಸೂಚಿಸಲಾಗಿದೆ. ಬಾವಿಯ ಸುತ್ತ ರಕ್ಷಣೆ ಜತೆ ಸೂಕ್ತ ಅನುಮತಿ ಪಡೆದುಕೊಂಡರೆ ಬಾವಿ ತೆಗೆಯಲು ತೊಂದರೆಯಿಲ್ಲ’ ಎನ್ನುತ್ತಾರೆ ಸಿಡಿಪಿಒ ವೀಣಾ ಶಿರ್ಸಿಕರ್.

ಕಳೆದ ಎರಡು ವಾರಗಳಿಂದ ಗೌರಿ ನಾಯ್ಕ ಗಣೇಶನಗರದ ಅಂಗನವಾಡಿ ಕೇಂದ್ರ–6ರ ಹಿಂದುಗಡೆ ಒಂಟಿಯಾಗಿ ಬಾವಿ ತೋಡುವ ಕಾರ್ಯದಲ್ಲಿ ತೊಡಗಿದ್ದರು.

‘ಪ್ರಕೃತಿಯೆಡೆಗೆ ನಮ್ಮ ನಡಿಗೆ’ಗೆ ಚಾಲನೆ

ನಡಿಗೆದಾರರಿಗೆ ಕೃಷಿ ಮೌಲ್ಯವರ್ಧಿತ ಉತ್ಪನ್ನಗಳು, ಸಮಗ್ರ ಕೃಷಿಯ ಅರಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವತಿಯಿಂದ ಜಿ.ಕೆ.ವಿ.ಕೆ ಆವರಣದಲ್ಲಿ ಆಯೋಜಿಸಿದ್ದ ‘ಪ್ರಕೃತಿಯೆಡೆಗೆ ನಮ್ಮ ನಡಿಗೆ’ ಕಾರ್ಯಕ್ರಮಕ್ಕೆ ಭಾನುವಾರ ಚಾಲನೆ ದೊರೆಯಿತು. ನಡಿಗೆಯಲ್ಲಿ ವೃದ್ಧರು, ಯುವಕರು ಹಾಗೂ ಮಕ್ಕಳು ಪಾಲ್ಗೊಂಡಿದ್ದರು.

ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ.ಸುರೇಶ್ ಮಾತನಾಡಿ, ‘ರಾಷ್ಟ್ರದ ಕೃಷಿ ವಿಶ್ವವಿದ್ಯಾಲಯಗಳ ಇತಿಹಾಸದಲ್ಲಿಯೇ ಪ್ರಥಮಬಾರಿಗೆ ಈ ರೀತಿಯ ವಿನೂತನ ಕಾರ್ಯಕ್ರಮ ಆಯೋಜಿಸಲಾಗಿದೆ’ ಎಂದು ಹೇಳಿದರು.

‘ಈ ಕಾರ್ಯಕ್ರಮಕ್ಕೆ ನೋಂದಾಯಿಸಿಕೊಂಡಿದ್ದ 125 ಮಂದಿ ಪಾಲ್ಗೊಂಡಿದ್ದರು. ಕೃಷಿಯ ಜೊತೆಗೆ ಪ್ರಕೃತಿಯ ಕಾಳಜಿಯೂ ಮುಖ್ಯ. ಈ ವಿನೂತನ ಕಾರ್ಯಕ್ರಮದಿಂದ ಕೃಷಿಯತ್ತ ಕಾಳಜಿ ಮೂಡಲು ಸಾಧ್ಯವಾಗಲಿದೆ’ ಎಂದು ಹೇಳಿದರು.



ನಡಿಗೆದಾರರಿಗೆ ಕೃಷಿ ಉತ್ಪನ್ನಗಳ ಕುರಿತು ಜಾಗೃತಿ ಮೂಡಿಸಲಾಯಿತು.

‘ಪ್ರಕೃತಿಯೆಡೆಗೆ ನಮ್ಮ ನಡಿಗೆ’ ಕಾರ್ಯಕ್ರಮದಲ್ಲಿ ಕೃಷಿ ಮೌಲ್ಯವರ್ಧಿತ ಉತ್ಪನ್ನಗಳು, ಸಿರಿಧಾನ್ಯಗಳ ತಿಂಡಿಗಳು, ಔಷಧೀಯ ಗಿಡಗಳು, ಒಣ ಬೇಸಾಯ ಪದ್ಧತಿ, ವಿವಿಧ ತಳಿಯ ಬಿತ್ತನೆಬೀಜಗಳು, ಮಣ್ಣುರಹಿತ ಕೃಷಿ, ಜೇನು ಸಾಕಾಣಿಕೆ, ಸಮಗ್ರ ಕೃಷಿ ಪದ್ಧತಿಯ ಬಗ್ಗೆ ಅರಿವು ಮೂಡಿಸಲಾಗುವುದು. ಈ ರೀತಿಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದರಿಂದ ಆರೋಗ್ಯ ವೃದ್ಧಿಯ ಜತೆಗೆ ಜ್ಞಾನಾರ್ಜನೆಯೂ ಆಗಲಿದೆ’ ಎಂದರು.

‘ಮುಂದಿನ ದಿನಗಳಲ್ಲಿ ಪ್ರತಿ ಭಾನುವಾರ ನಡಿಗೆ ಕಾರ್ಯಕ್ರಮ ಆಯೋಜಿಸಲು ಚಿಂತಿಸಲಾಗಿದೆ. 50 ಜನಕ್ಕೆ ಸೀಮಿತಗೊಳಿಸಿ ಕಾರ್ಯಕ್ರಮ ನಡೆಸಲಾಗುವುದು’ ಎಂದು ಹೇಳಿದರು.


ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರದ ನಿಯಂತ್ರಕ ಎನ್.ಎಸ್. ಗೋವಿಂದರಾಜ್, ಕೃಷಿ ವಿ.ವಿ ಹಿರಿಯ ವಾರ್ತಾತಜ್ಞ ಕೆ.ಶಿವರಾಮ್, ವಿಸ್ತರಣಾ ನಿರ್ದೇಶಕ ವಿ.ಎಲ್.ಮಧುಪ್ರಸಾದ್, ಕೌಶಲ್ಯಾಭಿವೃದ್ಧಿ ಕೇಂದ್ರದ ನಿರ್ದೇಶಕ ಸಿದ್ದಯ್ಯ, ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರದ ಮುಖ್ಯಸ್ಥ ಕೆ.ಪಿ.ರಘುಪ್ರಸಾದ್ ಪಾಲ್ಗೊಂಡಿದ್ದರು.

ಮುಳ್ಳಯ್ಯನಗಿರಿ ಸಾಲಿನಲ್ಲಿ ಬೆಂಕಿ

ಚಿಕ್ಕಮಗಳೂರು: ಮುಳ್ಳಯ್ಯನಗಿರಿ ಸಾಲಿನ ಚೆನ್ನಗೊಂಡನಹಳ್ಳಿ ಅರಣ್ಯದಲ್ಲಿ ಬೆಂಕಿ ಹೊತ್ತಿಕೊಂಡಿದ್ದು, ಬೆಂಕಿ ನಂದಿಸಲು ಅರಣ್ಯ ಮತ್ತು ಅಗ್ನಿ ಶಾಮಕ ಸಿಬ್ಬಂದಿ ಭಾನುವಾರ ಪ್ರಯತ್ನಿಸಿದರು.

ಚಂದ್ರದ್ರೋಣ ಪರ್ವತ ಸಾಲಿನ ಮುಳ್ಳಯ್ಯನಗಿರಿಗೆ ಹೊಂದಿಕೊಂಡಿರುವ ಈ ಪ್ರದೇಶದಲ್ಲಿ ದಿಢೀರ್ ಹೊತ್ತಿಕೊಂಡಿದೆ. ಬೆಂಕಿ ಗುಡ್ಡದಲ್ಲಿ ಬೆಳೆದಿರುವ ಹುಲ್ಲುಗಾವಲು ಮತ್ತು ಕುರುಚಲು ಗಿಡ ಇರುವ ಜಾಗದಲ್ಲೇ ಹೆಚ್ಚು ಹರಡಿಕೊಂಡಿದೆ. ಬಿಸಿಲ ಧಗೆ ಮತ್ತು ಗಾಳಿಯಿಂದ ಬೆಂಕಿ ಹೆಚ್ಚಿನ ಪ್ರದೇಶಕ್ಕೆ ವ್ಯಾಪಿಸಿತು. ಗುಡ್ಡದ ಮೇಲೆ ಕ್ಲಿಷ್ಟಕರ ಪ್ರದೇಶದಲ್ಲಿ ಬೆಂಕಿ ಆವರಿಸಿದ್ದು, ಅಗ್ನಿ ಶಾಮಕ ದಳದ ಸಿಬ್ಬಂದಿಗಳು ಸ್ಥಳಕ್ಕೆ ತೆರಳಿದ್ದರು ಬೆಂಕಿ ನಂದಿಸಲು ಪರದಾಡಿದರು. .

ಬೆಂಕಿಯ ಕೆನ್ನಾಲಿಗೆ ರಸ್ತೆ ಬದಿಯಲ್ಲೂ ವ್ಯಾಪಿಸಿರುವುದರಿಂದ ಮುಳ್ಳಯ್ಯನಗಿರಿ ಪ್ರದೇಶಕ್ಕೆ ತೆರಳಿದ್ದ ಪ್ರವಾಸಿಗರು ಪರದಾಡಬೇಕಾಯಿತು.



ನೂತನ ಗಿನ್ನೆಸ್ ದಾಖಲೆಗಾಗಿ ಹಾಗೂ ಇಸ್ರೊ ಸಂಸ್ಥೆಗೆ ಗೌರವ ಸಲ್ಲಿಸುವುದಕ್ಕಾಗಿ ನಗರದ ಕಂಠೀರವ ಕ್ರೀಡಾಂಗಣದಲ್ಲಿ ಬಜಾಜ್ ಅಲೈನ್ಸ್ ಭಾನುವಾರ ಆಯೋಜಿಸಿದ್ದ ಪ್ಲಾಂಕಥಾನ್‌ನಲ್ಲಿ ಬಾಲಿವುಡ್ ನಟಿ ತಾಪ್ಸಿ ಪನ್ನು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಪಾವಗಡಕ್ಕೆ ದೆಹಲಿ ಎಸ್‌ಐಟಿ

ಪಾವಗಡ: ಕೇಂದ್ರ ಗೃಹ ಇಲಾಖೆ ಕಾರ್ಯದರ್ಶಿಗೆ ದೂರವಾಣಿ ಕರೆ ಮಾಡಿ ನಿಂದಿಸಿದ ವ್ಯಕ್ತಿಯ ವಿಚಾರಣೆಗೆ ದೆಹಲಿಯಿಂದ ವಿಶೇಷ ಪೊಲೀಸ್ ಅಧಿಕಾರಿಗಳ ತಂಡವೊಂದು ಭಾನುವಾರ ಪಾವಗಡ ತಾಲ್ಲೂಕಿನ ವೆಂಕಟಾಪುರ ಗ್ರಾಮಕ್ಕೆ ಬಂದಿದೆ.

ಸ್ಥಳೀಯ ಪೊಲೀಸರೊಂದಿಗೆ ಬೆಳಗ್ಗೆ ಗ್ರಾಮಕ್ಕೆ ಬಂದ ವಿಶೇಷ ತನಿಖಾ ತಂಡದ ಅಧಿಕಾರಿಗಳು, ನಿರಂಜನ್ (40) ಎಂಬುವರ ಮನೆಗೆ ತೆರಳಿ ವಿಚಾರಣೆ ನಡೆಸಿದರು.

ನಿರಂಜನ್ ಎಂಜಿನಿಯರಿಂಗ್ ಪದವೀಧರರಾಗಿದ್ದು, ನಿರುದ್ಯೋಗಿಯಾಗಿದ್ದಾರೆ. ಸದಾ ಮನೆಯಲ್ಲಿಯೇ ಇರುತ್ತಾರೆ. ನೆರೆ ಹೊರೆಯವರೊಂದಿಗೂ ಹೆಚ್ಚು ಮಾತನಾಡುವುದಿಲ್ಲ ಮತ್ತು ಬೆರೆಯುವುದಿಲ್ಲ ಎಂದು ಗ್ರಾಮಸ್ಥರು ಮಾಹಿತಿ ನೀಡಿದ್ದಾರೆ. ಕೇಂದ್ರ ಗೃಹ ಇಲಾಖೆ ಕಾರ್ಯದರ್ಶಿಗೆ ಶನಿವಾರ ನಿರಂಜನ್ ಕರೆ ಮಾಡಿ ನಿಂದಿಸಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಆದರೆ, ಏನು ನಿಂದಿಸಿದ್ದಾರೆ ಎಂಬ ಮಾಹಿತಿಯನ್ನು ವಿಶೇಷ ತನಿಖಾ ತಂಡ ಬಹಿರಂಗಪಡಿಸಿಲ್ಲ.

ನಿಧನ ವಾರ್ತೆ

ಯಶೋದಮ್ಮ

ರಾಮನಗರ: ತಾಲ್ಲೂಕಿನ ಮಾಜಿ ಕಾಂಗ್ರೆಸ್ ಶಾಸಕ ಸಿ.ಎಂ. ಲಿಂಗಪ್ಪ ಅವರ ಪತ್ನಿ ಯಶೋದಮ್ಮ (75) ಅವರು ಭಾನುವಾರ ನಿಧನರಾದರು. ಅನಾರೋಗ್ಯದಿಂದಾಗಿ ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಗೆ ದಾಖಲಾಗಿದ್ದ ಅವರು, ಚಿಕಿತ್ಸೆಗೆ ಸ್ಪಂದಿಸದೆ ರಾತ್ರಿ ಕೊನೆಯುಸಿರೆಳೆದರು.



ಯಶೋದಮ್ಮ

ಬಿಡದಿ ಹೋಬಳಿಯ ಇಟ್ಟಮಡು ಗ್ರಾಮದವರಾದ ಯಶೋದಮ್ಮ ಅವರಿಗೆ ಪತಿ ಹಾಗೂ ಮೂವರು ಪುತ್ರರಿದ್ದಾರೆ.

ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 1 ಗಂಟೆಗೆ ನೆರವೇರಲಿದೆ ಎಂದು ಮೂಲಗಳು ತಿಳಿಸಿವೆ.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಮೇಲ್ ಮಾಡಿ: peoplesproblem@prajavani.co.in
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

‘ಪಾರ್ಕಿಂಗ್ ಸಮಸ್ಯೆ ಬಗೆಹರಿಸಿ’



ಉದ್ಯಾನದ ಪಕ್ಕದಲ್ಲಿ ಪಾರ್ಕಿಂಗ್ ಮಾಡಿರುವ ದ್ವಿಚಕ್ರ ವಾಹನಗಳು

ರಾಮಾಂಜನೇಯ ನಗರದಲ್ಲಿ ತ್ರಿಕೋನಾಕಾರದಲ್ಲಿ ಒಂದು ಸಣ್ಣ ಉದ್ಯಾನವಿದ್ದು, ಅದರ ಸುತ್ತಲೂ ಒಂದು ಕಿರಿದಾದ ರಸ್ತೆ ಇದೆ. ಈ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ದ್ವಿಚಕ್ರ ಹಾಗೂ ನಾಲ್ಕು ಚಕ್ರಗಳ ವಾಹನಗಳನ್ನು ಪಾರ್ಕಿಂಗ್ ಮಾಡಲಾಗುತ್ತಿದೆ. ಇದರಿಂದ ಇಲ್ಲಿ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಸಂಚಾರ ದಟ್ಟಣೆ ಆಗುತ್ತಿದೆ. ಆದ್ದರಿಂದ, ಸಂಬಂಧ ಪಟ್ಟ ಅಧಿಕಾರಿಗಳು ಕೂಡಲೇ ಇಲ್ಲಿನ ಸಮಸ್ಯೆ ಬಗೆಹರಿಸಬೇಕು.

ಕೆ.ವಿ. ಸೀತಾರಾಮಯ್ಯ, ರಾಮಾಂಜನೇಯ ನಗರ




ಹಾಪ್‌ಕಾಮ್ಸ್ ಮಳಿಗೆ

‘ಹಾಪ್‌ಕಾಮ್ಸ್ ಮಳಿಗೆ ತೆರವುಗೊಳಿಸಿ’

ಕತ್ರಿಗುಪ್ಪೆ ಕೆ.ಎಸ್.ಎನ್ ಉದ್ಯಾನದ ಪಕ್ಕದ 5ನೇ ಮುಖ್ಯರಸ್ತೆಯಲ್ಲಿರುವ ಹಾಪ್‌ಕಾಮ್ಸ್ ಮಳಿಗೆ ಕಳೆದ ಮೂರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿಲ್ಲ. ಆದ್ದರಿಂದ, ಇಲ್ಲಿರುವ ಮಳಿಗೆಯನ್ನು ಸ್ಥಳಾಂತರ ಮಾಡಬೇಕು. ಇಲ್ಲಿರುವ ನಾಲ್ಕು ಅಡಿಯಲ್ಲಿ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಹಾಗೂ ಪಾರ್ಕಿಂಗ್ ಮಾಡಲು ಸಮಸ್ಯೆಯಾಗುತ್ತಿದೆ. ಆದ್ದರಿಂದ, ಬಿಬಿಎಂಪಿ ಕೂಡಲೇ ಈ ಮಳಿಗೆಯನ್ನು ಬೇರೆ ಕಡೆಗೆ ಸ್ಥಳಾಂತರ ಮಾಡಬೇಕು.

ಸುರೇಶ್, ಕತ್ರಿಗುಪ್ಪೆ

‘ಒಳಚರಂಡಿ ಪೈಪ್ ಸರಿಪಡಿಸಿ’



ರುಕ್ಮಿಣಿನಗರದ ಒಳಚರಂಡಿ ಪೈಪ್ ಒಡೆದು ಮೋರಿಗೆ ಹರಿದು ಬಂದಿರುವ ತ್ಯಾಜ್ಯ ನೀರು


ರುಕ್ಮಿಣಿನಗರದ ನಾಗಸಂದ್ರ ಎಚ್‌ಎಂಟಿ ವಾರ್ಡ್ ಸಂಖ್ಯೆ 39ರಲ್ಲಿ ಒಳಚರಂಡಿ ಪೈಪ್ ಒಡೆದ ಕಾರಣ ತ್ಯಾಜ್ಯ ನೀರು ಮೋರಿಯಲ್ಲಿ ಶೇಖರಣೆಯಾಗುತ್ತಿದೆ. ಇದರಿಂದ, ಇಡೀ ಪ್ರದೇಶವೇ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿಯೂ ಮಾರ್ಪಟ್ಟಿದೆ. ಇದರಿಂದ ಡೆಂಗಿ, ಮಲೇರಿಯಾ ರೋಗಗಳು ಹರಡುವ ಭೀತಿ ಶುರುವಾಗಿದೆ. ಈ ಬಗ್ಗೆ ಸ್ಥಳೀಯ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಸ್ಪಂದಿಸುತ್ತಿಲ್ಲ. ಕೂಡಲೇ ಈ ಸಮಸ್ಯೆ ಬಗೆಹರಿಸಬೇಕು.

ಶಾಂತ, ರುಕ್ಮಿಣಿನಗರ


‘ಸ್ಕೈವಾಕ್‌ಗಿರಲಿ ಬೆಳಕಿನ ವ್ಯವಸ್ಥೆ’

ಹೆಬ್ಬಾಳದ ಎಸ್ಟೀಮ್ ಮಾಲ್ ಬಳಿ ಇರುವ ಸ್ಕೈವಾಕ್‌ನಲ್ಲಿ ಬೆಳಕಿನ ವ್ಯವಸ್ಥೆ ಇಲ್ಲದ ಕಾರಣ ರಾತ್ರಿ ಸಮಯದಲ್ಲಿ ಸಾರ್ವಜನಿಕರು ಓಡಾಡಲು ಭಯಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಈ ರಸ್ತೆಯಲ್ಲಿ ಪ್ರತಿನಿತ್ಯ ಸಾವಿರಾರೂ ವಾಹನಗಳು ಸಂಚರಿಸುತ್ತವೆ. ರಾತ್ರಿ ಸಮಯದಲ್ಲಿ ಸ್ಕೈವಾಕ್‌ನಲ್ಲಿ ಬೆಳಕಿನ ವ್ಯವಸ್ಥೆ ಇಲ್ಲದ ಕಾರಣ ಜೀವಭಯದಲ್ಲಿ ಮುಖ್ಯರಸ್ತೆಯ ಮೂಲಕವೇ ಹಾದು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ಈ ಸ್ಕೈವಾಕ್‌ಗೆ ದೀಪಗಳನ್ನು ಅಳವಡಿಸಿ, ಲಿಫ್ಟ್ ವ್ಯವಸ್ಥೆಯನ್ನು ಕಲ್ಪಿಸಬೇಕು.

ಶಿವಪ್ರಸಾದ್, ಹೆಬ್ಬಾಳ



ಎಸ್ಟೀಮ್ ಮಾಲ್ ಸಮೀಪದ ಸ್ಕೈವಾಕ್‌ನಲ್ಲಿ ಬೆಳಕಿನ ವ್ಯವಸ್ಥೆ ಇಲ್ಲದಿರುವುದು



ಕನಕನಗರದ ಪಾದಚಾರಿ ಮಾರ್ಗದಲ್ಲಿ ಹಾಕಿರುವ ಮಣ್ಣು

‘ರಸ್ತೆ ದುರಸ್ತಿಯಾಗಲಿ’

ಹೆಬ್ಬಾಳ ವಿಧಾನಸಭೆ ಕ್ಷೇತ್ರದ ಕನಕನಗರ 11ಎ ಕ್ರಾಸ್‌ನ ರಸ್ತೆಯಲ್ಲಿ ಪೈಪ್ ಜೋಡಣೆಗಾಗಿ ರಸ್ತೆ ಅಗೆಯಲಾಗಿತ್ತು. ಹೊಸ ಪೈಪ್ ಜೋಡಿಸಿದ ನಂತರವೂ ರಸ್ತೆ ದುರಸ್ತಿಗೊಳಿಸದೇ ಹಾಗೆ ಬಿಡಲಾಗಿದೆ. ಕಾಂಕ್ರೀಟ್ ರಸ್ತೆ ಅಗೆದು ತೆಗೆದ ಮಣ್ಣನ್ನು ಪಾದಚಾರಿ ಮಾರ್ಗದಲ್ಲಿ ಹಾಕಲಾಗಿದೆ. ಈ ರಸ್ತೆಯು ಅತ್ಯಂತ ಕಿರಿದಾಗಿದ್ದು, ವಾಹನ ಸವಾರರು ಹಾಗೂ ಪಾದಚಾರಿಗಳ ಸಂಚಾರಕ್ಕೆ ತೊಂದರೆ ಆಗಿದೆ. ಬಿಬಿಎಂಪಿ ಕೂಡಲೇ ಇಲ್ಲಿನ ರಸ್ತೆಯನ್ನು ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ನೀಡಬೇಕು.

ಎಲ್. ಚಿನ್ನಪ್ಪ, ಕನಕನಗರ

ಸತತ ಮೂರು ತಾಸು ಸಭೆ ನಡೆಸಿದ ಬಿಜೆಪಿಯ 'ಚಾಣಕ್ಯ' • ಲೋಕಸಭಾ ಚುನಾವಣೆಗೆ ಸಿದ್ಧತೆ

ಸಿ.ಎಂ ತವರಲ್ಲಿ ಶಾ ಚುನಾವಣಾ ರಣತಂತ್ರ

ಪ್ರಜಾವಾಣಿ ವಾರ್ತೆ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ತವರಿನಲ್ಲಿ ಭಾನುವಾರ ಸತತ ಮೂರು ತಾಸು ಸಭೆ ನಡೆಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಲೋಕಸಭಾ ಚುನಾವಣೆಗೆ ರಣಕಹಳೆ ಮೊಳಗಿಸಿದರು. ರಣತಂತ್ರಗಳ ಬಗ್ಗೆ ಪಕ್ಷದ ರಾಜ್ಯ ನಾಯಕರಿಗೆ ಪಾಠ ಮಾಡಿದರು. ಪಕ್ಷವನ್ನು ಮತ್ತೊಮ್ಮೆ ಅಧಿಕಾರಕ್ಕೆ ತರಲು ಮುನಿಸು ಬದಿಗಿಟ್ಟು ಎಲ್ಲರೂ ಒಗ್ಗಟ್ಟಿನಿಂದ ದುಡಿಯುವಂತೆ ಕಿವಿ ಹಿಂಡಿದರು.

ಇಲ್ಲಿನ ಖಾಸಗಿ ಹೋಟೆಲ್‌ನಲ್ಲಿ ಪಕ್ಷದ ನಾಯಕರೊಟ್ಟಿಗೆ ಸಭೆ ನಡೆಸಿದ ಅವರು, ಕಾಂಗ್ರೆಸ್ ಸರ್ಕಾರದ ವೈಫಲ್ಯಗಳನ್ನೇ ಮುಂದಿಟ್ಟುಕೊಂಡು ಚುನಾವಣೆಯಲ್ಲಿ ಕೈ ಪಡೆಯನ್ನು ಹಣಿಯಬೇಕು ಎಂದು ನಿರ್ದೇಶನ ನೀಡಿದ್ದಾರೆ.

ದೆಹಲಿಯಲ್ಲಿ ಪ್ರತಿಭಟನೆ ನಡೆಸುವ ಮೂಲಕ ಕೇಂದ್ರ ಸರ್ಕಾರದ ಮಾನ ಕಳೆಯುವ ಪ್ರಯತ್ನ ನಡೆಸಿದ ಕಾಂಗ್ರೆಸ್‌ಗೆ ಅವರದ್ದೇ ಹಾದಿಯಲ್ಲಿ ತಿರುಗೇಟು ನೀಡಬೇಕು. ಕಳೆದ ಹತ್ತು ವರ್ಷಗಳಲ್ಲಿ ಕರ್ನಾಟಕಕ್ಕೆ ಕೇಂದ್ರ ನೀಡಿರುವ ಅನುದಾನವನ್ನು ಅಂಕಿ–ಅಂಶ ಸಮೇತ ಜನರ ಮುಂದಿಡಬೇಕು. ಬಿಜೆಪಿ–ಜೆಡಿಎಸ್ ಮೈತ್ರಿಕೂಟವು ರಾಜ್ಯದ 28 ಕ್ಷೇತ್ರಗಳಲ್ಲೂ ಗೆಲ್ಲಬೇಕು ಎಂದು ಸೂಚನೆ ನೀಡಿದ್ದಾರೆ.

ಖಾಸಗಿ ಮಾತುಕತೆ ನಂತರ: ಮೊದಲಿಗೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹಾಗೂ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಜೊತೆ ಕೊಠಡಿಯಲ್ಲಿ ಖಾಸಗಿಯಾಗಿ ಮಾತುಕತೆ ನಡೆಸಿದರು. ನಂತರ ಪ್ರಮುಖರ ಸಮಿತಿ ಸಭೆಯಲ್ಲಿ ನಿಕಟಪೂರ್ವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ, ಬಿ.ವೈ. ವಿಜಯೇಂದ್ರ, ಬಿ.ಶ್ರೀರಾಮುಲು, ನಳಿನ್‌ಕುಮಾರ್ ಕಟೀಲ್, ಕೆ.ಎಸ್. ಈಶ್ವರಪ್ಪ, ಸಿ.ಟಿ. ರವಿ, ಡಿ.ವಿ.ಸದಾನಂದ ಗೌಡ, ರಮೇಶ್ ಜಾರಕಿಹೊಳಿ, ಕೆ.ಜಿ. ಬೋಪಯ್ಯ, ಅಪ್ಪಚ್ಚು ರಂಜನ್, ಪ್ರತಾಪ ಸಿಂಹ ಅವರನ್ನು ಒಳಗೊಂಡು 15 ಮಂದಿಯಷ್ಟೇ ಪಾಲ್ಗೊಂಡರು.

ಲೋಕಸಭಾ ಚುನಾವಣೆ ಪ್ರಚಾರದ ತಂತ್ರಗಳ ಬಗ್ಗೆ ಹೆಚ್ಚು ಚರ್ಚೆಯಾಯಿತು. ಪ್ರಚಾರದ ನೀಲ ನಕ್ಷೆ ಕುರಿತು ಶಾ ರಾಜ್ಯ ಮುಖಂಡರಿಂದ ಮಾಹಿತಿ ಪಡೆದು ಕೆಲವು ಸೂಚನೆಗಳನ್ನು ನೀಡಿದರು. ಇದೇ ತಿಂಗಳ 16ರಿಂದ 18ರವರೆಗೆ ಬಿಜೆಪಿ ರಾಷ್ಟ್ರೀಯ ಅಧಿವೇಶನ ಇದ್ದು, ನಂತರ ಮತ್ತೊಂದು ಪ್ರಮುಖರ ಸಮಿತಿ ಸಭೆ ನಡೆಸಿ ರೂಪುರೇಷೆ ಅಂತಿಮಗೊಳಿಸಲು ಶಾ ಸೂಚಿಸಿದರು ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಚುನಾವಣಾ ಅಧಿಸೂಚನೆ ಪ್ರಕಟಗೊಂಡ ಬಳಿಕವೇ ಅಭ್ಯರ್ಥಿಗಳ ಪಟ್ಟಿ ಪ್ರಕಟ ಆಗಲಿದ್ದು, ಪಕ್ಷದ ಸಂಸದೀಯ ಮಂಡಳಿಯು ಅಭ್ಯರ್ಥಿಗಳ ಆಯ್ಕೆ ಮಾಡಲಿದೆ. ಯಾರೇ ಅಭ್ಯರ್ಥಿಯಾದರೂ ಎಲ್ಲರೂ ಒಟ್ಟಾಗಿ ದುಡಿಯುವಂತೆ ನೋಡಿಕೊಳ್ಳಬೇಕು. ಯಾವ ಕ್ಷೇತ್ರದಲ್ಲೂ ಬಂಡಾಯಕ್ಕೆ ಅವಕಾಶ ನೀಡಬಾರದು ಎಂದು ಶಾ ತಾಕೀತು ಮಾಡಿದರು.

ಕ್ಲಸ್ಟರ್ ಸಭೆ: ನಂತರ ನಡೆದ ಮೈಸೂರು ಕ್ಲಸ್ಟರ್ ಮಟ್ಟದ ಸಭೆಯಲ್ಲಿ ಮೈಸೂರು–ಕೊಡಗು, ಚಾಮರಾಜನಗರ, ಹಾಸನ ಹಾಗೂ ಮಂಡ್ಯ ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯ ಶಾಸಕರು, ಪರಿಷತ್ ಸದಸ್ಯರು, ಪಕ್ಷದ ಮುಖಂಡರು ಸೇರಿ ನೂರಕ್ಕೂ ಹೆಚ್ಚು ಮಂದಿ ಪಾಲ್ಗೊಂಡರು.

'ಜೆಡಿಎಸ್‌ಗೆ ಕ್ಷೇತ್ರಗಳನ್ನು ಬಿಟ್ಟುಕೊಡುವ ಬಗ್ಗೆ ಹಾಗೂ ಅಭ್ಯರ್ಥಿಗಳ ಆಯ್ಕೆ ಬಗ್ಗೆ ಸಭೆಯಲ್ಲಿ ಯಾವುದೇ ಚರ್ಚೆ ನಡೆಯಲಿಲ್ಲ. ಆದರೆ, ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು' ಎಂದು ಬಿಜೆಪಿ ನಾಯಕರೊಬ್ಬರು ತಿಳಿಸಿದರು.



ಕೇಂದ್ರ ಗೃಹ ಸಚಿವ ಅಮಿತ್ ಶಾ ಮೈಸೂರಿನ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯಕ್ಕೆ ಭಾನುವಾರ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಜೊತೆಗಿದ್ದರು

'ಮೈತ್ರಿ ಬಗ್ಗೆ ಅಪಸ್ವರ ಎತ್ತಬೇಡಿ'

ಲೋಕಸಭೆ ಚುನಾವಣೆಗೆ ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಂಡಿರುವ ಬಗ್ಗೆ ಅಪಸ್ವರ ಎತ್ತಿದ ನಾಯಕರಿಗೆ ಶಾ ಖಡಕ್ ಎಚ್ಚರಿಕೆ ನೀಡಿದರು.

'ಮೈತ್ರಿ ಬಗ್ಗೆ ಯಾರೂ ಅಪಸ್ವರ ಎತ್ತಬಾರದು. ಸಮನ್ವಯದಿಂದ ಕೆಲಸ ಮಾಡಬೇಕು. ಹೆಚ್ಚು ಸ್ಥಾನಗಳನ್ನು ಗೆಲ್ಲುವುದಷ್ಟೆ ಗುರಿಯಾಗಬೇಕು' ಎಂದು ತಾಕೀತು ಮಾಡಿದರು ಎಂದು ಮೂಲಗಳು ತಿಳಿಸಿವೆ.

'28 ಕ್ಷೇತ್ರಗಳಲ್ಲೂ ಗೆಲ್ಲಲು ಸೂಚನೆ'

'ಮುಂಬರುವ ಚುನಾವಣೆಯಲ್ಲಿ ರಾಜ್ಯದ 28 ಕ್ಷೇತ್ರಗಳಲ್ಲೂ ಗೆಲ್ಲಲು ಅಮಿತ್ ಶಾ ಸೂಚಿಸಿದ್ದು, ಅದರಂತೆ ಕಾರ್ಯತಂತ್ರ ರೂಪಿಸಲಿದ್ದೇವೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಸಭೆಯ ಬಳಿಕ ಪತ್ರಕರ್ತರ ಜೊತೆ ಮಾತನಾಡಿದ ಅವರು, 'ಮೋದಿ ಜನಪ್ರಿಯತೆಯನ್ನು ಮತವಾಗಿ ಪರಿವರ್ತಿಸುವುದು ಹಾಗೂ ಪ್ರತಿ ಬೂತ್‌ನಲ್ಲಿ ಕನಿಷ್ಠ ಶೇ 10ರಷ್ಟು ಮತ ಹೆಚ್ಚಳಕ್ಕೆ ಕಾರ್ಯತಂತ್ರದ ಕುರಿತು ಕೇಂದ್ರ ಸಚಿವ ಅಮಿತ್ ಶಾ ಸಲಹೆ ನೀಡಿದ್ದಾರೆ' ಎಂದರು. ' ಸೀಟು ಹಂಚಿಕೆ ಬಗ್ಗೆ ಪ್ರಮುಖರು ದೆಹಲಿ ಮಟ್ಟದಲ್ಲಿ ಚರ್ಚಿಸಲಿದ್ದಾರೆ. ಅಭ್ಯರ್ಥಿ ಆಯ್ಕೆ ಹಾಗೂ ಜೆಡಿಎಸ್ ಜೊತೆ ಕ್ಷೇತ್ರ ಹಂಚಿಕೆ ಕುರಿತು ಯಾವುದೇ ಚರ್ಚೆ ನಡೆಯಲಿಲ್ಲ' ಎಂದರು.

ಕ್ಷೇತ್ರಗಳಲ್ಲಿ 'ಪ್ಲಸ್–ಮೈನಸ್': ಶಾ ಪ್ರಶ್ನೆ

'ಕರ್ನಾಟಕದಲ್ಲಿ 28 ಸ್ಥಾನಗಳನ್ನು ಗೆಲ್ಲುವ ವಾತಾವರಣವಿದೆ. ಆದರೆ, ಪ್ರತಿಯೊಂದು ಲೋಕಸಭಾ ಕ್ಷೇತ್ರದಲ್ಲೂ ಪಕ್ಷಕ್ಕಿರುವ ಅನುಕೂಲಕರ ಮತ್ತು ನಕಾರಾತ್ಮಕ ಅಂಶಗಳು ಯಾವುವು ಎಂಬುದು ನಿಮ್ಮ ಗಮನಕ್ಕೆ ಬಂದಿವೆಯೇ, ಬಂದಿದ್ದರೆ ಹೇಳಿ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಪಕ್ಷದ ಪ್ರಮುಖ ನಾಯಕರ ಸಮಿತಿ ಸಭೆಯಲ್ಲಿ ಪ್ರಶ್ನಿಸಿದರು.

ಆಗ ಕೆಲವು ನಾಯಕರು ರಾಮಮಂದಿರ, ಕಾಶ್ಮೀರದಲ್ಲಿ 370 ನೇ ವಿಧಿ ರದ್ದು ಮಾಡಿರುವುದು ಮತ್ತು ಅಭಿವೃದ್ಧಿ ಕಾರ್ಯಗಳ ಪಟ್ಟಿ ಮುಂದಿಟ್ಟು, ಈ ಅಂಶಗಳು ಗೆಲುವಿಗೆ ಅನುಕೂಲವಾಗುತ್ತವೆ ಎಂದರು. ಆಗ ಶಾ ಅವರು, 'ಅವೆಲ್ಲ ನಮಗೆ ಪ್ಲಸ್ ಎನ್ನುವುದು ಗೊತ್ತೇ ಇದೆ. ಕ್ಷೇತ್ರಗಳಲ್ಲಿ ಪಕ್ಷದ ಗೆಲುವಿಗಿರುವ ಸಮಸ್ಯೆಗಳೇನು ಎಂಬುದನ್ನು ಗಮನಿಸಿದ್ದೀರಾ' ಎಂದು ಶಾ ಮರು ಪ್ರಶ್ನೆ ಹಾಕಿದರು.

'ಗೆಲುವಿಗೆ ತೊಡಕಾಗಬಹುದಾದ ಸಮಸ್ಯೆಗಳು ಯಾವುವು ಮತ್ತು ಅವುಗಳಿಗೆ ಪರಿಹಾರಗಳೇನು ಎಂಬುದನ್ನು ಮೊದಲಿಗೆ ತಿಳಿದುಕೊಳ್ಳಿ. ಆ ಬಗ್ಗೆ ಚರ್ಚೆ ಮಾಡಿ. ಎರಡು ಜಿಲ್ಲೆಗಳಿಗೆ ಒಬ್ಬ ಪ್ರಮುಖರು ಪ್ರವಾಸ ಮಾಡಿ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಬನ್ನಿ' ಎಂದೂ ಶಾ ಅವರು ಸಲಹೆ ನೀಡಿದರು.

'ಅಭ್ಯರ್ಥಿಗಳ ಬಗ್ಗೆ ಹೆಚ್ಚಿಗೆ ತಲೆಕೆಡಿಸಿಕೊಳ್ಳಬೇಡಿ. ಸಮರ್ಥರನ್ನೇ ಆಯ್ಕೆ ಮಾಡುತ್ತೇವೆ. ತಳ ಮಟ್ಟದಲ್ಲಿ ಒಗ್ಗಟಿನಿಂದ ಕೆಲಸ ಮಾಡಿ ಗೆಲ್ಲಿಸಿಕೊಳ್ಳಬೇಕು' ಎಂದೂ ಹೇಳಿದರು.

ಸುದ್ದಿ 2 ನಿಮಿಷ

'ಸೆಟ್ಲ್‌ಮೆಂಟ್ ಮಾಡುವೆ ಎಂದಿರುವ ಡಿಸಿಎಂ ಗೂಂಡಾ'

ಮೈಸೂರು: 'ನನಗೆ ಸೆಟ್ಲ್‌ಮೆಂಟ್ ಮಾಡುತ್ತೇನೆ ಎಂದು ಹೇಳಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಒಬ್ಬ ಗೂಂಡಾ' ಎಂದು ಬಿಜೆಪಿ ಮುಖಂಡ ಕೆ.ಎಸ್. ಈಶ್ವರಪ್ಪ ತಿರುಗೇಟು ನೀಡಿದರು.

ಇಲ್ಲಿ ಪತ್ರಕರ್ತರೊಂದಿಗೆ ಭಾನುವಾರ ಮಾತನಾಡಿದ ಅವರು, 'ಸೆಟ್ಲ್‌ಮೆಂಟ್ ಮಾಡುತ್ತೇನೆ ಎಂದರೆ ಏನರ್ಥ? ಸಿನಿಮಾದಲ್ಲಿ ಹೇಳುವಂತೆ ಡೈಲಾಗ್ ಹೇಳಿದ್ದಾರೆ' ಎಂದರು.

'ನಾನು ಡಿಸಿಎಂ ಸಹೋದರ ಮತ್ತು ಸಂಸದ ಎಂಬ ದುರಹಂಕಾರದಲ್ಲಿ ಡಿ.ಕೆ. ಸುರೇಶ್ ಪ್ರತ್ಯೇಕ ರಾಷ್ಟ್ರದ ಹೇಳಿಕೆ ನೀಡಿದ್ದರು. ಕೂಡಲೇ ಅವರಿಗೆ ನೋಟಿಸ್ ನೀಡಿ ಬಂಧಿಸಬೇಕಿತ್ತು. ಆದರೆ, ನನಗೆ ನೋಟಿಸ್ ಕೊಟ್ಟಿದ್ದಾರೆ. ಶಿವಕುಮಾರ್ ಅವರು ನನ್ನ ವಿರುದ್ಧ ಗೂಂಡಾಗಳು ಬಳಸುವಂತಹ ಪದ ಪ್ರಯೋಗಿಸಿದ್ದಾರೆ. ಅರ್ಧ ಸೆಟ್ಲ್‌ಮೆಂಟ್ ಮಾಡಿದ್ದೇನೆ, ಪೂರ್ಣ ಮಾಡುತ್ತೇನೆ ಎಂದಿದ್ದಾರೆ' ಎಂದರು.



'ಇಂತಹ ಗೊಡ್ಡು ಬೆದರಿಕೆಗಳಿಗೆ ಹೆದರಿದ್ದರೆ ನಾನು ರಾಜಕಾರಣದಲ್ಲಿ ಇರುತ್ತಿರಲಿಲ್ಲ. ಅವರಿಗೆ ಅರ್ಧ ಸೆಟ್ಲ್‌ಮೆಂಟ್ ಈಗಾಗಲೇ ಆಗಿದ್ದು, ಜಾರಿ ನಿರ್ದೇಶನಾಲಯ ಮಾಡಿದೆ. ಇನ್ನರ್ಧ ಶೀಘ್ರದಲ್ಲೇ ಆಗುತ್ತದೆ. ಜಾಮೀನಿನ ಮೇಲೆ ಹೊರಗಿರುವ ಅವರು, ಮತ್ತೆ ಜೈಲಿಗೆ ಹೋಗೇ ಹೋಗುತ್ತಾರೆ. ಆಗ ಪೂರ್ಣ ಸೆಟ್ಲ್‌ಮೆಂಟ್ ಆಗುತ್ತದೆ' ಎಂದು ಗುಡುಗಿದರು.

ಸಚಿವರ ಪುತ್ರಿಯ ಬೆಳೆ ವಿಮೆ ಹಣ ಬೇರೆ ಖಾತೆಗೆ!

ಮಾನ್ವಿ (ರಾಯಚೂರು ಜಿಲ್ಲೆ): ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಅವರ ಪುತ್ರಿಯ ಹೆಸರಿನಲ್ಲಿರುವ ಜಮೀನಿನ ಬೆಳೆ ವಿಮೆ ಪರಿಹಾರದ ಹಣ ಬೇರೆಯವರ ಖಾತೆಗೆ ಜಮಾ ಆಗಿರುವ ಸಂಗತಿ ಬೆಳಕಿಗೆ ಬಂದಿದ್ದು, ಈ ಕುರಿತು ಗ್ರಾಮದ ಮುಖಂಡರೊಬ್ಬರು ಕೃಷಿ ಇಲಾಖೆಗೆ ದೂರು ನೀಡಿದ್ದಾರೆ.

ಬೋಸರಾಜು ಪುತ್ರಿ ಎನ್.ವಾಣಿ ಹೆಸರಿನಲ್ಲಿ ಭೋಗಾವತಿ ಸೀಮೆಯಲ್ಲಿರುವ 7 ಎಕರೆ 10 ಗುಂಟೆ ಜಮೀನಿನ ಭತ್ತದ ಬೆಳೆಗೆ ₹5,046.31 ವಿಮೆ ಕಂತು ಹಣವನ್ನು ವಾಣಿ ಪಾವತಿಸಿದ್ದರು. ಅದರ ಪರಿಹಾರ ಹಣ ₹1,01,180 ಶರಣಗೌಡ ದೊಡ್ಡಬಸವನಗೌಡ ಪೊಲೀಸ್ ಪಾಟೀಲ ಎಂಬವರ ಖಾತೆಗೆ ಜಮಾ ಆಗಿದೆ. ವಾಣಿ ಅವರ ಹೆಸರಿನಲ್ಲಿರುವ ಮತ್ತೊಂದು ಜಮೀನಿನ ಪರಿಹಾರ ಹಣ ₹1,11,374.6 ಲಕ್ಷ್ಮಿದೇವಿ ಗೌಡಪ್ಪ ಅವರ ಬ್ಯಾಂಕ್ ಖಾತೆಗೆ ಜಮಾ ಆಗಿದೆ ಎಂದು ದೂರುದಾರ ಶಿವಾರ್ಜುನ ನಾಯಕ ತಿಳಿಸಿದ್ದಾರೆ.

ಹೀಗೆ ಒಟ್ಟು ₹2 ಕೋಟಿ ಹಣ ಬೇರೆಯವರ ಬ್ಯಾಂಕ್ ಖಾತೆಗೆ ಜಮಾ ಆಗಿರುವುದು ಪತ್ತೆಯಾಗಿದೆ. ಈ ಕುರಿತು ಅಮರೇಶ್ವರ ಕ್ಯಾಂಪ್‌ನ ಶಿವಾರ್ಜುನ ನಾಯಕ ದಾಖಲೆಗಳ ಸಮೇತ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರಿಗೆ ದೂರು ಸಲ್ಲಿಸಿದ್ದಾರೆ.

ಕಳೆದ ವರ್ಷ ಹಳ್ಳಿಹೊಸೂರು ಮತ್ತು ಮಾಡಗಿರಿ ಗ್ರಾಮಗಳಲ್ಲಿ ಪಿ.ಎಂ. ಫಸಲ್ ಬಿಮಾ ಯೋಜನೆಯ ಹಣ ದುರುಪಯೋಗದ ಕುರಿತು ಕೃಷಿ ಇಲಾಖೆ ಅಧಿಕಾರಿಗಳು ಸಿರವಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಪ್ರಕರಣದ ಕುರಿತು ಸಿಐಡಿ ತನಿಖೆ ನಡೆಯುತ್ತಿರುವ ಹಂತದಲ್ಲಿಯೇ ಅಕ್ರಮ ಪುನರಾವರ್ತನೆಯಾಗಿರುವ ಆರೋಪ ಕೇಳಿ ಬಂದಿದೆ.

ಮಂಡ್ಯ ಟಿಕೆಟ್ ಆಕಾಂಕ್ಷಿಯಲ್ಲ: ನಿಖಿಲ್

ಪ್ರಜಾವಾಣಿ ವಾರ್ತೆ



ನಿಖಿಲ್ ಕುಮಾರಸ್ವಾಮಿ

ಬೆಂಗಳೂರು: 'ಮಂಡ್ಯ ಲೋಕಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ನಾನಲ್ಲ. ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಹಿಂದೆ ನೀಡಿದ್ದ ಹೇಳಿಕೆಗೆ ಬದ್ಧ' ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಪಕ್ಷದ ಕಚೇರಿಯಲ್ಲಿ ಭಾನುವಾರ ಜೆಡಿಎಸ್‌ನ ಡಿಜಿಟಲ್ ವಿಭಾಗದ ಕಾರ್ಯಕರ್ತರ ಸಭೆಗೂ ಮುನ್ನ ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಾನು ಯು ಟರ್ನ್' ಹೊಡೆಯುವ ಗಿರಾಕಿ ಅಲ್ಲ. ನನ್ನ ನಿರ್ಧಾರದಲ್ಲಿ ಸ್ಪಷ್ಟತೆ ಇದೆ. ವದಂತಿಗಳಲ್ಲಿ ಹುರುಳಿಲ್ಲ' ಎಂದರು.

'2019ರ ಲೋಕಸಭಾ ಚುನಾವಣೆಯಲ್ಲಿ ನಾನು ಮಂಡ್ಯ ಕ್ಷೇತ್ರದಲ್ಲಿ ಸ್ಪರ್ಧಿಸಿ, ಸೋತಿದ್ದೆ. ಈಗ ಮಂಡ್ಯದ ಮುಖಂಡರು ಮತ್ತು ಕಾರ್ಯಕರ್ತರು ಸ್ಪರ್ಧೆಗೆ ಒತ್ತಾಯ ಮಾಡಿದ್ದಾರೆ. ಆದರೆ, ನಿಲುವಿನಲ್ಲಿ ಬದಲಾವಣೆ ಇಲ್ಲ' ಎಂದು ಹೇಳಿದರು.

ಮಂಡ್ಯ. ಹಾಸನ ಕ್ಷೇತ್ರ ತಮ್ಮ ಪಕ್ಷಕ್ಕೆ ಲಭಿಸಲಿದೆ ಎಂಬ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಹೇಳಿಕೆ ಕುರಿತು ಪ್ರತಿಕ್ರಿಯಿಸಿ, 'ಬಿಜೆಪಿಯ ಕೇಂದ್ರದ ನಾಯಕರು ಮತ್ತು ನಮ್ಮ ಪಕ್ಷದ ವರಿಷ್ಠರು ಸೇರಿ ಶೀಘ್ರದಲ್ಲಿ ಎಲ್ಲ ಪ್ರಶ್ನೆಗಳಿಗೂ ತೆರೆ ಎಳೆಯುತ್ತಾರೆ. ಅಲ್ಲಿಯವರೆಗೆ ಕಾಯಬೇಕು. ಕಾಲವೇ ಎಲ್ಲದಕ್ಕೂ ಉತ್ತರ ಕೊಡುತ್ತದೆ' ಎಂದರು.

ನಾರಾಯಣಸಾ ಭಾಂಡಗೆ ಬಿಜೆಪಿ ಅಭ್ಯರ್ಥಿ

ಪ್ರಜಾವಾಣಿ ವಾರ್ತೆ



ನಾರಾಯಣಸಾ ಭಾಂಡಗೆ

ಬೆಂಗಳೂರು: ಇದೇ 27ರಂದು ನಡೆಯುವ ರಾಜ್ಯಸಭಾ ಚುನಾವಣೆಗೆ ವಿಧಾನ ಪರಿಷತ್ತಿನ ಮಾಜಿ ಸದಸ್ಯ ನಾರಾಯಣಸಾ ಕೃಷ್ಣಸಾ ಭಾಂಡಗೆ ಅವರನ್ನು ಅಭ್ಯರ್ಥಿಯನ್ನಾಗಿ ಬಿಜೆಪಿ ಪ್ರಕಟಿಸಿದೆ.

ರಾಜ್ಯದಿಂದ ಒಟ್ಟು ನಾಲ್ಕು ಸ್ಥಾನಗಳಿಗೆ ನಡೆಯುವ ಈ ಚುನಾವಣೆಯಲ್ಲಿ ಬಿಜೆಪಿ ತನ್ನ ಶಾಸಕರ ಸಂಖ್ಯಾ ಬಲದಿಂದ ಒಂದು ಸ್ಥಾನವನ್ನು ಗೆದ್ದುಕೊಳ್ಳಬಹುದು. ಉಳಿದ ಮೂರು ಸ್ಥಾನಗಳು ಕಾಂಗ್ರೆಸ್ ಬುಟ್ಟಿಗೆ ಬೀಳಲಿವೆ.

ರಾಜ್ಯಸಭೆಯ ಈ ಸ್ಥಾನಕ್ಕೆ ಒಟ್ಟು ಮೂವರ ಹೆಸರುಗಳ ಪಟ್ಟಿಯನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಸಲ್ಲಿಸಿದ್ದರು. ಈ ಪಟ್ಟಿಯಲ್ಲಿ ವಿ.ಸೋಮಣ್ಣ ಮತ್ತು ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರ ಹೆಸರು ಇತ್ತು ಎಂದು ಮೂಲಗಳು ಹೇಳಿವೆ.

ಆರ್‌ಎಸ್‌ಎಸ್ ಹಾಗೂ ಎಬಿವಿಪಿಯಲ್ಲಿ ಸಕ್ರಿಯರಾಗಿದ್ದರು. ನಂತರ ಬಿಜೆಪಿ ಮೂಲಕ ರಾಜಕೀಯ ಪ್ರವೇಶಿಸಿದ್ದ ನಾರಾಯಣ ಕೃಷ್ಣಸಾ ಭಾಂಡಗೆ ಅವರು ಬಾಗಲಕೋಟೆ ಜಿಲ್ಲೆಯವರು. ಪಕ್ಷದ ಬಾಗಲಕೋಟೆ ಜಿಲ್ಲಾ ಘಟಕ ಮತ್ತು ರಾಜ್ಯ ಘಟಕದಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದರು. ವಿಧಾನಪರಿಷತ್ತಿಗೆ ಒಂದು ಅವಧಿಗೆ ವಿಧಾನಸಭೆಯಿಂದ ಆಯ್ಕೆ ಆಗಿದ್ದರು.

ಹೈಕಮಾಂಡ್‌ಗೆ ನಿಷ್ಠನೇ ಹೊರತು, ಗುಲಾಮನಲ್ಲ: ರಾಜಣ್ಣ

ಪ್ರಜಾವಾಣಿ ವಾರ್ತೆ

ಹಾಸನ: 'ನಾನು ಹೈಕಮಾಂಡ್‌ಗೆ ನಿಷ್ಠನಾಗಿದ್ದು, ಆದೇಶವನ್ನು ಪಾಲಿಸುತ್ತೇನೆ. ಆದರೆ ಗುಲಾಮನಲ್ಲ' ಎಂದು ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ಬೇಲೂರಿನಲ್ಲಿ ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, 'ನನಗೆ ನಾನೇ ಹೈಕಮಾಂಡ್. ನಮ್ಮ ಮತದಾರರಿದ್ದಾರಲ್ಲ ಅವರು ನನಗೆ ಹೈಕಮಾಂಡ್. ರಾಜ್ಯ ಘಟಕದ ಅಧ್ಯಕ್ಷ, ರಾಷ್ಟ್ರೀಯ ಅಧ್ಯಕ್ಷರು ಇದ್ದಾರೆ. ಅವರಿಗೆ ಕೊಡಬೇಕಾದ ಗೌರವ ಕೊಡುತ್ತೇವೆ. ಅವರ ಮಾತು ಯಾವುದು ಕೇಳಬೇಕೋ ಅದನ್ನು ಕೇಳುತ್ತೇವೆ. ಅವರ ಮಾತನ್ನು ಧಿಕ್ಕರಿಸಲ್ಲ' ಎಂದರು.

'ರಾಜಣ್ಣ ಕೆಪಿಸಿಸಿ ಅಧ್ಯಕ್ಷರ ರೀತಿ ಆಡುತ್ತಿದ್ದಾರೆ' ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಅವರ ಅಪ್ಪ ಅಂತ ಹೇಳಿ. ಅದಕ್ಕಿಂತ ಮೇಲೆ ಯಾರಾದರೂ ಇದ್ದರೆ, ಅದಕ್ಕೂ ಅಪ್ಪನೇ. ನನ್ನ ನಡವಳಿಕೆಯನ್ನು ಜನರು ಮೆಚ್ಚಬೇಕಷ್ಟೆ. ಮುಖಂಡರನ್ನು ಮೆಚ್ಚಿಸುವ ನಡವಳಿಕೆ ನನಗೆ ಬೇಕಿಲ್ಲ' ಎಂದರು.

ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಆರೋಪದ ಬಗ್ಗೆ ಪ್ರತಿಕ್ರಿಯಿಸಿ, 'ಯಾರು ಕಮಿಷನ್ ಕೇಳುತ್ತಿದ್ದಾರೆ ಎಂದು ದೂರು ಕೊಡಬೇಕಲ್ಲ?' ಎಂದರು.



ಕುದುರೆ ಓಟ... ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಯಕ್ಸಂಬಾದ ಬೀರೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ಜೊಲ್ಲೆ ಗ್ರೂಪ್ ವತಿಯಿಂದ ಭಾನುವಾರ ಆಯೋಜಿಸಿದ್ದ ಕುದುರೆಗಾಡಿ ಓಟ ಮೈ ನವಿರೇಳುವಂತೆ ಮಾಡಿತು –ಪ್ರಜಾವಾಣಿ ಚಿತ್ರ

'ಸಂವಿಧಾನದಷ್ಟೇ ರಾಮಾಯಣ ಅವಶ್ಯ'

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ದೇಶದಲ್ಲಿ ಸಂವಿಧಾನ ಎಷ್ಟು ಮುಖ್ಯವಾಗಿದೆಯೋ, ರಾಮಾಯಣ ಮತ್ತು ಮಹಾಭಾರತ ಗ್ರಂಥಗಳೂ ಅಷ್ಟೇ ಅವಶ್ಯವಾಗಿದೆ' ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಅಭಿಪ್ರಾಯಪಟ್ಟರು.

ನಗರದಿಂದ ಅಯೋಧ್ಯೆಗೆ ಹೊರಟ ವಿಶೇಷ ರೈಲಿಗೆ ಭಾನುವಾರ ಹಸಿರು ನಿಶಾನೆ ತೋರಿ ಅವರು ಮಾತನಾಡಿದರು.

ರಾಮಾಯಣ ಮತ್ತು ಮಹಾಭಾರತ ಗ್ರಂಥಗಳು ಬಹುಸಂಖ್ಯಾತ ಹಿಂದೂಗಳಿಗೆ ಅತ್ಯವಶ್ಯವಾಗಿವೆ. ಜತೆಗೆ ಅವರ ಜೀವನ ಪದ್ಧತಿಯೂ ಆಗಿವೆ. ಕಾಶಿ ಮತ್ತು ಮಥುರಾಗಳು ಈ ದೇಶದ ಅಸ್ಮಿತೆಯಾಗಿದ್ದು, ಇತರೆ ಧರ್ಮದವರು ಹಿಂದೂಗಳಿಗೆ ಸಹಕಾರ ನೀಡಬೇಕು ಎಂದರು.

ಸ್ಥಳೀಯರಿಗೆ ಟಿಕೆಟ್: 'ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಆಯಾ ಕ್ಷೇತ್ರಗಳಲ್ಲಿ ಸ್ಥಳೀಯರಿಗೆ ಟಿಕೆಟ್ ನೀಡುವುದು ಎಲ್ಲ ಪಕ್ಷಗಳ ಅವಶ್ಯಕತೆಯಾಗಿದೆ' ಎಂದು ಅವರು ಹೇಳಿದರು.

'ಟಿಕೆಟ್ ನೀಡುವ ವಿಚಾರ ಪಕ್ಷದಲ್ಲಿ ಚರ್ಚೆ ಆಗುತ್ತಿದೆ. ನಾನು ಬಿಜೆಪಿಯ ನಿಷ್ಠಾವಂತ ಕಾರ್ಯಕರ್ತನೇ ಹೊರತು, ರಾಜಕಾರಣಿ ಅಲ್ಲ. ನನ್ನನ್ನು ಕೆಣಕಬೇಡಿ. ಪಕ್ಷದ ಬೆಳವಣಿಗೆಯಲ್ಲಿ ನಾನೂ ಒಬ್ಬ. ನಾನು ಎಲ್ಲಿಗೆ ಹೋಗುತ್ತೇನೆ, ಎಲ್ಲಿಗೆ ಬರುತ್ತೇನೆ ಎಂಬುದನ್ನೂ ಕೇಳಬೇಡಿ' ಎಂದು ಸುದ್ದಿಗಾರರನ್ನು ಕೋರಿದರು.

ರೈತರ ಮದುವೆಯಾಗುವ ಕನ್ಯೆಗೆ ₹5 ಲಕ್ಷ

ಮುಖ್ಯಮಂತ್ರಿಗೆ ಮನವಿ: ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಜೆಟ್‌ನಲ್ಲಿ ರೈತರ ಸಂಪೂರ್ಣ ಸಾಲ ಮನ್ನಾ ಮತ್ತು ರೈತರನ್ನು ಮದುವೆಯಾಗುವ ಹೆಣ್ಣು ಮಕ್ಕಳಿಗೆ ₹5 ಲಕ್ಷ ಪ್ರೋತ್ಸಾಹ ಧನ ಘೋಷಿಸುವಂತೆ ಮುಖ್ಯಮಂತ್ರಿಗೆ ಮನವಿ ಮಾಡಿದ್ದೇವೆ' ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಅವರು ತಿಳಿಸಿದರು.

ರಾಜ್ಯದ ರೈತ ಸಂಘ ಸಂಸ್ಥೆಗಳ 200ಕ್ಕೂ ಹೆಚ್ಚು ಪ್ರತಿನಿಧಿಗಳು ಮತ್ತು ರೈತ ಮುಖಂಡರ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾನುವಾರ 2024-25ನೇ ಸಾಲಿನ ಆಯವ್ಯಯ ಪೂರ್ವಭಾವಿ ಚರ್ಚೆ ನಡೆಸಿದರು.

ಸಭೆಯ ಬಳಿಕ ಮಾತನಾಡಿದ ಬಡಗಲಪುರ ನಾಗೇಂದ್ರ, ರೈತರು ಸಾಲದ ಸುಳಿಗೆ ಸಿಲುಕದಂತೆ ಕೃಷಿ ನೀತಿ ರೂಪಿಸಬೇಕು. ಕೃಷಿಗೆ ಬಜೆಟ್‌ನಲ್ಲಿ ಹೆಚ್ಚಿನ ಒತ್ತು ನೀಡಬೇಕು, ಬರಕ್ಕೆ ಶಾಶ್ವತವಾಗಿ ಪರಿಹಾರ ಸಿಗಬೇಕಾದರೆ ಸಣ್ಣ ನೀರಾವರಿಗೆ ಒತ್ತು ಕೊಡಬೇಕು. 10 ವರ್ಷದ ಕಾರ್ಯಯೋಜನೆಯನ್ನು ಘೋಷಿಸಬೇಕೆಂದು ಮನವಿ ಮಾಡಿದ್ದೇವೆ ಎಂದರು.

'ಕೃಷಿಕರ ಮಕ್ಕಳಿಗೆ ಮದುವೆಗೆ ಕನ್ಯೆಯರು ಸಿಗುತ್ತಿಲ್ಲ. ಹೀಗಾಗಿ 45 ವರ್ಷವಾದರೂ ಮದುವೆ ಆಗುತ್ತಿಲ್ಲ. ಇದಕ್ಕೆ ಕಾರಣ ಕೃಷಿಗೆ ಆದ್ಯತೆ ಸಿಗುತ್ತಿಲ್ಲ. ಹೀಗಾಗಿ ರೈತರನ್ನು ಮದುವೆ ಆಗುವ ಕನ್ಯೆಯರಿಗೆ ₹5 ಲಕ್ಷ ಪ್ರೋತ್ಸಾಹ ಧನ ನೀಡುವಂತೆ ಮನವಿ ಮಾಡಿದ್ದೇವೆ. ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಬೇಕು, ಹಿಂದಿನ ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ಭೂ ಸುಧಾರಣಾ ತಿದ್ದುಪಡಿ ಕಾಯ್ದೆಯನ್ನು ಕಾಂಗ್ರೆಸ್ ಪಕ್ಷ ಕೊಟ್ಟ ಮಾತಿನಂತೆ ವಾಪಸ್ ಪಡೆಯಬೇಕು ಎಂದೂ ಒತ್ತಾಯಿಸಿದ್ದೇವೆ' ಎಂದರು.

ಪಶುಸಂಗೋಪನೆ ಸಚಿವ ವೆಂಕಟೇಶ್, ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ, ಮುಖ್ಯಮಂತ್ರಿಯ ಸಲಹೆಗಾರ ಬಿ.ಆರ್. ಪಾಟೀಲ, ಶಾಸಕ ದರ್ಶನ್ ಪುಟ್ಟಣ್ಣಯ್ಯ, ರೈತ ಸಂಘಟನೆಗಳ ಮುಖಂಡರಾದ ಎಚ್.ಆರ್. ಬಸವರಾಜಪ್ಪ, ವೀರಸಂಗಯ್ಯ, ಚುಕ್ಕಿ ನಂಜುಂಡಸ್ವಾಮಿ, ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಮುಖಂಡರಾದ ಸುನಂದಾ ಜಯರಾಂ ಇದ್ದರು.

ವಾಣಿಜ್ಯ ಸಂಸ್ಥೆಗಳ ಪ್ರತಿನಿಧಿಗಳ ಜೊತೆ ಸಭೆ: ವಾಣಿಜ್ಯ ಸಂಸ್ಥೆಗಳ ಮುಖಂಡರ ಜೊತೆಗೂ ಮುಖ್ಯಮಂತ್ರಿ ಆಯವ್ಯಯ ಪೂರ್ವಭಾವಿ ಚರ್ಚೆ ನಡೆಸಿದರು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಕೈಗಾರಿಕಾ ಇಲಾಖೆ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತರಾದ ಗುಂಜನ್ ಕೃಷ್ಣಾ , ಎಫ್‌ಕೆಸಿಸಿಐ, ಕಾಸ್ಸಿಯಾ, ಜಿಎಸ್‌ಟಿ ಸಮಿತಿ, ಎಲೆಕ್ಟ್ರಾನಿಕ್ ಸಿಟಿ ಇಂಡಸ್ಟ್ರೀಸ್ ಅಸೋಸಿಯೇಷನ್ ಸೇರಿದಂತೆ ವಿವಿಧ ವಾಣಿಜ್ಯ ಸಂಸ್ಥೆಗಳ ಪ್ರತಿನಿಧಿಗಳು ಇದ್ದರು.

ದಲಿತ ಸಂಘಟನೆಗಳಿಂದ ಮನವಿ

ಮುಖ್ಯಮಂತ್ರಿ ಜೊತೆ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿಯ ಪದಾಧಿಕಾರಿಗಳು ಮನವಿ ಸಲ್ಲಿಸಿ, ಪರಿಶಿಷ್ಟರಿಗೆ ಮೀಸಲಿಟ್ಟ ಅನುದಾನವನ್ನು ಸಂಪೂರ್ಣ ಖರ್ಚು ಮಾಡಬೇಕು, ಈ ನಿಧಿಯಲ್ಲಿ ಶೇ 70ರಷ್ಟನ್ನು ದಲಿತರ ಅನುಕೂಲಕ್ಕೆ ಮುಖ್ಯವಾಗಿ ಶಿಕ್ಷಣ, ಆರೋಗ್ಯ, ವಸತಿ, ಸ್ವಯಂ ಉದ್ಯೋಗ, ಪೌರ ಕಾರ್ಮಿಕರ ಪುನರ್ವಸತಿ, ಭೂ ಹಂಚಿಕೆಗೆ ಬಳಕೆ ಮಾಡಬೇಕು, ಉನ್ನತ ಕಲಿಕೆಗೆ ವಿದೇಶಕ್ಕೆ ಹೋಗುವ ದಲಿತ ಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು, ಸರ್ಕಾರಿ ವಾಣಿಜ್ಯ ಕಟ್ಟಡಗಳಲ್ಲಿ ಪರಿಶಿಷ್ಟರಿಗೆ ಶೇ 25ರಷ್ಟು ಅಂಗಡಿ ಮುಂಗಟ್ಟುಗಳನ್ನು ಮೀಸಲಿಡಬೇಕು ಎಂದು ಆಗ್ರಹಿಸಿದ್ದಾರೆ.

ದೇವರಾಜ ಅರಸು ಅವರು 1978ರಲ್ಲಿ ಜಾರಿಗೆ ತಂದಿರುವ ಭೂ ಸುಧಾರಣಾ ಕಾಯ್ದೆಯನ್ನು ಯಥಾವತ್ ಮರು ಜಾರಿ ಮಾಡಬೇಕು, ಈ ಕಾಯ್ದೆ ಉಲ್ಲಂಘಿಸಿ ಬೇನಾಮಿ ಹೆಸರಿನಲ್ಲಿ ಲಪಟಾಯಿಸಿರುವ ಸಾವಿರಾರು ಎಕರೆ ಭೂಮಿಯನ್ನು ವಶಪಡಿಸಿಕೊಂಡು ಮರು ಹಂಚಿಕೆ ಮಾಡಬೇಕು ಎಂದೂ ಸಮಿತಿ ಒತ್ತಾಯಿಸಿದೆ.

ಅಯೋಧ್ಯೆಯಲ್ಲಿ ಸುತ್ತೂರು ಮಠದ ಶಾಖೆ: ಶ್ಲಾಘನೆ

ಒಂದನೇ ಪುಟದಿಂದ...

ಶಾ ಹೊಗಳಿದ ದೇಶಿಕೇಂದ್ರ ಸ್ವಾಮೀಜಿ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, 'ದೇಶದ ಏಕತೆ ಹಾಗೂ ಸಮಗ್ರತೆ ದೃಷ್ಟಿಯಿಂದ ಅಮಿತ್ ಶಾ ಕೈಗೊಂಡ ನಿರ್ಧಾರಗಳು ಅಪೂರ್ವ. ಅವರು ವಲ್ಲಭಬಾಯಿ ಪಟೇಲರಂತೆ ಉಕ್ಕಿನ ಮನುಷ್ಯ. ಹಾಗೆಯೇ ಚಾಣಾಕ್ಷ ಕೂಡ' ಎಂದರು.

'ಮೈಸೂರು ಅರಮನೆ ವಿದ್ವಾಂಸ ಕೇಶವ ಪಂಡಿತರು ಸ್ವಾತಂತ್ರ್ಯ ನಂತರ ಗುಜರಾತ್‌ನಲ್ಲಿ ನೆಲೆಸಿ ಶಾ ಅವರಿಗೆ ಶಿಕ್ಷಣ ನೀಡಿದ್ದರು. ಮೈಸೂರಿಗೂ ಶಾ ಅವರಿಗೂ ನಂಟಿದೆ. ಮೋದಿ ಹಾಗೂ ಶಾ ಜೋಡೆತ್ತಿನಂತೆ ದೇಶ ಮುನ್ನಡೆಸುತ್ತಿದ್ದಾರೆ' ಎಂದು ಹೇಳಿದರು.

ಅಯೋಧ್ಯೆ ಶ್ರೀರಾಮ ಮಂದಿರದ ಬಾಲರಾಮನ ಮೂರ್ತಿ ಕೆತ್ತಿರುವ ಶಿಲ್ಪಿ ಅರುಣ್ ಯೋಗಿರಾಜ್ ಅವರನ್ನು ಅಮಿತ್ ಶಾ ಹಾಗೂ ಸ್ವಾಮೀಜಿ ಗೌರವಿಸಿದರು. ಶಾ ಅವರಿಗೆ ಚಾಮುಂಡೇಶ್ವರಿ ಶ್ರೀಗಂಧದ ಪ್ರತಿಮೆ ನೀಡಿ ಸನ್ಮಾನಿಸಲಾಯಿತು. ಇದಕ್ಕೂ ಮೊದಲು ಶಾ ಶಿವರಾತ್ರೀಶ್ವರ ಶಿವಯೋಗಿಗಳ ಗದ್ದುಗೆಗೆ ಭೇಟಿ ನೀಡಿದರು.

ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಸಂಸದ ಪ್ರತಾಪ ಸಿಂಹ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಶಾಸಕ ಬಸವರಾಜ ಬೊಮ್ಮಾಯಿ, ಬೆಳಗಾವಿಯ ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ, ಬಿಜೆಪಿ ಮುಖಂಡ ಸಿ.ಟಿ.ರವಿ ಅವರು ಹಾಜರಿದ್ದರು. ಅತಿಥಿ ಗೃಹವನ್ನು ಶಾಸಕ ಶಾಮನೂರು ಶಿವಶಂಕರಪ್ಪ ಕುಟುಂಬದವರು ₹12 ಕೋಟಿ ವೆಚ್ಚದಲ್ಲಿ ನಿರ್ಮಿಸಿಕೊಟ್ಟಿದ್ದಾರೆ.

ಪ್ರತಾಪ–ಪ್ರೀತಂ ಜಟಾಪಟಿ: ಅಮಿತ್ ಶಾ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ ವೇಳೆ ಸಂಸದ ಪ್ರತಾಪ ಸಿಂಹ ಹಾಗೂ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ನಡುವೆ ಮಾತಿನ ಚಕಮಕಿ ನಡೆದಿದೆ.

ಸಚಿವರ ಸ್ವಾಗತಿಸಲು ನಾಯಕರನ್ನು ಸಾಲಿನಲ್ಲಿ ನಿಲ್ಲಿಸುವ ಜವಾಬ್ದಾರಿಯನ್ನು ಪ್ರೀತಂಗೆ ನೀಡಲಾಗಿತ್ತು. ಕೊನೆಯಲ್ಲಿ ನಿಲ್ಲುವಂತೆ ಅವರು ತಿಳಿಸಿದ್ದರಿಂದ ಪ್ರತಾಪ ಸಿಟ್ಟಾಗಿ ಪ್ರಶ್ನಿಸಿದರು ಎನ್ನಲಾಗಿದೆ. ತಿರುಗೇಟು ನೀಡಿದ ಪ್ರೀತಂ, 'ನೀನು ನನ್ನೊಂದಿಗೆ ಏನೂ ಮಾತನಾಡಬೇಡ' ಎಂದಿದ್ದಾರೆ. ಇದಕ್ಕೆ ಕುಪಿತರಾದ ಪ್ರತಾಪ, 'ಇದೆಲ್ಲವನ್ನೂ ಹಾಸನದಲ್ಲಿ ಇಟ್ಟುಕೋ, ನಮ್ಮಲ್ಲಿ ನಡೆಯಲ್ಲ' ಎಂದು ತಿರುಗೇಟು ನೀಡಿದ್ದಾರೆ. ಆಗ, ಇತರ ಮುಖಂಡರು ಮಧ್ಯಪ್ರವೇಶಿಸಿ ಇಬ್ಬರನ್ನೂ ಸಮಾಧಾನ ಪಡಿಸಿದರು ಎಂದು ತಿಳಿದುಬಂದಿದೆ.

ನಸುಕಿನಲ್ಲಿ ಆಗಮನ, ಚಾಮುಂಡಿ ದರ್ಶನ

ಮೈಸೂರು: ಅಮಿತ್ ಶಾ ಅವರು ಭಾನುವಾರ ಮುಂಜಾನೆ 2.40ರ ಸುಮಾರಿಗೆ ವಿಶೇಷ ವಿಮಾನದಲ್ಲಿ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಜೊತೆಗೆ ಬಂದಿಳಿದರು. ಅವರನ್ನು ಪಕ್ಷದ ಪ್ರಮುಖರು ಮತ್ತು ಜಿಲ್ಲಾಡಳಿತದ ಅಧಿಕಾರಿಗಳು ಸ್ವಾಗತಿಸಿದರು.

ತಡವಾಗಿ ಮೈಸೂರಿಗೆ ಬಂದಿದ್ದರಿಂದಾಗಿ ಕಾರ್ಯಕ್ರಮದ ವೇಳಾಪಟ್ಟಿ ಬದಲಾಯಿತು. ಪೂರ್ವ ನಿಗದಿಯಾಗಿದ್ದ ಪ್ರಕಾರ ಅವರು ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಬೇಕಾಗಿತ್ತು. ಆದರೆ, ಮೊದಲಿಗೆ ನಂಜನಗೂಡು ತಾಲ್ಲೂಕಿನ ಸುತ್ತೂರು ಜಾತ್ರೆಯಲ್ಲಿ ಪಾಲ್ಗೊಂಡು ನಂತರ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಬಂದರು. ಅವರಿಗೆ ದೇವಾಲಯದ ವತಿಯಿಂದ ಪೂರ್ಣಕುಂಭ ಸ್ವಾಗತ ಕೋರಲಾಯಿತು.

ಕಚೇರಿಯಲ್ಲೂ ಇ.ಡಿ ಅಧಿಕಾರಿಗಳಿಂದ ಪರಿಶೀಲನೆ

ಭರತ್ ಮನೆಯಲ್ಲಿ 2ನೇ ದಿನವೂ ಶೋಧ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರ ಮನೆ ಹಾಗೂ ಕಚೇರಿ ಮೇಲಿನ ಜಾರಿ ನಿರ್ದೇಶನಾಲಯದ (ಇ.ಡಿ) ದಾಳಿ ಎರಡನೇ ದಿನವಾದ ಭಾನುವಾರವೂ ಮುಂದುವರಿಯಿತು.

ನಗರದ ಮೋಕಾ ರಸ್ತೆಯಲ್ಲಿರುವ ಶ್ರೀರಾಘವೇಂದ್ರ ಎಂಟರ್‌ಪ್ರೈಸ್ ಹಾಗೂ ಗ್ರಾನೈಟ್ ಕಂಪನಿಯಲ್ಲಿ ಶೋಧ ಕಾರ್ಯ ನಡೆಯಿತು. ಸಂಜೆ 7ರ ಹೊತ್ತಿಗೆ ಅಧಿಕಾರಿಗಳ ಎರಡು ತಂಡ ಕೆಲವು ಬ್ಯಾಗ್‌ಗಳೊಂದಿಗೆ, ಎರಡು ಕಾರುಗಳಲ್ಲಿ ನಿರ್ಗಮಿಸಿತಾದರೂ, ಕಚೇರಿಯಲ್ಲೇ ಉಳಿದಿರುವ ಮತ್ತೊಂದು ತಂಡ ಪರಿಶೀಲನೆ ಮುಂದುವರಿಸಿತು. ಶನಿವಾರ ಬೆಳಿಗ್ಗೆ 6.30ರಿಂದ ಆರಂಭಗೊಂಡ ಇಡಿ ಅಧಿಕಾರಿಗಳ ಪರಿಶೀಲನೆ ರಾತ್ರಿ 10.30ರ ವರೆಗೆ ನಡೆದಿತ್ತು. ನಂತರ ಭಾನುವಾರ ಮುಂಜಾನೆಯಿಂದಲೇ ಮತ್ತೆ ರಾತ್ರಿಯವರೆಗೂ ಶೋಧ ಕಾರ್ಯ ನಡೆಯಿತು ಎನ್ನಲಾಗಿದೆ.

ಮುಖ್ಯಾಂಶಗಳು

- ಕಚೇರಿಯಲ್ಲೇ ಉಳಿದಿರುವ ಮತ್ತೊಂದು ತಂಡದಿಂದ ಪರಿಶೀಲನೆ
- ಭಾನುವಾರ ಮುಂಜಾನೆಯಿಂದ ರಾತ್ರಿಯವರೆಗೂ ಶೋಧ ಕಾರ್ಯ
- ಭರತ್ ರೆಡ್ಡಿ ಆಪ್ತರ ಎಂಬವರ ಮನೆಗಳಲ್ಲೂ ದಾಖಲೆಗಳ ಪರಿಶೀಲನೆ

ಹೊರಗಿನವರು ಮನೆ ಮತ್ತು ಕಚೇರಿಗೆ ಬರುವುದನ್ನು ಇ.ಡಿ ಅಧಿಕಾರಿಗಳು ನಿರ್ಬಂಧಿಸಿದ್ದು, ಕೆಲಸದವರನ್ನು ಗೇಟ್ ಬಳಿಯೇ ತಡೆದು ಹಿಂದಕ್ಕೆ ಕಳುಹಿಸಲಾಯಿತು. ಇ.ಡಿ ದಾಳಿ ಆರಂಭವಾದಾಗಿನಿಂದ ಮನೆಯಲ್ಲೇ ಉಳಿದಿರುವ ಭರತ್ ರೆಡ್ಡಿ ಮತ್ತು ಅವರ ತಂದೆ ಮಾಜಿ ಶಾಸಕ ಸೂರ್ಯನಾರಾಯಣ ರೆಡ್ಡಿ ಭಾನುವಾರವೂ ಹೊರಗೆ ಕಾಣಿಸಿಕೊಳ್ಳಲಿಲ್ಲ.



ಭರತ್ ರೆಡ್ಡಿ ಕಚೇರಿಯಿಂದ ತರಲಾದ ಬ್ಯಾಗ್‌ಗಳನ್ನು ಕಾರಿನಲ್ಲಿ ಭದ್ರತಾ ಸಿಬ್ಬಂದಿ ಇರಿಸಿದರು

ಭರತ್ ರೆಡ್ಡಿ ಅವರ ಚಿಕ್ಕಪ್ಪ ಪ್ರತಾಪ್ ರೆಡ್ಡಿ ಅವರ ಮನೆ ಮತ್ತು ಕಚೇರಿಯಲ್ಲಿನ ಪರಿಶೀಲನೆಯನ್ನು ಅಧಿಕಾರಿಗಳು ಶನಿವಾರ ರಾತ್ರಿ ಪೂರ್ಣಗೊಳಿಸಿದ್ದಾರೆ. ಭರತ್ ರೆಡ್ಡಿ ಆಪ್ತರೆನಿಸಿಕೊಂಡಿರುವ ರತ್ನಬಾಬು ಮತ್ತು ಸತೀಶ್ ಎಂಬುವವರ ಮನೆಯಲ್ಲೂ ದಾಖಲೆಗಳ ಪರಿಶೀಲನೆ ನಡೆದಿದೆ.

ಭರತ್‌ರೆಡ್ಡಿ ಮನೆ ಮೇಲೆ ಕೆಲ ವರ್ಷಗಳ ಹಿಂದೆ ಆದಾಯ ತೆರಿಗೆ ಇಲಾಖೆ ದಾಳಿ ಮಾಡಿತ್ತು. ಸದ್ಯ ಹಣ ಅಕ್ರಮ ವರ್ಗಾವಣೆ ಪ್ರಕರಣವೊಂದರ ತನಿಖೆಯ ಭಾಗವಾಗಿ ಭರತ್ ಮನೆ, ಕಚೇರಿ ಮೇಲೆ ಇ.ಡಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ ಎನ್ನಲಾಗಿದೆ. ಅವರ ಕುಟುಂಬ ಹಲವು ವರ್ಷಗಳಿಂದ ಗ್ರಾನೈಟ್ ಉದ್ಯಮದಲ್ಲಿ ತೊಡಗಿಸಿಕೊಂಡಿದೆ.

'ಅಸಮಂಜಸ ಬೇಡಿಕೆಗಳನ್ನು ಇಟ್ಟಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದ (ಯುವಿಸಿಇ) ನಿರ್ದೇಶಕ ಸ್ಥಾನಕ್ಕೆ ನೇಮಕವಾಗಿರುವ ಬಾಂಬೆ ಐಐಟಿ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಡಿ. ಮಂಜುನಾಥ್ ಅವರು ತಮ್ಮ ವೇತನದ ಬಗ್ಗೆ ಯಾವುದೇ ಅಸಮಂಜಸ ಬೇಡಿಕೆಗಳನ್ನು ಇಟ್ಟಿಲ್ಲ' ಎಂದು ಯುವಿಸಿಇ ಆಡಳಿತ ಮಂಡಳಿ ಅಧ್ಯಕ್ಷ ಬಿ. ಮುತ್ತುರಾಮನ್ ತಿಳಿಸಿದ್ದಾರೆ.

ಮಂಜುನಾಥ್ ಅವರ ಬೇಡಿಕೆಗಳಿಗೆ ಸಂಬಂಧಿಸಿದಂತೆ ಮಾಧ್ಯಮಗಳಲ್ಲಿ ಇತ್ತೀಚೆಗೆ ಪ್ರಕಟಗೊಂಡಿದ್ದ ವರದಿಗಳಿಗೆ ಸ್ಪಷ್ಟನೆ ನೀಡಿರುವ ಅವರು, 'ಕ್ಲಬ್ ಸದಸ್ಯತ್ವ ಹೊರತುಪಡಿಸಿ ಅವರ ಇತರ ಎಲ್ಲ ಬೇಡಿಕೆಗಳು ಪ್ರಸ್ತುತ ಈಗಾಗಲೇ ಅವರು ಉದ್ಯೋಗದಲ್ಲಿ ಪಡೆಯುತ್ತಿದ್ದಾರೆ. ಅಲ್ಲದೆ, ವಿಮಾನದಲ್ಲಿ ವ್ಯಾಪಾರ ವರ್ಗದ ಪ್ರಯಾಣವು ಸೇರಿದಂತೆ ಪ್ರಸ್ತುತ ಪಡೆಯುತ್ತಿರುವ ಯಾವುದೇ ಸವಲತ್ತುಗಳನ್ನು ವಿವೇಚನೆಯಿಂದ ಬಳಸಿಕೊಳ್ಳುವುದಾಗಿ ತಮ್ಮ ಪತ್ರ ವ್ಯವಹಾರದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ' ಎಂದಿದ್ದಾರೆ.

ಶಿಕ್ಷಣ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

57) ದಸ್ತಕ್ ಅನ್ನು ದುರುಪಯೋಗಪಡಿಸಿಕೊಂಡ ಪರಿಣಾಮ ಯಾವ ಯುದ್ಧಗಳು ನಡೆದವು?
ಉತ್ತರ:– ಪ್ಲಾಸಿ ಮತ್ತು ಬಕ್ಸಾರ್ ಕದನಗಳು

58) ಭಾರತದಲ್ಲಿ ಮಹಲ್ವಾರಿ ಪದ್ಧತಿ ಪ್ರಯೋಗಿಸಿದವರು ಯಾರು?
ಉತ್ತರ:– ಆರ್‌ಎಂ ಬರ್ಡ್ ಮತ್ತು ಜೇಮ್ಸ್ ಥಾಮ್ಸನ್

59) ಮೈಸೂರಿಗೆ ಬಂದಿದ್ದ ವಿವೇಕಾನಂದರಿಗೆ ಆಶ್ರಯ ನೀಡಿ ಅವರು ಚಿಕಾಗೋ ಸರ್ವಧರ್ಮ ಸಮ್ಮೇಳನಕ್ಕೆ ಹೋಗಲು ಸಹಾಯ ಮಾಡಿದವರು ಯಾರು?
ಉತ್ತರ:– ಚಾಮರಾಜೇಂದ್ರ ಒಡೆಯರ್

60) ಕರಿಮೆಣಸಿನ ಆಸೆಯಿಂದ ವಿದೇಶಿಯರು ನಡೆಸಿದ್ದ ನಿರಂತರ ಆಕ್ರಮಣವನ್ನು ಮತ್ತು ಸಾಮ್ರಾಜ್ಯದಾಹವನ್ನು ಮೆಟ್ಟಿನಿಂತ ವೈನಾಡ್ ಅರಸ ಯಾರು?
ಉತ್ತರ:– ಮಾರ್ತಾಂಡ ವರ್ಮ

61) ಎರಡನೆಯ ಕಾರ್ನಾಟಿಕ್ ಯುದ್ಧವು ಯಾವ ಒಪ್ಪಂದ'ದೊಂದಿಗೆ ಮುಕ್ತಾಯವಾಯಿತು?
ಉತ್ತರ:– ಎರಡನೆಯ ಕಾರ್ನಾಟಿಕ್ ಯುದ್ಧವು 'ಪಾಂಡಿಚೇರಿ ಒಪ್ಪಂದ'ದೊಂದಿಗೆ ಮುಕ್ತಾಯವಾಯಿತು.

62) 1724ರಲ್ಲಿ ಹೈದರಾಬಾದ್ ಸಂಸ್ಥಾನವನ್ನು ಸ್ಥಾಪಿಸಿದನು ಯಾರು?
ಉತ್ತರ:– 'ಅಸಫ್ ಜಾ'

63) ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯು ಭಾರತದಲ್ಲಿ ಮೊದಲ ವ್ಯಾಪಾರಿ ದಾಸ್ತಾನು ಮಳಿಗೆ ಎಲ್ಲಿ ಆರಂಭಿಸಿತು?
ಉತ್ತರ:– ಸೂರತ್

64) ಯಾವ ಯಾವ ರಾಜ್ಯದಲ್ಲಿ ಕೃಷಿಗಾಗಿ ದೊರೆಯದ ಹೆಚ್ಚು ಭೂಮಿ ಇದೆ?
ಉತ್ತರ:– ಇದು ಹೆಚ್ಚಾಗಿ ಅಸ್ಸಾಂ, ಮಣಿಪುರ ಮತ್ತು ಸಿಕ್ಕಿಂ ರಾಜ್ಯಗಳಲ್ಲಿ ಕಂಡುಬರುವುದು.

65) ಭಾರತವು ಸುಮಾರು ಎಷ್ಟು ಬಿಲಿಯನ್ ಕಿಲೋವ್ಯಾಟ್ಸ್ ಜಲ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೊಂದಿದೆಯೆಂದು ಅಂದಾಜು ಮಾಡಲಾಗಿದೆ.?
ಉತ್ತರ:– 410 ಬಿಲಿಯನ್ ಕಿಲೋವ್ಯಾಟ್ಸ್

66) ಅನಿಬೆಸೆಂಟ್ ಅವರು 1916ರ ಆರಂಭಿಸಿದ ಚಳವಳಿ ಯಾವುದು?
ಉತ್ತರ:– ಅನಿಬೆಸೆಂಟ್ ಅವರು 1916ರಲ್ಲಿ ಮದರಾಸು ಪ್ರಾಂತ್ಯದಲ್ಲಿ ಹೋಮ್ ರೂಲ್‌ಲೀಗ್‌ನ್ನು ಪ್ರಾರಂಭಿಸಿದರು '

67) ಉಷ್ಣ ವಲಯದ ನಿತ್ಯ ಹರಿದ್ವರ್ಣದ ಅರಣ್ಯಗಳು ಎಲ್ಲಿ ಕಂಡುಬರುತ್ತವೆ?
ಉತ್ತರ : ಈ ವಿಧದ ಅರಣ್ಯಗಳು 250 ಸೆಂ.ಮೀ. ಗಳಿಗಿಂತ ಹೆಚ್ಚು ವಾರ್ಷಿಕ ಮಳೆಯಾಗುವ ಭಾಗಗಳಲ್ಲಿ ಕಂಡುಬರುತ್ತವೆ

68) ನಮ್ಮ ದೇಶದಲ್ಲಿ ದೊರೆಯುವ ಒಟ್ಟು ಜಲ ಸಂಪನ್ಮೂಲನವನ್ನು ಬಳಸಿ ಎಷ್ಟು ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಯನ್ನು ನೀಡಬಹುದು?
ಉತ್ತರ:– 140 ದಶಲಕ್ಷ ಹೆಕ್ಟೇರ್ ಪ್ರದೇಶ

69) ರಾಜಾರಾಮ ಮೋಹನ ರಾಯರು ಯಾವೆಲ್ಲಾ ಸಂಸ್ಥೆಗಳನ್ನು ಆರಂಭಿಸಿದರು?
ಉತ್ತರ:– ರಾಜಾರಾಮ ಮೋಹನ ರಾಯರು ತಮ್ಮ ಸ್ನೇಹಿತರೊಡಗೂಡಿ ಕಲ್ಕತ್ತಾದಲ್ಲಿ 'ಆತ್ಮೀಯ ಸಭಾ' ಪ್ರಾರಂಭಿಸಿದರು. ಈ ಸಭೆಯ ಪ್ರಮುಖ ಆಶಯಗಳೆಂದರೆ ಧಾರ್ಮಿಕ ಮತ್ತು ಸಾಮಾಜಿಕ ಪಿಡುಗುಗಳನ್ನು ಬಂಗಾಳದ ಸಮಾಜದಿಂದ ಕೊನೆಗೊಳಿಸುವುದು. 1828ರಲ್ಲಿ 'ಬ್ರಹ್ಮ ಸಮಾಜವನ್ನು ಪ್ರಾರಂಭಿಸಿದರು

70) ಸತಿ ನಿಷೇಧದ ಕುರಿತು ಬರೆಯಿರಿ
ಉತ್ತರ:– ರಾಜಾರಾಮ್ ಮೋಹನರಾಯರ ಪ್ರಯತ್ನದಂದ ಗವರ್ನರ್ ಜನರಲ್ ವಿಲಿಯಂ ಬೆಂಟಿಂಕ್‌ನ ಬೆಂಬಲದಿಂದ 1829ರಲ್ಲಿ ಸತಿ ಪದ್ಧತಿಯ ಆಚರಣೆಯನ್ನು ಕಾನೂನಾತ್ಮಕವಾಗಿ ನಿಷೇಧಿಸಲಾಯಿತು.

71) 'ಅಮರ ಸುಳ್ಯ' ಬಂಡಾಯದ ಕೇಂದ್ರಗಳು ಯಾವುವು?
ಉತ್ತರ:– ಕೆನರಾ ಪ್ರಾಂತ್ಯದ ಸುಳ್ಯ, ಬೆಳ್ಳಾರೆ ಮತ್ತು ಪುತ್ತೂರು ಮೊದಲಾದ ಸ್ಥಳಗಳು 'ಅಮರ ಸುಳ್ಯ' ಬಂಡಾಯದ ಕೇಂದ್ರ ಸ್ಥಾನಗಳಾಗಿದ್ದವು.

72) ಸ್ವಾತಂತ್ರ್ಯ ನಂತರ ಭಾರತದ ಸರಕಾರವು ರಚಿಸಿದ ಯೋಜನಾ ಆಯೋಗದ ಅಧ್ಯಕ್ಷರು ಯಾರಾಗಿರುತ್ತಿದ್ದರು?
ಉತ್ತರ:– ಪ್ರಧಾನ ಮಂತ್ರಿ

73) **1935ರ ಭಾರತ ಸರ್ಕಾರದ ಕಾಯ್ದೆ ಕುರಿತು ಬರೆಯಿರಿ**
ಉತ್ತರ:– 1935ರ ಭಾರತ ಸರ್ಕಾರದ ಕಾಯ್ದೆ ಭಾರತದ ಸಂವಿಧಾನ ರಚನೆಗೆ ಈ ಕಾಯ್ದೆಯು ಬುನಾದಿಯಾಗಿದೆ. ಈ ಕಾಯ್ದೆಯು ರೂಪುಗೊಳ್ಳಲು ಮೋತಿಲಾಲ್ ನೆಹರು ಅವರ ಅಧ್ಯಕ್ಷತೆಯಲ್ಲಿ ತಯಾರಾದ 1928ರ ವರದಿಯು ಮುಖ್ಯವಾಗಿದೆ. ಸ್ವತಂತ್ರ ಭಾರತದ ಸಂವಿಧಾನದ ಬಹುತೇಕ ಅಂಶಗಳು ಈ ಕಾಯ್ದೆಯನ್ನೇ ಆಧರಿಸಿ ರಚಿಸಲಾಗಿದೆ. ಈ ಕಾಯ್ದೆಯು ಭಾರತಕ್ಕೆ ಸಂಪೂರ್ಣ ಜವಾಬ್ದಾರಿಯುತ ಸರ್ಕಾರ ರಚಿಸಲು ಅವಕಾಶ ನೀಡಿತು. ಇದು ಬ್ರಿಟಿಷ್ ಭಾರತ ಪ್ರಾಂತ್ಯಗಳಿಗೆ ಮಾತ್ರ ಅನ್ವಯವಾಗದೇ ದೇಶಿಯ ಸಂಸ್ಥಾನಗಳಿಗೂ ಅನ್ವಯವಾಗುವ ಅಂಶಗಳನ್ನು ಒಳಗೊಂಡಿದ್ದಿತು.

ಈ ಕಾಯ್ದೆಯ ಪ್ರಮುಖ ಅಂಶಗಳು 1. ಬ್ರಿಟಿಷ್ ಪ್ರಾಂತ್ಯಗಳ, ದೇಶಿಯ ಸಂಸ್ಥಾನಗಳು ಹಾಗೂ ಆಶ್ರಿತ ರಾಜರನ್ನೊಳಗೊಂಡ ಅಖಿಲ ಭಾರತ ಒಕ್ಕೂಟವನ್ನು ರಚಿಸಲು ಅವಕಾಶ ನೀಡಿತು.
2. ಕೇಂದ್ರದಲ್ಲಿ "ದ್ವಿ ಸರಕಾರ"ವನ್ನು (Dyarchy) ಸ್ಥಾಪಿಸಲಾಯಿತು.
3. ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಗೆ ಅವಕಾಶ ನೀಡಿತು.
4. ಪ್ರಾಂತ್ಯಗಳಲ್ಲಿ "ದ್ವಿ ಸರಕಾರ" ಪದ್ಧತಿಯನ್ನು ರದ್ದುಗೊಳಿಸಿ, ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಲಾಯಿತು.
5. ಭಾರತದಲ್ಲಿ "ಫೆಡರಲ್ ಕೋರ್ಟ್" ಸ್ಥಾಪನೆಗೆ ಅವಕಾಶ ನೀಡಲಾಯಿತು.

74) ಭಾರತದಲ್ಲಿರುವ ಉತ್ತರದ ಪರ್ವತದ ಬಗ್ಗೆ ಬರೆಯಿರಿ
ಉತ್ತರ:– ಭಾರತದ ಉತ್ತರದಲ್ಲಿರುವ ಹಿಮಾಲಯ ಪರ್ವತ ಶ್ರೇಣಿಯಲ್ಲಿ ಜಗತ್ತಿನಲ್ಲಿಯೇ ಅತಿ ಎತ್ತರವಾದ ಶಿಖರಗಳನ್ನು, ಆಳವಾದ ಕಣಿವೆಗಳನ್ನು, ಹಿಮನದಿ ಮುಂತಾದವುಗಳನ್ನು ಹೊಂದಿದೆ. ಹಿಮಾಲಯ ಪರ್ವತ ಶ್ರೇಣಿಯು ಪಾಮಿರ್ ಗ್ರಂಥಿಯಿಂದ ಪ್ರಾರಂಭವಾಗಿ ಪೂರ್ವದಲ್ಲಿ ಅರುಣಾಚಲದವರೆಗೆ ಸುಮಾರು 2500 ಕಿಮೀ ಉದ್ದವಾಗಿ ಹಬ್ಬಿದೆ. ಇದು ಮಡಿಕೆ ಪರ್ವತವಾಗಿದ್ದು, ಮೂರು ಪ್ರಮುಖ ಶ್ರೇಣಿಗಳನ್ನು ಒಳಗೊಂಡಿದೆ. ಇವುಗಳೆಂದರೆ
ಅ) ಶಿವಾಲಿಕ್ ಶ್ರೇಣಿ (ಹಿಮಾಲಯದ ಪಾದ ಬೆಟ್ಟಗಳು),
ಬ) ಹಿಮಾಚಲ (ಮಧ್ಯ ಹಿಮಾಲಯ),
ಕ) ಮಹಾಹಿಮಾಲಯ (ಹಿಮಾದ್ರಿ)

75) ಚಾಲ್ತಿ ಖಾತೆ ಕುರಿತು ಬರೆಯಿರಿ
ಉತ್ತರ: ಈ ಖಾತೆಯನ್ನು ಸಾಮಾನ್ಯವಾಗಿ ಹೆಚ್ಚು ಬ್ಯಾಂಕು ವಹಿವಾಟು ನಡೆಸುವ ವ್ಯಾಪಾರಸ್ಥರು, ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಯವರು ತೆರೆಯುತ್ತಾರೆ. ಇಲ್ಲಿ ಠೇವಣಿಗಳ ಮರುಪಾವತಿ ಮತ್ತು ಬೇಡಿಕೆ ಠೇವಣಿಗಳು ಅಥವಾ ಉಪಸರ್ಗ (Contra) ವ್ಯವಹಾರದ ಮೂಲಕ ಹಣವನ್ನು ಹಿಂಪಡೆಯಲು ಸಾಧ್ಯ, ಹಣವನ್ನು ದಿನದಲ್ಲಿ ಎಷ್ಟು ಬಾರಿಯಾದರೂ ತೆಗೆಯಬಹುದು ಹಾಗೂ ಎಷ್ಟು ಬಾರಿಯಾದರೂ ಖಾತೆಗೆ ತುಂಬಬಹುದು, ಈ ಖಾತೆಯಲ್ಲಿರುವ ಹಣಕ್ಕೆ ಬಡ್ಡಿಯನ್ನು ಕೊಡುವುದಿಲ್ಲ. ಆದರೆ ಸೇವೆಗೆ ಸೇವಾ ಶುಲ್ಕವನ್ನು ವಸೂಲು ಮಾಡಲಾಗುತ್ತದೆ.

ಪರೀಕ್ಷಾ ಕಾಲದಲ್ಲಿ ಉಣ್ಣುವುದೇನು?



ದೀಪ ಬಿ. ಆರ್

ಪರೀಕ್ಷೆಗಳು ಸಮೀಪಿಸುತ್ತಿರುವ ಸಮಯದಲ್ಲಿ ಉತ್ತಮ ಅಂಕ ಗಳಿಸಲು ಸರಿಯಾದ ಯೋಜನೆ, ವೇಳಾಪಟ್ಟಿ ಹಾಗೂ ತಯಾರಿಯ ಆಗತ್ಯವಿರುವಷ್ಟೆ ಸಮತೋಲಿತ ಮತ್ತು ಪೌಷ್ಟಿಕ ಆಹಾರ ಸೇವನೆಯು ಪ್ರಮುಖವಾಗಿರುತ್ತದೆ.

ಪರೀಕ್ಷಾ ಸಮಯದಲ್ಲಿ ಮಕ್ಕಳ ಆಹಾರದ ವಿಧಾನ ಹೇಗಿರಬೇಕು?. ಓದಿರುವುದು ನೆನಪಿನಲ್ಲಿ ಉಳಿಯಬೇಕೆಂದರೆ ಮಿದುಳಿಗೆ ಅಗತ್ಯವಿರುವ ಪೋಷಕಾಂಶಗಳು ಸಿಗಬೇಕು. ಅಂಥ ಕೆಲವು ಆಹಾರಪದಾರ್ಥಗಳ ಬಗ್ಗೆ ತಿಳಿಯೋಣ.

1. **ಜ್ಞಾಪಕ ಶಕ್ತಿ ಹೆಚ್ಚಿಸುವ ಆಹಾರವನ್ನು ಮಕ್ಕಳಿಗೆ ಕೊಡಿ:** ಮಿದುಳಿನ ಶೇ 50ರಿಂದ 60 ಭಾಗ ಕೊಬ್ಬಿನ ಅಂಶದಿಂದ ಕೂಡಿರುತ್ತದೆ. ಅದರಲ್ಲಿ ಶೇ 50 ಒಮೆಗಾ 3 ಕೊಬ್ಬಿನಾಮ್ಲ ಇರುತ್ತದೆ. ಇವುಗಳಲ್ಲಿ ಕಂಡುಬರುವ DHA (docosa hexaenoic acid) ನರ ಕೋಶಗಳ ಉತ್ತಮ ಸಂವಹನಕ್ಕೆ ಸಹಾಯ ಮಾಡುತ್ತದೆ. ಇದು ಜ್ಞಾಪಕ ಶಕ್ತಿ ಮತ್ತು ಏಕಾಗ್ರತೆಯನ್ನು ಹೆಚ್ಚಿಸುವುದಲ್ಲದೆ ಗಮನ ಕೇಂದ್ರೀಕರಿಸಲು ಸಹಾಯ ಮಾಡುತ್ತದೆ.

ಒಮೆಗಾ -3 ಇರುವ ಸಸ್ಯಾಹಾರಿ ಆಹಾರಪದಾರ್ಥಗಳು: ಅಗಸೆ ಬೀಜ, ಕುಂಬಳ ಕಾಯಿ ಬೀಜ, ಚಿಯಾ, ವಾಲ್‌ನಟ್ಸ್, ಸೋಯಾಬೀನ್ ಎಣ್ಣೆ, ಕಿಡ್ನಿ ಬೀನ್ಸ್, ರಾಜ್ಮಾ ಕಾಳುಗಳನ್ನು ನೀಡಬಹುದು. ಈ ಬೀಜಗಳ ಪುಡಿಯನ್ನು ತಯಾರಿಸಿ ಅವುಗಳನ್ನು ಇಡ್ಲಿ, ದೋಸೆ, ಉಪ್ಪಿಟ್ಟು, ಚಪಾತಿ, ಸಾಂಬಾರ್, ದಾಲ್, ತರಕಾರಿ ಪಲ್ಯ, ಸಲಾಡ್, ಲಡ್ಡೂ, ಸೂಪ್ ಮಾಡಿಯೂ ನೀಡಬಹುದು.

ಒಮೆಗಾ -3 ಇರುವ ಮಾಂಸಾಹಾರ ಪದಾರ್ಥಗಳು: ಸಮುದ್ರದ ಮೀನುಗಳಾದ ಬಂಗುಡೆ, ಬೂತಾಯಿ ಅಥವಾ ಮತ್ತಿ ಮೀನಿನಲ್ಲಿ ಒಮೆಗಾ 3 ಕೊಬ್ಬಿನಾಮ್ಲ ಅಧಿಕವಾಗಿ ದೊರೆಯುತ್ತವೆ. ಇವು ಮಿದುಳಿನ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ. ಮಕ್ಕಳಿಗೆ ವಾರಕ್ಕೆ ಒಂದು ಅಥವಾ ಎರಡು ಬಾರಿಯಾದರೂ ಮೀನು ನೀಡಬಹುದು. ವೈದ್ಯರ ಸಲಹೆಯ ಮೇರೆಗೆ ಮೀನಿ ನೆಣ್ಣೆಯ ಮಾತ್ರೆಗಳನ್ನೂ ಸೇವಿಸಬಹುದು.

2. **ಆಗಾಗ, ಈಟೀಟೆ ಉಣ್ಣುವಂತಾಗಲಿ:** ಪೋಷಕರು ಮಕ್ಕಳ ಊಟ ತಿಂಡಿ ವಿಷಯದಲ್ಲಿ ಒತ್ತಾಯ ಮಾಡೋದು ಸಹಜ. 'ಹೊಟ್ಟೆ ತುಂಬಾ ತಿನ್ನಬೇಕು ಆಗಲೇ ಶಕ್ತಿ ಬರೋದು' ಎಂದು ಮಕ್ಕಳಿಗೆ ಹೇಳೋದು ಸಾಮಾನ್ಯ. ಪರೀಕ್ಷೆ ತಯಾರಿಯಲ್ಲಿರುವ ಮಕ್ಕಳು ಅತಿಯಾಗಿ ಆಹಾರವನ್ನು ಸೇವಿಸಿದಾಗ ಜೀರ್ಣಿಸಲು ದೇಹವು ಹೆಚ್ಚು ಶ್ರಮಿಸುತ್ತದೆ ಮತ್ತು ವಿಶ್ರಾಂತಿಯ ಅಗತ್ಯವಿರುತ್ತದೆ ಹಾಗಾಗಿ ನಿದ್ರಿಸುವುದು ಸಾಮಾನ್ಯ. ಆಗ ಮಿದುಳಿಗೆ ಅಗತ್ಯವಿರುವ ಏಕಾಗ್ರತೆ ಸಿಗುವುದಿಲ್ಲ. ಸಣ್ಣ ಪ್ರಮಾಣದ ಆಹಾರವನ್ನು ಆಗಾಗ್ಗೆ ಸೇವಿಸುತ್ತಿದ್ದರೆ ಶಕ್ತಿ ನೀಡುವುದಲ್ಲದೇ ಏಕಾಗ್ರತೆಯನ್ನೂ ಹೆಚ್ಚಿಸುತ್ತದೆ. ಸಣ್ಣ ಪ್ರಮಾಣದ ಆಹಾರವನ್ನು 5-6 ಬಾರಿ ಮಕ್ಕಳಿಗೆ ಕೊಡುವುದು ಉತ್ತಮ.

3. **ತಾಜಾ ಹಣ್ಣು, ಹಣ್ಣಿನ ರಸ ಸೇವನೆ:** ಒಣಹಣ್ಣು, ತರಕಾರಿ ಸಲಾಡ್, ಅಗಸೆಬೀಜದ ಲಾಡು, ಒಣ ಹಣ್ಣುಗಳ ಲಾಡು, ಜೇನು ತುಪ್ಪದಲ್ಲಿ ಅದ್ದಿದ ಬೆಟ್ಟದ ನೆಲ್ಲಿಕಾಯಿ (ಆಮ್ಲಾ), ಸೂಪ್‌ಗಳು, ಬೇಯಿಸಿದ ಮೊಳಕೆ ಕಾಳು ನೀಡಬಹುದು.

4. **ಕಾರ್ಬೋಹೈಡ್ರೇಟ್ ಮತ್ತು ಪ್ರೊಟೀನ್:** ಕಾರ್ಬೋಹೈಡ್ರೇಟ್‌ಗಳು ಶಕ್ತಿಯ ಮುಖ್ಯ ಮೂಲ. ಅವು ನಮ್ಮ ದೇಹದಲ್ಲಿ ಗ್ಲೂಕೋಸ್ ಆಗಿ ವಿಭಾಗಿಸಲ್ಪಡುತ್ತವೆ. ರಕ್ತದ ಮೂಲಕ ದೇಹದ ವಿವಿಧ ಅಂಗಾಂಗಗಳಿಗೆ ಪೂರೈಕೆಯಾಗುತ್ತದೆ. ದೇಹ ಚಟುವಟಿಕೆಯಿಂದಿರಲು ಸಹಾಯ ಮಾಡುತ್ತದೆ. ಪ್ರೊಟೀನ್‌ಗಳಲ್ಲಿರುವ ಅಮೈನೋ ಆಮ್ಲ ಮಿದುಳಿನೊಳಗಿನ ನರಕೋಶಗಳು ಪರಸ್ಪರ ಸಂವಹನ ನಡೆಸಲು ಸಹಾಯ ಮಾಡುತ್ತವೆ. ಸಿರಿಧಾನ್ಯ, ದ್ವಿದಳ ಧಾನ್ಯ, ಮೊಳಕೆ ಕಾಳು, ಓಟ್ಸ್, ಅಣಬೆ, ಜೋಳ (ಪನೀರ್, ಸೋಯಾ, ಹಾಲು, ಮೊಸರು, ಮೊಟ್ಟೆ, ಮೀನು, ಕೋಳಿ ಮಾಂಸ ಮಕ್ಕಳ ಆಹಾರದ ಪ್ರಮುಖ ಭಾಗವಾಗಿರಬೇಕು.

5. **ರೋಗನಿರೋಧಕ ಶಕ್ತಿ ಹೆಚ್ಚಿಸಿ:** ಮಕ್ಕಳಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಹಣ್ಣು, ಹಸಿರು ಸೊಪ್ಪು, ತರಕಾರಿ ಸೇವನೆ ಮುಖ್ಯ. ಇವುಗಳಲ್ಲಿ ಜೀವಸತ್ವಗಳು, ಖನಿಜಗಳು, ವಿಟಮಿನ್ ಎ, ವಿಟಮಿನ್ ಸಿ, ನಾರಿನಾಂಶ, ಕಬ್ಬಿಣಾಂಶ ಅಧಿಕವಾಗಿರುತ್ತದೆ. ರಕ್ತದಲ್ಲಿನ ಕಬ್ಬಿಣಾಂಶ ದೇಹ ಮತ್ತು ಮಿದುಳಿಗೆ ಆಮ್ಲಜನಕವನ್ನು ಸಮರ್ಪಕವಾಗಿ ಪೂರೈಸುತ್ತದೆ. ರಕ್ತಹೀನತೆಯನ್ನು ತಡೆಯುತ್ತದೆ. ತಾಜಾ ಹಣ್ಣು, ಹಣ್ಣಿನ ರಸ, ಸಲಾಡ್, ಸ್ಮೂದಿಗಳು, ಸೂಪ್ ನೀಡಬಹುದು.

6. **ನೀರು ದೇಹಕ್ಕೆ ಅಗತ್ಯ:** ದೇಹ ಶೇ 70ರಷ್ಟು ನೀರನ್ನು ಒಳಗೊಂಡಿದೆ. ನೀರನ್ನು ಚೆನ್ನಾಗಿ ಕುಡಿಯುವುದರಿಂದ ಬಾಯಾರಿಕೆ ನಿವಾರಣೆಯಾಗುತ್ತದೆ ಮತ್ತು ಆಯಾಸ, ತಲೆನೋವು ತಡೆಯುತ್ತದೆ. ಎಳನೀರು, ಕಬ್ಬಿನ ಹಾಲು, ನಿಂಬೆ ರಸ, ಮಿಲ್ಕ್ ಶೇಕ್, ಬಾದಾಮಿ ಹಾಲು, ಮಜ್ಜಿಗೆ, ಪಾನಕ ಕುಡಿಯಬಹುದು. ಕುಡಿಯುವ ನೀರಿಗೆ ತುಳಸಿ, ಪುದೀನಾ ಎಲೆಯನ್ನು ಬೆರೆಸಿದರೆ ನಿರ್ಜಲೀಕರಣವಾಗುವುದನ್ನು ತಪ್ಪಿಸಬಹುದು.

7. **ಅಧ್ಯಯನದ ಜತೆಗೆ ದೈಹಿಕ ಚಟುವಟಿಕೆಯೂ ಮುಖ್ಯ:** ಪ್ರತಿದಿನ ಕನಿಷ್ಠ ಇಪ್ಪತ್ತು ನಿಮಿಷವಾದರೂ ಕ್ರಿಕೆಟ್, ಬ್ಯಾಡ್ಮಿಂಟನ್, ಸ್ಕಿಪ್ಪಿಂಗ್, ವಾಕಿಂಗ್, ಸೈಕ್ಲಿಂಗ್ ಆಟಗಳಿಂದ ಉತ್ತಮ ಆಮ್ಲಜನಕ ಪೂರೈಕೆಯಾಗಿ ರಕ್ತ ಪರಿಚಲನೆ ಉತ್ತಮಗೊಳ್ಳುತ್ತದೆ. ಮಕ್ಕಳ ಮೂಳೆ ಮತ್ತು ಸ್ನಾಯುಗಳು ಬಲವಾಗುತ್ತವೆ. ಧ್ಯಾನ ಮತ್ತು ಯೋಗ ನಮ್ಮನ್ನು ಮಾನಸಿಕವಾಗಿ ಸದೃಢರನ್ನಾಗಿಸುವುದರ ಜತೆಗೆ ಏಕಾಗ್ರತೆ ಮಟ್ಟವನ್ನು ಸುಧಾರಿಸುತ್ತದೆ. ಆಲೋಚನೆ ಸಕಾರಾತ್ಮಕವಾಗುತ್ತದೆ.

8. **ಒತ್ತಡ ನಿವಾರಕ ಆಹಾರಕ್ಕೆ ಆದ್ಯತೆ:** ವಿಟಮಿನ್ ಬಿ ಕಾಂಪ್ಲೆಕ್ಸ್ ಮತ್ತು ಸಿ ನಂತಹ ಖನಿಜಾಂಶಗಳನ್ನು ಮಕ್ಕಳಿಗೆ ಹೆಚ್ಚಾಗಿ ನೀಡಿ. ಇವು ಮಿದುಳಿನಲ್ಲಿ ಆಡ್ರಿನಲ್ ಹಾರ್ಮೋನ್‌ಗಳನ್ನು ಬಿಡುಗಡೆ ಮಾಡಿ ಒತ್ತಡವನ್ನು ನಿಯಂತ್ರಿಸಲು ಸಹಾಯ ಮಾಡುತ್ತವೆ. ಒತ್ತಡವನ್ನು ಕಡಿಮೆ ಮಾಡಲು, ಏಕಾಗ್ರತೆಯನ್ನು ಹೆಚ್ಚಿಸಲು ಬ್ರಾಹ್ಮಿ ಅಥವಾ ಒಂದೆಲಗ, ಬೆಟ್ಟದ ನೆಲ್ಲಿಕಾಯಿ (ಆಮ್ಲಾ), ಅಶ್ವಗಂಧ ಆರೋಗ್ಯಕ್ಕೆ ಒಳ್ಳೆಯದು.

9. **ನಿದ್ರೆ ಮಾಡಲು ಬಿಡಿ:** ನಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯ ಎರಡಕ್ಕೂ 7-8 ಗಂಟೆಗಳ ನಿದ್ರೆ ಅಗತ್ಯ. ಅದರಲ್ಲಿಯೂ ಸಣ್ಣ ಮಕ್ಕಳಿಗೆ ಕನಿಷ್ಠ 10 ಗಂಟೆಗಳ ನಿದ್ರೆಯ ಅಗತ್ಯವಿದೆ. ಪರೀಕ್ಷೆಗಳು ಸಮೀಪಿಸುತ್ತಿರುವಂತೆ ಕೆಲವು ಮಕ್ಕಳು ಪರೀಕ್ಷೆಯ ಭಯದಲ್ಲಿ ನಿದ್ದೆಗೆಟ್ಟು ರಾತ್ರಿಯಿಡೀ ಓದಲು ಶುರು ಮಾಡ್ತಾರೆ. ಹೀಗೆ ಮಾಡುವುದರಿಂದ ಕಾರ್ಟಿಸೋಲ್ ಹಾರ್ಮೋನ್ ಪ್ರಮಾಣ ಹೆಚ್ಚಾಗಿ ನೆನಪಿನ ಶಕ್ತಿ ಮೇಲೆ ಪರಿಣಾಮ ಬೀರುತ್ತದೆ ಹಾಗೂ ಓದಿದ್ದನ್ನೆಲ್ಲ ಮರೆಯುವ ಸಾಧ್ಯತೆ ಇರುತ್ತದೆ. ನಿದ್ರೆ ಮಾಡುವುದರಿಂದ ಮಿದುಳಿಗೆ ಹೊಸ ವಿಷಯವನ್ನು ಕಲಿಯಲು, ನೆನಪಿಟ್ಟುಕೊಳ್ಳಲು ಸಹಾಯವಾಗುತ್ತದೆ.

10. **ಬಿಸಿ ಬಿಸಿ ತಾಜಾ ಆಹಾರ ನೀಡಿ:** ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಲು ಮನೆಯಲ್ಲಿ ಆಗಷ್ಟೆ ತಯಾರಿಸಿದ ಆರೋಗ್ಯಕರ ಮತ್ತು ಪೌಷ್ಟಿಕ ಆಹಾರವನ್ನು ನೀಡುವುದು ಅವಶ್ಯಕ. ಫ್ರಿಜ್‌ನಲ್ಲಿಟ್ಟ ಆಹಾರ ಪದಾರ್ಥ, ತಂಪು ಪಾನೀಯ ನೀಡಬೇಡಿ.

11. **ಜಂಕ್ ಫುಡ್‌ಗಳಿಂದ ದೂರವಿಡಿ:** ಜಂಕ್ ಫುಡ್‌ನಲ್ಲಿರುವ ಅಧಿಕ ಪ್ರಮಾಣದ ಸಕ್ಕರೆ ಮತ್ತು ಉಪ್ಪು ಆ ಕ್ಷಣಕ್ಕೆ ರಕ್ತದಲ್ಲಿ ಇದ್ದಕ್ಕಿದ್ದಂತೆ ಸಕ್ಕರೆಯ ಪ್ರಮಾಣವನ್ನು ಹೆಚ್ಚಿಸುತ್ತವೆ ಮತ್ತೆ ಸ್ವಲ್ಪ ಹೊತ್ತಿನ ನಂತರ ದೇಹದಲ್ಲಿ ಬೇಗ ಕರಗಿ ಹೊಟ್ಟೆ ಖಾಲಿ ಅನಿಸುತ್ತದೆ. ಚಾಕೊಲೇಟ್, ಪಿಜ್ಜಾ, ಬರ್ಗರ್, ಚಿಪ್ಸ್ ಕೊಡಬೇಡಿ.

ಲೇಖಕಿ: ಮಹಿಳಾ ಮತ್ತು ಮಕ್ಕಳ ಆಹಾರ ತಜ್ಞೆ

❖

II PUC BIOLOGY

REVISION : MODEL QUESTIONS

36. Name the cells that secrete androgens?
Ans:- Leydig cells.

37. Name the causative agent of Elephantiasis.
Ans:- Wuchereria bancrafti and Wuchereria malayi.

38. Mention the bacterium responsible for the large holes seen in Swiss Cheese.
Ans:- Propionibacterium sharmanii

39. Distinguish between homogametes and heterogametes.
Ans:-

Homogametes	*Heterogametes*
When both alleles of a gene are similar, then the individual is called homogamete.	When both alleles of a gene are dissimilar, then the individual is called heterogamete.
They are true breeding leading to purelines.	They are not true breeding.

40. What are homologous organs? Mention any 2 examples.
Ans:- The organs with same structural design and developmental origin but differing in their functions are called homologous organs. Forelimb of human being is homologous to forelimbs of whales and bats.

41. Introduction of some alien species causes biodiversity loss. Justify the statement with an example.
Ans:- i) The alien species become invasive and cause extinction or decline of indigenous species. ***Eg:*** the Nile perch introduced into Lale Victoria in east Africa led to the extinction of more than 200 species of cichlid fish in the lake.
ii) Loss of Habitat and fragmentation drive animals and plants to extinction. ***Eg:*** as the Amazon forest is cut and cleared for cultivating soya beans or for conversion of grasslands for raising forest is cut and cleared for cultivating soya beans or for conversion of grasslands for raising beef cattle, many species are affected.

42. What are sacred groves? Mention any two examples.
Ans:- Sacred groves are forest patches for worship in several parts of India. All the trees and wildlife in them were venerated and given total protection. They are found in Khashi and Jaintia Hills in Meghalaya, Western Ghat regions of Karnataka and Maharashtra etc.

Tribal's do not allow anyone to cut even a single branch of tree in these sacred groves, thus sacred groves have been free from all types of exploitations.

43. a) What are hermaphrodites? Mention one example.
Ans:- The animals bearing both male and female sex organs are called hermaphrodites.

b) Off springs of asexual reproduction are called clones. Why?
Ans:- In asexual reproduction, the off spring is morphologically and genetically identical to the parent and to each other. Hence, it is called clone.

44. Briefly explain the structure of pollen grains.
Ans:- a) Pollen grains are the mature microscope. The wall of the pollen grain is made up outer exine and an inner intine.
b) The exine is outer hard coat due to the presence of sporollenin.
c) The intine is made up of cellulose and pectin.
d) The pollen grain has germ pore through which the pollen tube germinate.
e) Enclosed within the wall are two unequal cells. The larger one is called the vegetative cell and the smaller one is called the generative cell.
f) The generative cells produce two male gametes or sperms, which takes part in double fertilization.

45. Mention the causes and effects of Phenylketonuria.
Ans:- The affected individuals lack an enzyme that catalyses the conversion of the amino acid phenylalanine is metabolised into phenyl pyruvic and other derivatives, accumulation of these chemicals in the brain results in mental retardation, these are also excreted in the urine as they are not absorbed by the kidney.

46. List the period, brain capacity and probable food of homoerectus stage of human evolution.
Ans:- Homoerectus were called Javaman, their period was 1.5 million years ago, these fossils were found in Java, their brain capacity is 900 cc, they eat meat.

47. Mention the different steps of process of recombinant DNA technology.
Ans:- The different steps of process of recombinant DNA technology are -
a) Isolation of DNA
b) Fragmentation DNA by restriction endonucleases.
c) Isolation of a desired DNA fragment.
d) Amplification of gene of interest using PCR.
e) Insertion of recombinant DNA into the host.
f) Culturing the host cells on a suitable medium at a large scale.
g) Extraction of the desired gene product.
h) Downstream processing of the products as finished product, ready for marketing.

(Contd……….)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಆಗಸ್ಟ್‌ಗೂ ಮೊದಲು ಲಾ ನಿನಾ ಪರಿಣಾಮ ಶುರು: ಜಾಗತಿಕ ಹವಾಮಾನ ಸಂಸ್ಥೆಗಳ ವಿಶ್ಲೇಷಣೆ

ಈ ಬಾರಿ ಉತ್ತಮ ಮುಂಗಾರಿನ ನಿರೀಕ್ಷೆ

ಮುಖ್ಯಾಂಶಗಳು

- ಎಲ್ ನಿನೊ ಪರಿಣಾಮ ದುರ್ಬಲ
- ಉತ್ತಮ ಮುಂಗಾರು ಕೃಷಿಗೆ ಶುಭ
- ಅತಿವೃಷ್ಟಿ ಸಾಧ್ಯತೆಯೂ ಇಲ್ಲದಿಲ್ಲ



ನವದೆಹಲಿ (ಪಿಟಿಐ): ಎಲ್ ನಿನೊ ಪರಿಣಾಮವು ಜೂನ್ ತಿಂಗಳಿಗೂ ಮೊದಲು ದುರ್ಬಲಗೊಳ್ಳಲಿದೆ, ಈ ಬಾರಿ ಮುಂಗಾರು ಮಳೆಯು ಚೆನ್ನಾಗಿ ಸುರಿಯಲಿದೆ ಎಂಬ ಆಶಾಭಾವನೆಯನ್ನು ಹವಾಮಾನ ತಜ್ಞರು ವ್ಯಕ್ತಪಡಿಸಿದ್ದಾರೆ.

ಜಗತ್ತಿನಾದ್ಯಂತ ಹವಾಮಾನದ ಮೇಲೆ ಪರಿಣಾಮ ಉಂಟುಮಾಡುವ ಎಲ್ ನಿನೊ ದುರ್ಬಲಗೊಳ್ಳುವುದು ಶುರುವಾಗಿದೆ ಎಂಬುದನ್ನು ಎರಡು ಜಾಗತಿಕ ಹವಾಮಾನ ಸಂಸ್ಥೆಗಳು ಕಳೆದ ವಾರ ಹೇಳಿವೆ.

ಆಗಸ್ಟ್‌ಗೂ ಮೊದಲು ಲಾ ನಿನಾ ಪರಿಣಾಮ ಶುರುವಾಗಬಹುದು ಎಂದು ಅವು ಹೇಳಿವೆ.

ಈ ಬೆಳವಣಿಗೆಗಳನ್ನು ಹತ್ತಿರದಿಂದ ಗಮನಿಸುತ್ತಿರುವ ಭಾರತದ ಹವಾಮಾನ ತಜ್ಞರು, ಜೂನ್–ಆಗಸ್ಟ್‌ಗೆ ಮೊದಲು ಲಾ ನಿನಾ ಪರಿಣಾಮ ಶುರುವಾದರೆ ಮುಂಗಾರು ಮಳೆಯು ಹಿಂದಿನ ವರ್ಷಕ್ಕಿಂತ ಚೆನ್ನಾಗಿ ಆಗಲಿದೆ ಎಂದು ಹೇಳಿದ್ದಾರೆ.

ಜೂನ್–ಜುಲೈಗೆ ಮೊದಲು ಲಾ ನಿನಾ ಪರಿಸ್ಥಿತಿ ನಿರ್ಮಾಣ ಆಗುವ ಸಾಧ್ಯತೆಗಳು ಹೆಚ್ಚಿವೆ ಎಂದು ಭೂವಿಜ್ಞಾನ ಸಚಿವಾಲಯದ ಮಾಜಿ ಕಾರ್ಯದರ್ಶಿ ಮಾಧವನ್ ರಾಜೀವನ್ ಹೇಳಿದ್ದಾರೆ.

‘ಎಲ್ ನಿನೊ ಪರಿಸ್ಥಿತಿಯು ಬದಲಾಗಿ, ಎಲ್ ನಿನೊ ಹಾಗೂ ಲಾ ನಿನಾ ಎರಡೂ ಇಲ್ಲದ ಸ್ಥಿತಿ (ಎನ್ಸೊ–ತಟಸ್ಥ ಸ್ಥಿತಿ) ಎದುರಾದರೂ ಮುಂಗಾರು ಮಳೆಯು ಈ ವರ್ಷದಲ್ಲಿ ಹಿಂದಿನ ವರ್ಷಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಆಗಲಿದೆ’ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ದೇಶದಲ್ಲಿ ಸುರಿಯುವ ಒಟ್ಟು ಮಳೆಯಲ್ಲಿ ಶೇಕಡ 70ರಷ್ಟು ಮಳೆ ನೈರುತ್ಯ ಮಾರುತಗಳಿಂದಾಗಿ ಆಗುತ್ತದೆ. ದೇಶದ ಜಿಡಿಪಿಗೆ ಶೇಕಡ 14ರಷ್ಟು ಕೊಡುಗೆ ನೀಡುವ ಕೃಷಿ ಕ್ಷೇತ್ರಕ್ಕೆ ಈ ಮಳೆಯು ಬಹಳ ಮಹತ್ವದ್ದು.

ಎಲ್ ನಿನೊ ಪರಿಣಾಮವು ಎನ್ಸೊ–ತಟಸ್ಥ ಸ್ಥಿತಿಯಾಗಿ ಪರಿವರ್ತನೆ ಕಾಣುವ ಸಾಧ್ಯತೆಯು ಶೇಕಡ 79ರಷ್ಟು ಇದೆ ಎಂದು ಅಮೆರಿಕದ ಎನ್‌ಒಎಎ ಸಂಸ್ಥೆ ಅಂದಾಜು ಮಾಡಿದೆ. ಹಾಗೆಯೇ, ಜೂನ್–ಆಗಸ್ಟ್ ವೇಳೆಗೆ ಲಾ ನಿನಾ ಪರಿಸ್ಥಿತಿ ನಿರ್ಮಾಣ ಆಗುವ ಸಾಧ್ಯತೆಯು ಶೇ 55ರಷ್ಟು ಇದೆ ಎಂದು ಕೂಡ ಅದು ಹೇಳಿದೆ.

ಎಲ್ ನಿನೊ ಪರಿಸ್ಥಿತಿ ದುರ್ಬಲಗೊಳ್ಳುವುದು ಶುರುವಾಗಿದೆ ಎಂದು ಐರೋಪ್ಯ ಒಕ್ಕೂಟದ ಕೋಪರ್ನಿಕಸ್ ಕ್ಲೈಮೇಟ್ ಚೇಂಜ್ ಸರ್ವಿಸ್ (ಸಿ3ಎಸ್) ಸಂಸ್ಥೆ ಖಚಿತಪಡಿಸಿದೆ. ‘ಈ ಸಂದರ್ಭದಲ್ಲಿ ನಾವು ಯಾವುದನ್ನೂ ಖಚಿತವಾಗಿ ಹೇಳುವ ಸ್ಥಿತಿಯಲ್ಲಿಲ್ಲ. ಕೆಲವು ಅಧ್ಯಯನಗಳು ಲಾ ನಿನಾ ಪರಿಸ್ಥಿತಿ ನಿರ್ಮಾಣ ಆಗಬಹುದು ಎನ್ನುತ್ತವೆ. ಇನ್ನು ಕೆಲವು ಅಧ್ಯಯನಗಳು ಎನ್ಸೊ–ತಟಸ್ಥ ಸ್ಥಿತಿ ನಿರ್ಮಾಣವಾಗಬಹುದು ಎನ್ನುತ್ತಿವೆ. ಆದರೆ ಎಲ್ಲ ಅಧ್ಯಯನಗಳೂ ಎಲ್ ನಿನೊ ಕೊನೆಗೊಳ್ಳುತ್ತಿರುವುದನ್ನು ಸೂಚಿಸುತ್ತಿವೆ’ ಎಂದು ಭಾರತೀಯ ಹವಾಮಾನ ಇಲಾಖೆಯ ಹಿರಿಯ ವಿಜ್ಞಾನಿ ಡಿ. ಶಿವಾನಂದ ಪೈ ತಿಳಿಸಿದರು.

‘ಎಲ್ ನಿನೊ ಪರಿಸ್ಥಿತಿಯು ಎನ್ಸೊ–ತಟಸ್ಥ ಸ್ಥಿತಿಯಾಗಿ ಪರಿವರ್ತನೆ ಕಂಡರೂ ಮುಂಗಾರು ಮಳೆಯು ಈ ವರ್ಷ ಹಿಂದಿನ ವರ್ಷಕ್ಕಿಂತ ಚೆನ್ನಾಗಿ ಆಗಲಿದೆ’ ಎಂದು ಪೈ ತಿಳಿಸಿದರು. 2023ರ ಮುಂಗಾರು ಅವಧಿಯಲ್ಲಿ ಭಾರತವು ಸರಾಸರಿ ವಾಡಿಕೆಗಿಂತ ಕಡಿಮೆ ಮಳೆಯನ್ನು ಕಂಡಿತ್ತು. ಎಲ್ ನಿನೊ ಪರಿಣಾಮದಿಂದಾಗಿ ಹೀಗಾಗಿದೆ ಎಂದು ತಜ್ಞರು ಹೇಳಿದ್ದರು.

ಜೂನ್ ತಿಂಗಳಿಗೂ ಮೊದಲು ನಾ ನಿನಾ ಪರಿಸ್ಥಿತಿ ನಿರ್ಮಾಣ ಆಗಬಹುದು ಎಂದು ಇತ್ತೀಚಿನ ಅಧ್ಯಯನಗಳು ಹೇಳುತ್ತಿವೆ. ಹೀಗಾದರೆ ಮುಂಗಾರು ಮಳೆಯು ಸಕಾಲದಲ್ಲಿ, ಚೆನ್ನಾಗಿ ಸುರಿಯುತ್ತದೆ ಎಂದು ಹವಾಮಾನ ತಜ್ಞ ರೋಕ್ಸಿ ಮ್ಯಾಥ್ಯೂ ಕೆ. ಹೇಳಿದರು. ತಾಪಮಾನ ಕಡಿಮೆ ಆಗದೆ ಇದ್ದರೆ, ಮಾರುತಗಳ ಪ್ರಭಾವ ಹೆಚ್ಚಿರುತ್ತದೆ, ಅತಿವೃಷ್ಟಿಯೂ ಆಗಬಹುದು ಎಂದರು.

ಸುದ್ದಿ 2 ನಿಮಿಷ

ಟಿಡಿಪಿ ಅಧಿಕಾರಕ್ಕೆ ಬಂದರೆ ‘ಸೂಪರ್ ಸಿಕ್ಸ್’ ಜಾರಿ

ಇಚ್ಛಾಪುರ (ಪಿಟಿಐ): ಆಂಧ್ರ ಪ್ರದೇಶದಲ್ಲಿನ 120 ವಿಧಾನಸಭಾ ಕ್ಷೇತ್ರಗಳ ಜನಸಾಮಾನ್ಯರು ಸೇರಿದಂತೆ ಪಕ್ಷದ ಕಾರ್ಯಕರ್ತರು, ಮುಖಂಡರನ್ನು ತಲುಪಲು ತೆಲುಗುದೇಶಂ (ಟಿಡಿಪಿ) ಪಕ್ಷದ ಪ್ರಧಾನ ಕಾರ್ಯದರ್ಶಿ ನಾರಾ ಲೋಕೇಶ್ ಅವರು ಭಾನುವಾರ ಶ್ರೀಕಾಕುಳಂ ಜಿಲ್ಲೆಯ ಇಚ್ಛಾಪುರದಿಂದ ರಾಜಕೀಯ ಯಾತ್ರೆ ಆರಂಭಿಸಿದರು.

3,132 ಕಿ.ಮೀ ಉದ್ದದ ‘ಯುವ ಗಳಂ’ ಪಾದಯಾತ್ರೆ ಕೊನೆಗೊಳಿಸಿದ ಸ್ಥಳದಿಂದಲೇ ಆರಂಭವಾದ ‘ಶಂಕರವರ್ಮ’ ಹೆಸರಿನ ಯಾತ್ರೆಯು, ಟಿಡಿಪಿ ಅಧಿಕಾರಕ್ಕೆ ಬಂದರೆ ಜಾರಿಗೊಳಿಸಲಿರುವ ಭವಿಷ್ಯದ ಯೋಜನೆಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಮತ್ತು ಪಕ್ಷಕ್ಕಾಗಿ ದುಡಿದ ಕಾರ್ಯಕರ್ತರನ್ನು ಸನ್ಮಾನಿಸುವ ಉದ್ದೇಶವನ್ನು ಹೊಂದಿದೆ.

‘ಯುವ ಗಳಂ’ ಪಾದಯಾತ್ರೆ ತಲುಪದ ಸ್ಥಳಗಳಲ್ಲಿ ಈ ರಾಜಕೀಯ ಯಾತ್ರೆ ನಡೆಯಲಿದೆ.

‘ಟಿಡಿಪಿ ಅಧಿಕಾರಕ್ಕೆ ಬಂದರೆ ‘ಸೂಪರ್ ಸಿಕ್ಸ್’ ಭರವಸೆಗಳನ್ನು ಜಾರಿಗೆ ತರಲಾಗುವುದು. ಇದರಲ್ಲಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ವರ್ಷಕ್ಕೆ ಪ್ರತಿ ಮನೆಗೆ ಮೂರು ಗ್ಯಾಸ್ ಸಿಲಿಂಡರ್ ಉಚಿತ, 20 ಲಕ್ಷ ಉದ್ಯೋಗಾವಕಾಶ ಅಥವಾ ತಿಂಗಳಿಗೆ ₹3 ಸಾವಿರ ನಿರುದ್ಯೋಗ ಭತ್ಯೆ ನೀಡುವುದು ಸೇರಿವೆ’ ಎಂದು ನಾರಾ ಲೋಕೇಶ್ ಹೇಳಿದರು.



ಹರಿಯಾಣ: ‘ದೆಹಲಿ ಚಲೊ’ ತಡೆಯಲು ಶತಪ್ರಯತ್ನ

ಚಂಡೀಗಢ (ಪಿಟಿಐ): ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರೈತರು ಫೆಬ್ರುವರಿ 13ಕ್ಕೆ ‘ದೆಹಲಿ ಚಲೊ’ಗೆ ಕರೆ ನೀಡಿದ್ದು, ರ್‍ಯಾಲಿ ತಡೆಯಲು ಹರಿಯಾಣ ಅಧಿಕಾರಿಗಳು ಪಂಜಾಬ್‌ನ ಅಂಬಾಲಾ ಸಮೀಪದ ಶಂಭು ಬಳಿ ಗಡಿಯನ್ನು ಮುಚ್ಚಿದ್ದಾರೆ. ಜೊತೆಗೆ, ಫತೇಹಾಬಾದ್ ಮತ್ತು ಜಿಂದ್ ಜಿಲ್ಲೆಗಳ ಗಡಿಗಳಲ್ಲಿ ಭಾರಿ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ.

ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕಾ ಕ್ರಮವಾಗಿ ಹರಿಯಾಣ ಸರ್ಕಾರವು, ಫೆ.11ರಿಂದ ಎರಡು ದಿನ ಅಂಬಾಲಾ, ಕುರುಕ್ಷೇತ್ರ, ಜಿಂದ್, ಹಿಸಾರ್, ಫತೇಹಾಬಾದ್ ಮತ್ತು ಸಿರ್ಸಾ ಜಿಲ್ಲೆಗಳಲ್ಲಿ ಮೊಬೈಲ್ ಇಂಟರ್ನೆಟ್ ಸ್ಥಗಿತ ಮಾಡಿದೆ.

ಶಂಭು ಗಡಿಯ ಸಮೀಪದ ಘಗ್ಗರ್ ಮೇಲ್ಸೇತುವೆಗೆ ಅಡ್ಡಲಾಗಿ ಬ್ಯಾರಿಕೇಡ್, ಮುಳ್ಳುತಂತಿಗಳನ್ನು ಹಾಕಲಾಗಿದೆ.

‘ಜಿಂದ್‌ನಲ್ಲಿ ಹರಿಯಾಣ–ಪಂಜಾಬ್ ಗಡಿ ಸಮೀಪದ ಎರಡು ರಸ್ತೆಗಳಲ್ಲಿ ವಾಹನ ಸಂಚಾರ ನಿಷೇಧಿಸಲಾಗಿದೆ. ಇನ್ನೂ ಎರಡು ರಸ್ತೆಗಳಿಗೆ ನಿರ್ಬಂಧ ಹಾಕಲಾಗುತ್ತದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದರು.

ಫತೇಹಾಬಾದ್ ಜಿಲ್ಲೆಯಲ್ಲಿಯೂ ರೈತರು ದೆಹಲಿಗೆ ತೆರಳುವುದನ್ನು ತಡೆಯಲು ಬ್ಯಾರಿಕೇಡ್‌ಗಳನ್ನು ರಸ್ತೆಗೆ ಅಡ್ಡಲಾಗಿ ಹಾಕಲಾಗಿದೆ.

ಲೂಟಿ–ಒಡೆದು ಆಳುವುದೇ ಕಾಂಗ್ರೆಸ್ ಧ್ಯೇಯ: ಪ್ರಧಾನಿ ನರೇಂದ್ರ ಮೋದಿ ಟೀಕೆ

‘ಬಿಜೆಪಿ 370 ಸ್ಥಾನಗಳ ಗಡಿ ದಾಟಲಿದೆ’

ಝಾಬುವಾ (ಮಧ್ಯಪ್ರದೇಶ) (ಪಿಟಿಐ): ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು 370 ಸ್ಥಾನಗಳ ಗಡಿ ದಾಟಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ವಿಶ್ವಾಸ ವ್ಯಕ್ತಪಡಿಸಿದರು.

ಇಲ್ಲಿ ನಡೆದ ಬುಡಕಟ್ಟು ಸಮುದಾಯದವರ ಸಮ್ಮೇಳನ ಉದ್ದೇಶಿಸಿ ಮಾತನಾಡಿದ ಅವರು, ‘ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ 400 ಸ್ಥಾನಗಳ ಗಡಿ ದಾಟಲಿದೆ ಎಂಬುದಾಗಿ ವಿರೋಧ ಪಕ್ಷಗಳ ಸದಸ್ಯರೇ ಸಂಸತ್‌ನಲ್ಲಿ ಹೇಳಿದ್ದಾರೆ’ ಎಂದರು.

‘ಪಕ್ಷವು 370 ಸ್ಥಾನಗಳಲ್ಲಿ ಗೆಲ್ಲಬೇಕಾದರೆ ಮತ ಚಲಾವಣೆ ಪ್ರಮಾಣ ಹೆಚ್ಚಬೇಕು. ಇದಕ್ಕಾಗಿ ಪ್ರತಿ ಮತಗಟ್ಟೆಯಲ್ಲಿ ಕಳೆದ ಚುನಾವಣೆಗಿಂತ ಹೆಚ್ಚುವರಿಯಾಗಿ 370 ಮತಗಳು ಬಿಜೆಪಿಗೆ ಬರುವುದನ್ನು ಖಾತ್ರಿಪಡಿಸಬೇಕು’ ಎಂದು ಮತದಾರರಿಗೆ ಅವರು ಮನವಿ ಮಾಡಿದರು.

‘ಮುಂಬರುವ ಚುನಾವಣೆಗಾಗಿ ಮತ ಕೇಳಲು ನಾನು ಇಲ್ಲಿಗೆ ಬಂದಿಲ್ಲ. ಇತ್ತೀಚೆಗೆ ನಡೆದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಭಾರಿ ಬಹುಮತದಿಂದ ಗೆಲ್ಲಿಸಿರುವುದಕ್ಕಾಗಿ ನಿಮಗೆ ಧನ್ಯವಾದ ಹೇಳಲು ಒಬ್ಬ ಸೇವಕನಾಗಿ ನಿಮ್ಮ ಮುಂದೆ ಬಂದಿದ್ದೇನೆ’ ಎಂದು ಮೋದಿ ಹೇಳಿದರು.

ರಾಜ್ಯದಲ್ಲಿ ಕೈಗೊಂಡಿರುವ ₹7,550 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳನ್ನು ಪ್ರಸ್ತಾಪಿಸಿದ ಅವರು, ‘ಮಧ್ಯಪ್ರದೇಶದಲ್ಲಿ ನಮ್ಮ ಡಬಲ್ ಎಂಜಿನ್ ಸರ್ಕಾರ ಡಬಲ್ ವೇಗದಿಂದ ಕೆಲಸ ಮಾಡುತ್ತಿದೆ’ ಎಂದರು.



ಮಧ್ಯಪ್ರದೇಶದ ಝಾಬುವಾದಲ್ಲಿ ಭಾನುವಾರ ನಡೆದ ಬುಡಕಟ್ಟು ಸಮುದಾಯಗಳ ಸಮ್ಮೇಳನ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ವಿವಿಧ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ ನಡೆಸಿದರು —ಪಿಟಿಐ ಚಿತ್ರ

> **ಚುನಾವಣೆಗಳು ಬಂದಾಗ ಮಾತ್ರ ಕಾಂಗ್ರೆಸ್‌ಗೆ ಗ್ರಾಮೀಣ ಪ್ರದೇಶ, ಬಡವರು ನೆನಪಾಗುತ್ತಾರೆ. ಲೂಟಿ ಮಾಡುವುದು ಹಾಗೂ ಒಡೆದು ಆಳುವುದೇ ಆ ಪಕ್ಷದ ಧ್ಯೇಯವಾಗಿದೆ**
> **ನರೇಂದ್ರ ಮೋದಿ,** ಪ್ರಧಾನಿ

ಭಾರತೀಯ ಮೌಲ್ಯಾಧಾರಿತ ಶಿಕ್ಷಣ ಇಂದಿನ ತುರ್ತು: ನರೇಂದ್ರ ಮೋದಿ

ಟಂಕಾರಾ(ಗುಜರಾತ್)(ಪಿಟಿಐ): ಭಾರತೀಯ ಮೌಲ್ಯಗಳ ಆಧಾರದಲ್ಲಿ ರಚಿತವಾದ ಶಿಕ್ಷಣ ಪದ್ಧತಿ ಇಂದಿನ ತುರ್ತು ಅಗತ್ಯವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.

ಮೊರ್ಬಿ ಜಿಲ್ಲೆಯ ಟಂಕಾರಾದಲ್ಲಿ ಹಮ್ಮಿಕೊಂಡಿದ್ದ ಆರ್ಯ ಸಮಾಜ ಸಂಸ್ಥಾಪಕ ಸ್ವಾಮಿ ದಯಾನಂದ ಸರಸ್ವತಿ ಅವರ 200ನೇ ಜನ್ಮದಿನ ಆಚರಣೆ ಕಾರ್ಯಕ್ರಮವನ್ನು ವರ್ಚುವಲ್ ಆಗಿ ಉದ್ದೇಶಿಸಿ ಅವರು ಮಾತನಾಡಿದರು.

‘ಆರ್ಯ ಸಮಾಜ ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳು ಭಾರತೀಯ ಮೌಲ್ಯಗಳನ್ನು ಆಧರಿಸಿದ ಶಿಕ್ಷಣ ನೀಡುವ ಕೇಂದ್ರಗಳಾಗಿವೆ. ಇಂತಹ ಶಿಕ್ಷಣ ಪದ್ಧತಿಯನ್ನು ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಮೂಲಕ ದೇಶದಾದ್ಯಂತ ವಿಸ್ತರಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ನಡೆಯುತ್ತಿರುವ ಪ್ರಯತ್ನಗಳು ಹಾಗೂ ಸಮಾಜದ ನಡುವೆ ಸಂಪರ್ಕ ಬೆಸೆಯುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ’ ಎಂದರು.

‘ದೇಶದ ಜನರು ಮೌಢ್ಯ ಹಾಗೂ ಗುಲಾಮಗಿರಿಯಲ್ಲಿ ಸಿಲುಕಿ ತೊಳಲಾಡುತ್ತಿದ್ದ ಸಮಯದಲ್ಲಿ ವೇದಗಳ ಅಧ್ಯಯನಕ್ಕೆ ಮರಳುವಂತೆ ದಯಾನಂದ ಸರಸ್ವತಿ ಅವರು ಸಮಾಜಕ್ಕೆ ಕರೆ ನೀಡಿದರು’ ಎಂದು ಮೋದಿ ಹೇಳಿದರು.

‘ಸಮಾಜದ ಒಂದು ವರ್ಗ ಭಾರತೀಯ ಸಂಸ್ಕೃತಿ ಮತ್ತು ಅಧ್ಯಾತ್ಮದಿಂದ ದೂರವಾಗುತ್ತಿದ್ದ ಕಾಲದಲ್ಲಿ, ವೇದಗಳ ಅಧ್ಯಯನ, ಅವುಗಳು ತೋರಿದ ಮಾರ್ಗದಲ್ಲಿ ನಡೆಯುವಂತೆ ಸಮಾಜಕ್ಕೆ ಕರೆ ನೀಡಿದವರು ಸ್ವಾಮಿ ದಯಾನಂದ ಸರಸ್ವತಿ’ ಎಂದ ಮೋದಿ, ‘ಅವರು ವಿಶ್ವ ಸಂತ ಮಾತ್ರವಲ್ಲ, ನಮ್ಮ ರಾಷ್ಟ್ರೀಯ ಪ್ರಜ್ಞೆಯೂ ಹೌದು’ ಎಂದರು.

‘ಸ್ವಾಮಿನಾಥನ್ ಶಿಫಾರಸು ಜಾರಿಗೊಳಿಸಿ’

ಮುಂಬೈ (ಪಿಟಿಐ): ಡಾ.ಎಂ.ಎಸ್. ಸ್ವಾಮಿನಾಥನ್ ಅವರಿಗೆ ಕೇಂದ್ರ ಸರ್ಕಾರ ಭಾರತ ರತ್ನ ಘೋಷಣೆ ಮಾಡಿದೆ. ಆದರೆ, ಕೃಷಿ ಆದಾಯ ಹೆಚ್ಚಿಸಬೇಕು ಎಂದು ಸ್ವಾಮಿನಾಥನ್ ನೇತೃತ್ವದ ಆಯೋಗ ಮಾಡಿದ್ದ ಶಿಫಾರಸುಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಫಲವಾಗಿದೆ ಎಂದು ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ಭಾನುವಾರ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

‘ಲೋಕಸಭಾ ಚುನಾವಣೆಯಲ್ಲಿ ಬಿಹಾರ ಜನರ ಮತಗಳನ್ನು ಸೆಳೆಯುವ ಉದ್ದೇಶದೊಂದಿಗೆ ಮೋದಿ ಸರ್ಕಾರವು ಮಾಜಿ ಮುಖ್ಯಮಂತ್ರಿ ಕರ್ಪೂರಿ ಠಾಕೂರ್ ಅವರಿಗೆ ಭಾರತ ರತ್ನ ಘೋಷಣೆ ಮಾಡಿದೆ’ ಎಂದರು.

‘ಸರ್ಕಾರಿ ಹುದ್ದೆಗಳಲ್ಲಿ ಶೇ 26ರಷ್ಟು ಮೀಸಲಾತಿ ಜಾರಿಗೆ ತರುವ ಠಾಕೂರ್ ಅವರ ನಿರ್ಧಾರವನ್ನು ಆಗಿನ ಭಾರತೀಯ ಜನಸಂಘವು ವಿರೋಧಿಸಿತ್ತು. ಆದರೆ, ಲೋಕಸಭೆ ಚುನಾವಣೆ ವೇಳೆ ಬಿಹಾರದ ಜನರ ಮತಗಳು ಬೇಕಿರುವುದರಿಂದ ಬಿಜೆಪಿಯು ಠಾಕೂರ್‌ಗೆ ಮರಣೋತ್ತರವಾಗಿ ಭಾರತ ರತ್ನ ಘೋಷಿಸಿದೆ. ಹಲವು ವರ್ಷಗಳ ಬಳಿಕವಾದರೂ, ಅವರ ಕೆಲಸವನ್ನು ಗುರುತಿಸಿರುವುದು ಖುಷಿ ತಂದಿದೆ’ ಎಂದರು.

ಬಾಕಿ ಉಳಿದ ನಾಲ್ಕು ಮಸೂದೆಗಳು

ಪ್ರಜಾವಾಣಿ ವಾರ್ತೆ

ನವದೆಹಲಿ: ಹೆಣ್ಣುಮಕ್ಕಳ ಮದುವೆಯ ಕನಿಷ್ಠ ವಯಸ್ಸನ್ನು 18ರ ಬದಲು 21ಕ್ಕೆ ಹೆಚ್ಚಿಸಲು ಅವಕಾಶ ಕಲ್ಪಿಸುವ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿ ಎರಡು ವರ್ಷಗಳು ಕಳೆದಿವೆ. ಆದರೆ ಮಸೂದೆಗೆ ಅನುಮೋದನೆ ಸಿಕ್ಕಿಲ್ಲ. ಈಗ ಪ್ರಸಕ್ತ ಲೋಕಸಭೆಯ ಅವಧಿ ಕೊನೆಗೊಳ್ಳುತ್ತಿರುವ ಕಾರಣ, ಈ ಮಸೂದೆಯನ್ನು ಹೊಸ ಲೋಕಸಭೆಯಲ್ಲಿ ಪುನಃ ಮಂಡಿಸಬೇಕಾಗುತ್ತದೆ.

ಈ ಮಸೂದೆ ಸೇರಿ ಒಟ್ಟು ನಾಲ್ಕು ಮಸೂದೆಗಳಿಗೆ ಇದೇ ಗತಿ ಒದಗಿದೆ. ವಿವಾದಿತ ‘ವಿದ್ಯುಚ್ಛಕ್ತಿ (ತಿದ್ದುಪಡಿ) ಮಸೂದೆ’, ‘ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ, ಕಲ್ಯಾಣ (ತಿದ್ದುಪಡಿ) ಮಸೂದೆ’, ‘ಅಂತರರಾಜ್ಯ ನದಿ ನೀರು ವ್ಯಾಜ್ಯಗಳ (ತಿದ್ದುಪಡಿ) ಮಸೂದೆ’ಯನ್ನು ಕೂಡ ಹೊಸದಾಗಿ ಅಸ್ತಿತ್ವಕ್ಕೆ ಬರುವ ಲೋಕಸಭೆಯಲ್ಲಿ ಹೊಸದಾಗಿ ಮಂಡಿಸಬೇಕಾಗುತ್ತದೆ.

ಲೋಕಸಭೆಯಲ್ಲಿ ಮಂಡನೆಯಾದ ಮಸೂದೆಗಳಿಗೆ ಲೋಕಸಭೆಯಲ್ಲಿ ಅಥವಾ ರಾಜ್ಯಸಭೆಯಲ್ಲಿ ಅಂಗೀಕಾರ ಬಾಕಿ ಉಳಿದಿದ್ದರೆ, ಲೋಕಸಭೆಯ ಅವಧಿ ಕೊನೆಗೊಳ್ಳುವಾಗ ಇಂತಹ ಮಸೂದೆಗಳ ಅವಧಿಯೂ ಕೊನೆಗೊಳ್ಳುತ್ತದೆ. ಮಂಡನೆಯಾದ ಮಸೂದೆಗಳ ಪೈಕಿ 20 ಮಸೂದೆಗಳನ್ನು ಹಿಂಪಡೆಯಲಾಯಿತು, ಶೇಕಡ 16ರಷ್ಟು ಮಸೂದೆಗಳನ್ನು ವಿಸ್ತೃತ ಪರಿಶೀಲನೆಗಾಗಿ ಸಮಿತಿಗಳಿಗೆ ವಹಿಸಲಾಯಿತು ಎಂದು ಪಿಆರ್‌ಎಸ್ ಸಂಸ್ಥೆಯ ಅಧ್ಯಯನವು ಹೇಳಿದೆ. ಹೀಗೆ ಸಮಿತಿಗಳ ಪರಿಶೀಲನೆಗೆ ವರ್ಗಾವಣೆ ಆದ ಮಸೂದೆಗಳ ಪ್ರಮಾಣವು ಹಿಂದಿನ ಮೂರು ಲೋಕಸಭೆಗಳ ಅವಧಿಯಲ್ಲಿ ವರ್ಗಾವಣೆ ಆಗಿದ್ದ ಮಸೂದೆಗಳ ಪ್ರಮಾಣಕ್ಕೆ ಹೋಲಿಸಿದರೆ ಕಡಿಮೆ.

ಹೆಣ್ಣುಮಕ್ಕಳ ಮದುವೆಯ ವಯಸ್ಸನ್ನು ಹೆಚ್ಚು ಮಾಡುವ ಪ್ರಸ್ತಾವ ಇರುವ ಮಸೂದೆಯನ್ನು ಸ್ಥಾಯಿ ಸಮಿತಿಗೆ ವಹಿಸಲಾಗಿದೆ. ಈ ಸಮಿತಿಯ ಅವಧಿಯನ್ನು ಜನವರಿ 24ರಂದು ನಾಲ್ಕು ತಿಂಗಳ ಅವಧಿಗೆ ವಿಸ್ತರಿಸಲಾಯಿತು. ಇದು ಏಳನೆಯ ಅವಧಿ ವಿಸ್ತರಣೆ. ಬಜೆಟ್ ಅಧಿವೇಶನದಲ್ಲಿ ಈ ಮಸೂದೆಯು ಸಂಸತ್ತಿನ ಅಂಗೀಕಾರ ಪಡೆಯುವುದಿಲ್ಲ ಎಂದು ಆಗಲೇ ಗೊತ್ತಾಗಿತ್ತು.

ವಿದ್ಯುಚ್ಛಕ್ತಿ (ತಿದ್ದುಪಡಿ) ಮಸೂದೆಯನ್ನು ರಾಜ್ಯಗಳು ವಿರೋಧಿಸಿದ್ದವು. ಇದಕ್ಕೆ ಸಂಸತ್ತಿನ ಅಂಗೀಕಾರ ಪಡೆಯುವ ಮೊದಲು ಸಂಬಂಧಪಟ್ಟವರ ಸಮ್ಮತಿ ಪಡೆಯಲು ಕೇಂದ್ರ ಮುಂದಾಗಿದ್ದರಿಂದ ಅಂಗೀಕಾರ ಸಿಗಲಿಲ್ಲ. ಅಂತರರಾಜ್ಯ ನದಿ ನೀರು ವಿವಾದಗಳ (ತಿದ್ದುಪಡಿ) ಮಸೂದೆಗೆ ಲೋಕಸಭೆ ಅಂಗೀಕಾರ ನೀಡಿದ್ದರೂ, ರಾಜ್ಯಸಭೆಯಲ್ಲಿ ಬಾಕಿಯಿದೆ.

ಸಂಕ್ಷಿಪ್ತ ಸುದ್ದಿ

ಕಾನ್‌ಸ್ಟೆಬಲ್ ಹುದ್ದೆ ಕನ್ನಡದಲ್ಲೂ ನೇಮಕಾತಿ ಪರೀಕ್ಷೆ

ನವದೆಹಲಿ: ಸಿಆರ್‌ಪಿಎಫ್, ಬಿಎಸ್‌ಎಫ್ ಮತ್ತು ಸಿಐಎಸ್‌ಎಫ್‌ನಂಥ ಅರೆಸೇನಾಪಡೆಗಳ ಕಾನ್‌ಸ್ಟೆಬಲ್ ನೇಮಕಾತಿ ಪರೀಕ್ಷೆಯನ್ನು ಇದೇ ಮೊದಲ ಬಾರಿಗೆ ಕನ್ನಡ ಸೇರಿದಂತೆ 13 ಪ್ರಾದೇಶಿಕ ಭಾಷೆಗಳಲ್ಲಿ ಫೆ.20ರಿಂದ ಮಾರ್ಚ್ 7ರವರೆಗೆ ನಡೆಸಲಾಗುವುದು ಎಂದು ಕೇಂದ್ರ ಗೃಹ ಸಚಿವಾಲಯ ಭಾನುವಾರ ತಿಳಿಸಿದೆ.

ದೇಶದಾದ್ಯಂತ ಸುಮಾರು 128 ನಗರಗಳಲ್ಲಿ 48 ಲಕ್ಷ ಆಕಾಂಕ್ಷಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ ಎಂದು ಅದು ತಿಳಿಸಿದೆ.

ಹಿಂದಿ ಮತ್ತು ಇಂಗ್ಲಿಷ್ ಜೊತೆಗೆ ಕನ್ನಡ, ಅಸ್ಸಾಮಿ, ಗುಜರಾತಿ, ಮಲಯಾಳಂ, ತಮಿಳು, ತೆಲುಗು, ಒಡಿಯಾ, ಉರ್ದು, ಪಂಜಾಬಿ, ಮಣಿಪುರಿ ಮತ್ತು ಕೊಂಕಣಿ ಭಾಷೆಗಳಲ್ಲಿ ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸಲಾಗಿದೆ. ಪ್ರಾದೇಶಿಕ ಭಾಷೆಗಳಲ್ಲೂ ಇಂಥ ನೇಮಕಾತಿ ಪರೀಕ್ಷೆಗಳನ್ನು ನಡೆಸುವುದಾಗಿ ಕಳೆದ ವರ್ಷದ ಏಪ್ರಿಲ್‌ನಲ್ಲಿ ಘೋಷಿಸಲಾಗಿತ್ತು ಎಂದು ತಿಳಿಸಿದೆ.

ಇಂದು ಅಯೋಧ್ಯೆಗೆ ಕೇಜ್ರಿವಾಲ್

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರು ಸೋಮವಾರ ಅಯೋಧ್ಯೆಯ ರಾಮಮಂದಿರಕ್ಕೆ ಭೇಟಿ ನೀಡಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಈ ವೇಳೆ ಅವರ ಕುಟುಂಬದ ಸದಸ್ಯರು ಇರಲಿದ್ದಾರೆ ಎಂದು ತಿಳಿದುಬಂದಿದೆ.

ಜನವರಿ 22ರಂದು ಅಯೋಧ್ಯೆಯಲ್ಲಿ ನಡೆದ ಬಾಲರಾಮ ವಿಗ್ರಹದ ಪ್ರಾಣಪ್ರತಿಷ್ಠಾಪನೆ ಕಾರ್ಯಕ್ರಮಕ್ಕೆ ಕೇಜ್ರಿವಾಲ್ ಅವರಿಗೆ ಆಹ್ವಾನ ನೀಡಲಾಗಿತ್ತು. ಆದರೆ, ತಮ್ಮ ಪೋಷಕರು, ಪತ್ನಿ ಮತ್ತು ಮಕ್ಕಳ ಜೊತೆಗೆ ಅಯೋಧ್ಯೆಗೆ ಭೇಟಿ ನೀಡುವುದಾಗಿ ಅವರು ಹೇಳಿದ್ದರು.

‘ಮೀಸಲಾತಿ ಸಿಗುವವರೆಗೂ ಹೋರಾಟ’

ಮುಂಬೈ: ಮರಾಠ ಸಮುದಾಯಕ್ಕೆ ಇತರೆ ಹಿಂದುಳಿದ ವರ್ಗಗಳ ಅಡಿ ಮೀಸಲಾತಿ ಕಲ್ಪಿಸುವುದಾಗಿ ಸರ್ಕಾರ ನೀಡಿರುವ ಭರವಸೆ ಈಡೇರುವವರೆಗೆ ಉಪವಾಸ ಸತ್ಯಾಗ್ರಹ ಮುಂದುವರಿಸುವುದಾಗಿ ಮರಾಠ ಮೀಸಲಾತಿ ಹೋರಾಟಗಾರ ಮನೋಜ್ ಜಾರಾಂಗೆ ಪಾಟೀಲ್ ಅವರು ಹೇಳಿದ್ದಾರೆ.

ಜಲ್ನಾ ಜಿಲ್ಲೆಯ ಅಂತರ್ವಲಿ ಸಾರಥಿ ಗ್ರಾಮದಲ್ಲಿ ಜಾರಾಂಗೆ ಅವರು ಶನಿವಾರದಿಂದ ಉಪವಾಸ ಸತ್ಯಾಗ್ರಹ ಆರಂಭಿಸಿದ್ದಾರೆ.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, ‘ಮರಾಠ ಸಮುದಾಯಕ್ಕೆ ಎಲ್ಲ ಸೌಲಭ್ಯಗಳು ಸಿಗುವವರೆಗೆ ಪ್ರತಿಭಟನೆ ಮುಂದುವರಿಯಲಿದೆ’ ಎಂದರು.



ಜರಾಂಗೆ

‘ಮರಾಠ ಸಮುದಾಯಕ್ಕೆ ಒಬಿಸಿ ಮೀಸಲಾತಿಯನ್ನು ವಿಸ್ತರಿಸುವ ಕರಡು ಅಧಿಸೂಚನೆಯನ್ನು ಮುಖ್ಯಮಂತ್ರಿ ಏಕನಾಥ ಶಿಂದೆ ಸರ್ಕಾರವು ಹೊರಡಿಸಿದೆ. ಆದರೆ, ಇದಕ್ಕೆ ಕಾಯ್ದೆ ರೂಪ ನೀಡಲು ವಿಳಂಬ ಮಾಡುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ನಿಮ್ಮ ಪೋಷಕರು ನನಗೆ ಮತ ಹಾಕದಿದ್ದರೆ ಊಟ ಬಿಡಿ’

ಮುಂಬೈ (ಪಿಟಿಐ): ‘ಮುಂಬರುವ ಚುನಾವಣೆಯಲ್ಲಿ ನಿಮ್ಮ ಪೋಷಕರು ನನಗೆ ಮತ ಹಾಕದಿದ್ದರೆ, ಎರಡು ದಿನ ಊಟ ಮಾಡಬೇಡಿ’ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಬಣದ ಶಾಸಕರೊಬ್ಬರು ಮಕ್ಕಳನ್ನು ಉದ್ದೇಶಿಸಿ ಹೇಳಿರುವುದು ವಿವಾದವನ್ನುಂಟು ಮಾಡಿದೆ.

ಚುನಾವಣೆಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಮಕ್ಕಳನ್ನು ಬಳಸಿಕೊಳ್ಳದಂತೆ ಚುನಾವಣಾ ಆಯೋಗ ನಿರ್ದೇಶನ ನೀಡಿರುವ ಬೆನ್ನಲ್ಲೇ, ಕಲಮನೂರಿ ವಿಧಾನಸಭಾ ಕ್ಷೇತ್ರದ ಶಾಸಕ ಸಂತೋಷ್ ಬಾಂಗರ್ ಅವರು ಈ ಹೇಳಿಕೆ ನೀಡಿದ್ದಾರೆ. ಹಿಂಗೋಳಿ ಜಿಲ್ಲೆಯ ಶಾಲೆಯೊಂದಕ್ಕೆ ಭೇಟಿ ನೀಡಿದ ವೇಳೆ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಈ ರೀತಿ ಹೇಳಿದ್ದಾರೆ ಎನ್ನಲಾದ ಈ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ಊಟ ಮಾಡದೆ ಇರಲು ಕಾರಣವೇನು ಎಂದು ತಮ್ಮ ಪೋಷಕರು ಕೇಳಿದಾಗ, ಸಂತೋಷ್ ಬಾಂಗರ್ ಅವರಿಗೆ ಮತ ಹಾಕಿದರೆ ಮಾತ್ರ ಊಟ ಮಾಡುವುದಾಗಿ ಹೇಳಬೇಕು ಎಂದು ಮಕ್ಕಳಿಗೆ ಹೇಳಿಕೊಟ್ಟಿರುವುದು ವಿಡಿಯೊದಲ್ಲಿ ದಾಖಲಾಗಿದೆ. ಈ ಕಾರ್ಯಕ್ರಮದಲ್ಲಿದ್ದ ಮಕ್ಕಳೆಲ್ಲರೂ 10 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದರು ಎನ್ನಲಾಗಿದೆ.

ಮಕ್ಕಳಿಗೆ ಈ ರೀತಿ ಹೇಳಿಕೊಟ್ಟಿರುವ ಬಾಂಗರ್ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಪಕ್ಷಗಳಾದ ಕಾಂಗ್ರೆಸ್ ಮತ್ತು ಶರದ್ ಪವಾರ್ ನೇತೃತ್ವದ ಎನ್‌ಸಿಪಿ ಒತ್ತಾಯಿಸಿವೆ.

‘ಬಿಜೆಪಿ, ಆರ್‌ಎಸ್‌ಎಸ್‌ನಿಂದ ದ್ವೇಷ ಬಿತ್ತುವ ಕೆಲಸ’

ಛತ್ತೀಸಗಢದಲ್ಲಿ ಮತ್ತೆ ಆರಂಭಗೊಂಡ ‘ಭಾರತ ಜೋಡೊ ನ್ಯಾಯ ಯಾತ್ರೆ’ಯಲ್ಲಿ ರಾಹುಲ್ ಟೀಕೆ

ರಾಯಗಢ (ಛತ್ತೀಸಗಢ) (ಪಿಟಿಐ): ‘ದೇಶದಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ದ್ವೇಷ ಹಬ್ಬಿಸುವ ಕಾರ್ಯ ಮಾಡುತ್ತಿವೆ. ಆದರೆ, ದೇಶದ ಡಿಎನ್‌ಎದಲ್ಲಿ ಪ್ರೀತಿ ಇದೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾನುವಾರ ಹೇಳಿದರು.

ಎರಡು ದಿನಗಳ ವಿರಾಮದ ನಂತರ ಇಲ್ಲಿ ಮತ್ತೆ ಆರಂಭಗೊಂಡ ಭಾರತ ಜೋಡೊ ನ್ಯಾಯ ಯಾತ್ರೆ ಅಂಗವಾಗಿ ಹಮ್ಮಿಕೊಂಡಿದ್ದ ಬಹಿರಂಗ ಸಭೆ ಉದ್ದೇಶಿಸಿ ಮಾತನಾಡಿದ ಅವರು, ‘ನಮ್ಮ ಮುಂದಿನ ಪೀಳಿಗೆಗೆ ದ್ವೇಷ ಮತ್ತು ಹಿಂಸೆಯಿಂದ ಮುಕ್ತವಾದ ಹಿಂದೂಸ್ತಾನ ರೂಪಿಸುವುದೇ ಕಾಂಗ್ರೆಸ್‌ನ ಬಯಕೆ’ ಎಂದರು.

‘ಸದ್ಯದ ಸನ್ನಿವೇಶದಲ್ಲಿ ದೇಶದ ಮೂಲೆಮೂಲೆಯಲ್ಲಿಯೂ ದ್ವೇಷ ಮತ್ತು ಹಿಂಸಾಚಾರ ಪ್ರಸರಣ ಮಾಡಲಾಗುತ್ತಿದೆ. ಭಾಷೆ ಇಲ್ಲವೇ ಅವರು ವಾಸಿಸುವ ರಾಜ್ಯಗಳ ಕಾರಣದಿಂದಾಗಿ ಬೇರೆಯವರನ್ನು ದ್ವೇಷಿಸುವುದಾಗಿ ಕೆಲವರು ಹೇಳುತ್ತಿದ್ದಾರೆ. ಇಂಥ ಆಲೋಚನೆಗಳು ದೇಶವನ್ನು ದುರ್ಬಲಗೊಳಿಸುತ್ತವೆ’ ಎಂದು ಹೇಳಿದರು.

ಹಿಂಸಾಚಾರ ಪೀಡಿತ ಮಣಿಪುರಕ್ಕೆ ಭೇಟಿ ನೀಡದಿರುವ ಪ್ರಧಾನಿ ನರೇಂದ್ರ ಮೋದಿ ಅವರ ನಡೆಯನ್ನು ಖಂಡಿಸಿದ ಅವರು, ‘ಕಳೆದ ಮೇನಲ್ಲಿ ಭುಗಿಲೆದ್ದ ಹಿಂಸಾಚಾರದಲ್ಲಿ ನೂರಾರು ಜನರು ಪ್ರಾಣ ಕಳೆದುಕೊಂಡಿದ್ದಾರೆ. ನೂರಾರು ಮನೆಗಳನ್ನು ಸುಡಲಾಗಿದೆ’ ಎಂದರು.

‘ನಾನು ಮಣಿಪುರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ, ಮೈತೇಯಿ ಸಮುದಾಯದವರನ್ನು ನಿಮ್ಮ ಭದ್ರತಾ ಕಾರ್ಯಕ್ಕೆ ನೇಮಿಸಿಕೊಳ್ಳಬೇಡಿ ಎಂದು ಕುಕಿ ಜನರು ಹೇಳಿದರು. ಕುಕಿ ಸಮುದಾಯವರನ್ನು ನೇಮಿಸಿಕೊಳ್ಳದಂತೆ ಮೈತೇಯಿ ಜನರು ಹೇಳಿದ್ದರು. ಈಶಾನ್ಯ ರಾಜ್ಯದಲ್ಲಿ ಅಂತರ್ಯುದ್ಧ ನಡೆಯುತ್ತಿದ್ದರೆ, ಮತ್ತೊಂದೆಡೆ ಕೇಂದ್ರ ಸರ್ಕಾರ ನಿಯಂತ್ರಣ ಕಳೆದುಕೊಂಡಿದೆ’ ಎಂದು ದೂರಿದರು.

‘ನ್ಯಾಯಬೇಕು’: ತಾವು ಸಂಚರಿಸುವ ವಾಹನ ಏರಿದ ಮಕ್ಕಳಿಗೆ ಚಾಕೊಲೇಟ್ ನೀಡಿದ ರಾಹುಲ್ ಗಾಂಧಿ, ‘ನಿನಗೆ ನ್ಯಾಯ ಬೇಕೋ, ಅನ್ಯಾಯ ಬೇಕೋ’ ಎಂದು ಒಬ್ಬ ಬಾಲಕಿಯನ್ನು ಪ್ರಶ್ನಿಸಿದರು.

ಇದಕ್ಕೆ ಉತ್ತರಿಸಿದ ಬಾಲಕಿ, ‘ನನಗೆ ನ್ಯಾಯ ಬೇಕು. ನನ್ನ ಭಾರತವನ್ನು ಬಹುವಾಗಿ ಪ್ರೀತಿಸುತ್ತೇನೆ. ನನಗೆ ಪ್ರೀತಿ ತುಂಬಿರುವ ಹಿಂದೂಸ್ತಾನ ಬೇಕು’ ಎಂದು ಉತ್ತರಿಸಿದಳು.

ಗೌರವ: ಇದಕ್ಕೂ ಮುನ್ನ, ರಾಹುಲ್ ಇಲ್ಲಿನ ಗಾಂಧಿ ಚೌಕ್‌ನಲ್ಲಿನ ಮಹಾತ್ಮ ಗಾಂಧಿ ಪ್ರತಿಮೆಗೆ ಗೌರವ ಸಲ್ಲಿಸಿ, ಯಾತ್ರೆ ಮುಂದುವರಿಸಿದರು.



ಛತ್ತೀಸಗಢದ ರಾಯಗಢದಲ್ಲಿ ಭಾನುವಾರ ‘ಭಾರತ ಜೋಡೊ ನ್ಯಾಯ ಯಾತ್ರೆ’ ಆರಂಭಕ್ಕೂ ಮುನ್ನ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮಹಾತ್ಮ ಗಾಂಧಿ ಪ್ರತಿಮೆಗೆ ನಮಿಸಿದರು —ಪಿಟಿಐ ಚಿತ್ರ

ಹಾದಿಗೆ ಮುಳ್ಳು ಇಡುವುದು ಅಮೃತಕಾಲವೇ?: ಪ್ರಿಯಾಂಕಾ

ನವದೆಹಲಿ (ಪಿಟಿಐ): ರೈತರು ಕರೆ ನೀಡಿರುವ ‘ದೆಹಲಿ ಚಲೊ’ ರ್‍ಯಾಲಿ ತಡೆಯುವ ಉದ್ದೇಶದಿಂದ ರಾಷ್ಟ್ರ ರಾಜಧಾನಿಯ ಗಡಿ ಸಮೀಪದ ಕೆಲವು ರಸ್ತೆಗಳಿಗೆ ಅಡ್ಡಲಾಗಿ ಬ್ಯಾರಿಕೇಡ್ ಮತ್ತು ಮೊಳೆಗಳ ಪಟ್ಟಿ ಹಾಕಲಾಗಿದೆ ಎಂಬ ವರದಿಗಳ ಬೆನ್ನಲ್ಲೇ, ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾಗ್ದಾಳಿ ನಡೆಸಿದ್ದಾರೆ.

ರಸ್ತೆಗೆ ಅಡ್ಡಲಾಗಿ ಮೊಳೆಗಳ ಪಟ್ಟಿ ಹಾಕಿರುವ ವಿಡಿಯೊವನ್ನು ‘ಎಕ್ಸ್’ನಲ್ಲಿ ಹಂಚಿಕೊಂಡಿರುವ ಅವರು, ಅನ್ನದಾತರನ್ನು ಹೀಗೇಕೆ ತುಚ್ಛವಾಗಿ ಕಾಣುತ್ತಿದ್ದೀರಿ ಎಂದು ಪ್ರಶ್ನಿಸಿದ್ದಾರೆ.

‘ರೈತರ ಹಾದಿಗೆ ಅಡ್ಡಲಾಗಿ ಮುಳ್ಳು, ಬ್ಯಾರಿಕೇಡ್ ಇಡುವುದು ಅಮೃತಕಾಲವೇ ಅಥವಾ ಅನ್ಯಾಯಕಾಲವೇ? ಇಂಥ ಅಸೂಕ್ಷ್ಮ ಮತ್ತು ರೈತ ವಿರೋಧಿ ಮನಸ್ಥಿತಿಯೇ 750 ರೈತರ ಜೀವವನ್ನು ಬಲಿಪಡೆದಿದೆ. ರೈತರು ತಮ್ಮ ಧ್ವನಿ ಎತ್ತಲು ಅವಕಾಶ ನೀಡದಷ್ಟು ರೈತ ವಿರೋಧಿ ಸರ್ಕಾರ ಇದಾಗಿದೆ’ ಎಂದು ಅವರು ಹರಿಹಾಯ್ದಿದ್ದಾರೆ.

‘ರೈತರಿಗೆ ನೀಡಿದ್ದ ಭರವಸೆಯನ್ನು ಸರ್ಕಾರ ಈಡೇರಿಸಿಲ್ಲ. ಕನಿಷ್ಠ ಬೆಂಬಲ ಬೆಲೆ ಕಾನೂನು ರೂಪಿಸಿಲ್ಲ, ರೈತರ ಆದಾಯವೂ ದ್ವಿಗುಣವಾಗಿಲ್ಲ. ರೈತರು ತಮ್ಮ ಅಹವಾಲುಗಳನ್ನು ತಮ್ಮದೇ ದೇಶದ ಸರ್ಕಾರದ ಬಳಿಗೆ ಕೊಂಡೊಯ್ಯಬಾರದು ಎಂದಾದರೆ ಇನ್ಯಾರ ಬಳಿ ಕೊಂಡೊಯ್ಯಲು ಸಾಧ್ಯ’ ಎಂದು ಪ್ರಶ್ನಿಸಿದ್ದಾರೆ.

‘ಕೆಲವರು ದೂರವಾಗಿದ್ದು ‘ಇಂಡಿಯಾ’ ಮೇಲೆ ಪರಿಣಾಮವಾಗದು’

ನವದೆಹಲಿ/ರಾಯಗಢ (ಪಿಟಿಐ): ‘ವಿರೋಧ ಪಕ್ಷಗಳ ಮೈತ್ರಿಕೂಟ ‘ಇಂಡಿಯಾ’ ಬಲಿಷ್ಠವಾಗಿಯೇ ಇದೆ. ಕೆಲ ಅಂಗಪಕ್ಷಗಳು ದೂರ ಹೋಗಿರುವುದು ಯಾವುದೇ ಪರಿಣಾಮ ಬೀರುವುದಿಲ್ಲ’ ಎಂದು ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ಭಾನುವಾರ ಹೇಳಿದ್ದಾರೆ.

‘ವಿಪಕ್ಷಗಳ ಸಾಮೂಹಿಕ ಶಕ್ತಿಯು ಬಿಜೆಪಿಯ ಚಿಂತೆ ಹೆಚ್ಚಿಸಿದೆ. ಈ ಕಾರಣಕ್ಕಾಗಿಯೇ ಅದು ‘ಇಂಡಿಯಾ’ದಲ್ಲಿ ಒಡಕು ಮೂಡಿಸುವ ಪ್ರಯತ್ನ ಮಾಡುತ್ತಿದೆ’ ಎಂದು ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

ಜೆಡಿಯು ನಾಯಕ ನಿತೀಶ್ ಕುಮಾರ್ ಮತ್ತೆ ಎನ್‌ಡಿಎ ತೆಕ್ಕೆಗೆ ಹೋಗಿರುವುದು ‘ಇಂಡಿಯಾ’ದ ವಿಶ್ವಾಸಾರ್ಹತೆ ಬಗ್ಗೆ ಪ್ರಶ್ನೆ ಉದ್ಭವಿಸುವಂತೆ ಮಾಡಿದೆಯೇ ಎಂಬುದಕ್ಕೆ ಅವರು ಹೀಗೆ ಪ್ರತಿಕ್ರಿಯಿಸಿದ್ದಾರೆ.

‘ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ‘ಇಂಡಿಯಾ’ದೊಂದಿಗೇ ಇದ್ದಾರೆ. ಸ್ಥಾನಗಳ ಹಂಚಿಕೆ ವಿಚಾರವಾಗಿ ಅವರೊಂದಿಗಿನ ಮಾತುಕತೆ ಫಲಪ್ರದವಾಗಲಿದೆ ಎಂಬ ವಿಶ್ವಾಸ ಇದೆ’ ಎಂದೂ ಹೇಳಿದ್ದಾರೆ.

‘ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪಕ್ಷ 370 ಸ್ಥಾನ ಗೆಲ್ಲಲಿದೆ ಹಾಗೂ ಎನ್‌ಡಿಎ 400ರ ಗಡಿ ದಾಟಲಿದೆ ಎಂಬುದಾಗಿ ಬಿಜೆಪಿ ಹೇಳುತ್ತಿದೆ. ಇದು ವಾಸ್ತವವನ್ನು ಅರಿಯದೇ ಆಡುವ ಮಾತು’ ಎಂದಿದ್ದಾರೆ.

‘ಪಕ್ಷದ ವತಿಯಿಂದ ಹಮ್ಮಿಕೊಂಡಿರುವ ಭಾರತ ಜೋಡೊ ನ್ಯಾಯ ಯಾತ್ರೆಯು, ಸ್ಥಾನಗಳ ಹಂಚಿಕೆ ಕುರಿತಾಗಿ ಮಿತ್ರ ಪಕ್ಷಗಳೊಂದಿಗೆ ನಡೆಸಬೇಕಾದ ಮಾತುಕತೆ ಮೇಲೆ ಪರಿಣಾಮ ಬೀರಿದೆ ಎಂಬ ಮಾತಿನಲ್ಲಿ ಹುರುಳಿಲ್ಲ. ಯಾತ್ರೆ ಜೊತೆಜೊತೆಗೆ, ಮಿತ್ರ ಪಕ್ಷಗಳೊಂದಿಗೆ ಈ ವಿಷಯವಾಗಿ ಮಾತುಕತೆಯೂ ನಡೆಯುತ್ತಿದೆ’ ಎಂದು ಪ್ರಶ್ನೆಯೊಂದಕ್ಕೆ ಅವರು ಉತ್ತರಿಸಿದ್ದಾರೆ.

ದೆಹಲಿ, ಉತ್ತರಾಖಂಡ ಪೊಲೀಸರ ಜಂಟಿ ಕಾರ್ಯಾಚರಣೆ

ಹಲ್ದ್ವಾನಿ ಹಿಂಸಾಚಾರ: ಸಂಚುಕೋರ ಬಂಧನ

ಪ್ರಜಾವಾಣಿ ವಾರ್ತೆ

ಲಖನೌ: ಹಲ್ದ್ವಾನಿ ನಗರದಲ್ಲಿ ನಡೆದ ಹಿಂಸಾಚಾರ ಪ್ರಕರಣದ ‘ಸಂಚುಕೋರ’ ಎಂಬ ಆರೋಪದ ಮೇಲೆ ಅಬ್ದುಲ್ ಮಲಿಕ್ ಎಂಬವರನ್ನು ಉತ್ತರಾಖಂಡ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಹಿಂಸಾಚಾರದಿಂದ ನಗರವು ಉದ್ವಿಗ್ನಗೊಂಡ ಬಳಿಕ ಮಲಿಕ್ ತಲೆಮರೆಸಿಕೊಂಡಿದ್ದ. ದೆಹಲಿ ಮತ್ತು ಉತ್ತರಾಖಂಡ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ದೆಹಲಿಯಲ್ಲಿ ಈತನನ್ನು ಬಂಧಿಸಿ, ನಂತರ ಹಲ್ದ್ವಾನಿಗೆ ಕರೆತಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮಲಿಕ್, ಅಕ್ರಮವಾಗಿ ನಿರ್ಮಿಸಿದ್ದ ಮದರಸಾ ಮತ್ತು ಮಸೀದಿಯ ಸ್ಥಳದ ಮಾಲೀಕ. ಸರ್ಕಾರದ ಜಮೀನನ್ನು ಮಲಿಕ್ ಅಕ್ರಮವಾಗಿ ಪಡೆದುಕೊಂಡಿದ್ದ. ಸ್ಥಳದಲ್ಲಿದ್ದ ಕಟ್ಟಡಗಳನ್ನು ತೆರವುಗೊಳಿಸುವಂತೆ ನೀಡಿದ್ದ ಆದೇಶವನ್ನು ವಜಾಗೊಳಿಸುವಂತೆ ಉತ್ತರಾಖಂಡ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಲ್ದ್ವಾನಿ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೆ 60 ಜನರನ್ನು ಬಂಧಿಸಲಾಗಿದೆ. ಈ ಪೈಕಿ ಒಬ್ಬ, ತಾನು ಸಮಾಜವಾದಿ ಪಕ್ಷದ ಸ್ಥಳೀಯ ನಾಯಕನ ಸಹೋದರ ಎಂದು ಹೇಳಿಕೊಂಡಿದ್ದಾನೆ.

ಇಂಟರ್‌ನೆಟ್ ಸೇವೆ ಪುನರಾರಂಭ: ನಾಲ್ಕು ದಿನಗಳಿಂದ ಬನ್‌ಭೂಲ್‌ಪುರ ನಗರದಲ್ಲಿ ಸ್ಥಗಿತಗೊಳಿಸಲಾಗಿದ್ದ ಇಂಟರ್‌ನೆಟ್ ಸೇವೆಯನ್ನು ಸಕ್ರಿಯಗೊಳಿಸಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಪ್ರಚೋದನಕಾರಿ ಪೋಸ್ಟ್, ಫೋಟೊ ಮತ್ತು ವಿಡಿಯೊಗಳನ್ನು ಪೋಸ್ಟ್ ಮಾಡಿದಲ್ಲಿ ಕಠಿಣ ಕ್ರಮ ಕೈಗೊಳ್ಳುವುದಾಗಿ ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

ಹೆಚ್ಚುವರಿ ಭದ್ರತಾಪಡೆ ನಿಯೋಜನೆಗೆ ಕೋರಿಕೆ: ಹಲ್ದ್ವಾನಿ (ಉತ್ತರಾಖಂಡ) (ಪಿಟಿಐ): ಇಲ್ಲಿನ ಹಲ್ದ್ವಾನಿಯಲ್ಲಿ ಅಕ್ರಮವಾಗಿ ನಿರ್ಮಿಸಲಾಗಿದ್ದ ಮದರಸಾವನ್ನು ಫೆ.8ರಂದು ಕೆಡವಿದ ನಂತರ ಹಿಂಸಾಚಾರ ಭುಗಿಲೆದ್ದಿದ್ದು, ಭದ್ರತೆಗಾಗಿ ಕೇಂದ್ರೀಯ ಭದ್ರತಾ ಪಡೆಯ ಮತ್ತಷ್ಟು ಸಿಬ್ಬಂದಿಯನ್ನು ಸ್ಥಳದಲ್ಲಿ ನಿಯೋಜಿಸುವಂತೆ ಉತ್ತರಾಖಂಡ ಸರ್ಕಾರ ಮನವಿ ಮಾಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಿಂಸಾಚಾರ ನಡೆದ ಬನ್‌ಭೂಲ್‌ಪುರ ಪ್ರದೇಶದಲ್ಲಿ ಅರೆ ಸೇನಾಪಡೆಯ ತಲಾ 100 ಸಿಬ್ಬಂದಿ ಇರುವ ನಾಲ್ಕು ತಂಡಗಳನ್ನು ನಿಯೋಜಿಸುವಂತೆ ಮುಖ್ಯ ಕಾರ್ಯದರ್ಶಿ ರಾಧಾ ರತೂಡಿ ಅವರು ಕೇಂದ್ರ ಗೃಹ ಸಚಿವಾಲಯವನ್ನು ಕೋರಿದ್ದಾರೆ.

ಬನ್‌ಭೂಲ್‌ಪುರದಲ್ಲಿ ಕರ್ಫ್ಯೂ ಇನ್ನೂ ಜಾರಿಯಲ್ಲಿದೆ. ನಗರದ ಹೊರಗಿನ ಪ್ರದೇಶಗಳಲ್ಲಿ ಕರ್ಫ್ಯೂ ಹಿಂಪಡೆಯಲಾಗಿದೆ. ಸ್ಥಳದಲ್ಲಿ ಈಗಾಗಲೇ 1,100 ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಆದರೆ ಬಿಗುವಿನ ವಾತಾವರಣ ಮುಂದುವರಿದಿದ್ದು, ಅಂಗಡಿಗಳನ್ನು ಮುಚ್ಚಲಾಗಿದೆ, ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ನಿರ್ಬಂಧ ಹೇರಲಾಗಿದೆ.

ಗುರುವಾರ ನಡೆದ ಹಿಂಸಾಚಾರದಲ್ಲಿ ಆರು ಮಂದಿ ಮೃತಪಟ್ಟು, 60 ಜನರು ಗಾಯಗೊಂಡಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಸ್ಸಾಂ: ಸಚಿವರಿಗೆ, ನೌಕರರಿಗೆ ವಿದ್ಯುತ್ ಸಬ್ಸಿಡಿ ಇಲ್ಲ

ಗುವಾಹಟಿ (ಪಿಟಿಐ): ‘ಸಚಿವರು, ಅಧಿಕಾರಿಗಳು ಅಥವಾ ಸರ್ಕಾರಿ ನೌಕರರಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಸೌಲಭ್ಯ ನೀಡುವುದಿಲ್ಲ’ ಎಂದು ಅಸ್ಸಾಂನ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಭಾನುವಾರ ಹೇಳಿದ್ದಾರೆ.

ಸಚಿವರ ನಿವಾಸಗಳು ಸೇರಿದಂತೆ ಸರ್ಕಾರಿ ನಿವಾಸಗಳಲ್ಲಿ ತಕ್ಷಣದಿಂದಲೇ ಪ್ರಿಪೇಯ್ಡ್ ಮೀಟರ್ ಅಳವಡಿಸುವಂತೆ ಇಂಧನ ಇಲಾಖೆಗೆ ಸೂಚಿಸಿರುವ ಅವರು, ‘ಸಚಿವರು, ಅಧಿಕಾರಿಗಳು, ಸರ್ಕಾರಿ ನೌಕರರಿಗೆ ಸಬ್ಸಿಡಿ ದರದ ವಿದ್ಯುತ್ ಬಳಸಲು ಅವಕಾಶ ನೀಡುವುದಿಲ್ಲ’ ಎಂದಿದ್ದಾರೆ.

‘ಸಚಿವರು, ಅಧಿಕಾರಿಗಳ ಸಂಬಳದಲ್ಲಿ ಸ್ವಲ್ಪ ಮೊತ್ತವನ್ನು ಮಾಸಿಕ ಬಿಲ್‌ಗೆ ಕಡಿತಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ಶರ್ಮ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ

ಕಂದಾಯ ಸಚಿವ ಕೃಷ್ಣ ಬೈರೇಗೌಡ ಆರೋಪ • ಬರ ಪರಿಹಾರ ಕೋರಿದ್ದ ಅರ್ಜಿ ವಜಾಗೊಳಿಸಲು ಸವಾಲು

‘ನಿರ್ಮಲಾ ಜನರ ದಿಕ್ಕು ತಪ್ಪಿಸುತ್ತಿದ್ದಾರೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಅಡಿಯಲ್ಲಿ ರಾಜ್ಯಕ್ಕೆ ಯಾವುದೇ ಬಾಕಿ ಇಲ್ಲ ಎನ್ನುವ ಮೂಲಕ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಜನರ ದಿಕ್ಕು ತಪ್ಪಿಸಲು ಯತ್ನಿಸಿದ್ದಾರೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಆರೋಪಿಸಿದರು.

ಭಾನುವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಪ್ರಾಕೃತಿಕ ವಿಕೋಪ ಸಂಭವಿಸಿದಾಗ ಎನ್‌ಡಿಆರ್‌ಎಫ್ ಅಡಿಯಲ್ಲಿ ಪರಿಹಾರ ಕೋರುವುದು ರಾಜ್ಯ ಸರ್ಕಾರಗಳ ಸಾಂವಿಧಾನಿಕ ಜವಾಬ್ದಾರಿ. ಕೊಡುವುದು ಕೇಂದ್ರ ಸರ್ಕಾರದ ಕರ್ತವ್ಯ. ನಿರ್ಮಲಾ ಅವರ ಮಾತಿನಲ್ಲಿ ಸತ್ಯವಿದ್ದರೆ ಬರ ಪರಿಹಾರ ಕೋರಿ ರಾಜ್ಯ ಸರ್ಕಾರ ಸಲ್ಲಿಸಿರುವ ಮನವಿಯನ್ನು ತಿರಸ್ಕರಿಸಲಿ’ ಎಂದು ಸವಾಲು ಹಾಕಿದರು.

ರಾಜ್ಯದ 223 ತಾಲ್ಲೂಕುಗಳಲ್ಲಿ ತೀವ್ರವಾದ ಬರಗಾಲ ಇದೆ. ರಾಜ್ಯಕ್ಕೆ



ಕೃಷ್ಣ ಬೈರೇಗೌಡ

₹18,172 ಕೋಟಿ ಬರ ಪರಿಹಾರ ನೀಡುವಂತೆ ಕೋರಿ 2023ರಸೆಪ್ಟೆಂಬರ್ 23ರಂದು ಮೊದಲ ಮನವಿ ಸಲ್ಲಿಸಲಾಗಿತ್ತು. ನಂತರ ಎರಡು ಪೂರಕ ಮನವಿಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ನಾಲ್ಕೂವರೆ ತಿಂಗಳಾದರೂ ಕೇಂದ್ರ ಸರ್ಕಾರದಿಂದ ಯಾವ ಸ್ಪಂದನೆಯೂ ದೊರಕಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಎನ್‌ಡಿಆರ್‌ಎಫ್ ಅಡಿ ರಾಜ್ಯಗಳಿಗೆ ಪರಿಹಾರ ಮಂಜೂರು ಮಾಡುವ ಸಮಿತಿಗೆ ಕೇಂದ್ರ ಗೃಹ ಸಚಿವರೇ ಅಧ್ಯಕ್ಷರು. ರಾಜ್ಯ ಸರ್ಕಾರ ನಿರಂತರವಾಗಿ ಮನವಿ ಮಾಡುತ್ತಿದ್ದರೂ ಸಮಿತಿಯ ಸಭೆ ನಡೆಸಿಲ್ಲ. ಭಾನುವಾರ ರಾಜ್ಯ ಪ್ರವಾಸಕ್ಕೆ ಬಂದಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬರ ಪರಿಹಾರ ಘೋಷಿಸಿ ರಾಜ್ಯದ ಜನರ ನೆರವಿಗೆ ಬರಬೇಕಿತ್ತು ಎಂದರು.

2009ರಲ್ಲಿ ರಾಜ್ಯದಲ್ಲಿ ಭೀಕರವಾದ ಪ್ರವಾಹ ಬಂದಿತ್ತು. ಆಗ ಪ್ರಧಾನಿಯಾಗಿದ್ದ ಮನಮೋಹನ್ ಸಿಂಗ್ ಅವರು ಪರಿಸ್ಥಿತಿ ವೀಕ್ಷಣೆಗೆ ಬಂದ ದಿನವೇ ರಾಜ್ಯಕ್ಕೆ ₹1,000 ಕೋಟಿ ತುರ್ತು ನೆರವು ಬಿಡುಗಡೆ ಮಾಡಿದ್ದರು. ಆಗ ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರವಿತ್ತು. ಸಿಂಗ್ ಅವರು ರಾಜಕಾರಣ ಮಾಡಿರಲಿಲ್ಲ. ಅಂತಹ ಪ್ರಬುದ್ಧ ನಿಲುವನ್ನು ಕೇಂದ್ರದ ಈಗಿನ ಸರ್ಕಾರ ಕೂಡ ಪ್ರದರ್ಶಿಸಬೇಕಿತ್ತು ಎಂದು ಹೇಳಿದರು.

ಕುಡಿಯುವ ನೀರಿನ ಸಮಸ್ಯೆ ಇರುವ 156 ಹಳ್ಳಿಗಳಲ್ಲಿ 183 ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆಗೆ ಪಡೆದು ನೀರು ಪೂರೈಸಲಾಗುತ್ತಿದೆ. 46 ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದೆ. ನಗರ ಪ್ರದೇಶಗಳ 40 ವಾರ್ಡ್‌ಗಳಲ್ಲೂ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದೆ ಎಂದು ವಿವರ ನೀಡಿದರು.

7,082 ಗ್ರಾಮಗಳು ಮತ್ತು 1,193 ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಬಹುದು ಎಂದು ಅಂದಾಜಿಸಲಾಗಿದೆ. ಸಮಸ್ಯೆ ಎದುರಿಸಲು ಈಗಿನಿಂದಲೇ ಸಿದ್ಧತೆ ಆರಂಭಿಸಲು ಸೂಚಿಸಲಾಗಿದೆ ಎಂದರು.

33 ಲಕ್ಷ ರೈತರಿಗೆ ₹ 628 ಕೋಟಿ ಪಾವತಿ

ಸಂಕಷ್ಟದಲ್ಲಿರುವ ರೈತರಿಗೆ ರಾಜ್ಯ ಸರ್ಕಾರದಿಂದ ಮೊದಲ ಕಂತಿನಲ್ಲಿ ತಲಾ ₹2,000 ಪರಿಹಾರ ವಿತರಿಸಲಾಗುತ್ತಿದೆ. ಈವರೆಗೆ 33 ಲಕ್ಷ ರೈತರಿಗೆ ₹628 ಕೋಟಿ ಪಾವತಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾಹಿತಿ ನೀಡಿದರು. ತಾಂತ್ರಿಕ ಕಾರಣಗಳಿಗಾಗಿ 1.60 ಲಕ್ಷ ರೈತರಿಗೆ ಪರಿಹಾರ ಪಾವತಿ ವಿಳಂಬವಾಗಿದೆ. ಸಮಸ್ಯೆ ಪರಿಹರಿಸಿಕೊಂಡು ಪಾವತಿಸಲಾಗುವುದು ಎಂದರು.

‘ಶ್ರೀಮಂತರ ಸಾಲ ಮನ್ನಾ ಬಿಟ್ಟಿ ಭಾಗ್ಯವಲ್ಲವೆ?’

ಬೆಂಗಳೂರು: ದೇಶದ ಸಾವಿರ ಮಂದಿ ಶ್ರೀಮಂತರ ₹1.75 ಲಕ್ಷ ಕೋಟಿಯಷ್ಟು ಸಾಲವನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಪ್ರತಿ ವರ್ಷ ಮನ್ನಾ ಮಾಡುತ್ತಿದೆ. ಇದೂ ಕೂಡ ಬಿಟ್ಟಿ ಭಾಗ್ಯವಲ್ಲವೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಪ್ರಶ್ನಿಸಿದರು.

‘ಗ್ಯಾರಂಟಿ ಯೋಜನೆಗಳು ಬಿಟ್ಟಿ ಭಾಗ್ಯಗಳು’ ಎಂಬ ಬಿಜೆಪಿ ನಾಯಕರ ಟೀಕೆಗೆ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಅವರು, ‘ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದ ಈವರೆಗೆ ಅಂಬಾನಿ, ಅದಾನಿಯಂತಹ ಕೆಲವೇ ಮಂದಿ ಶ್ರೀಮಂತರ ₹20 ಲಕ್ಷ ಕೋಟಿಯಷ್ಟು ಸಾಲವನ್ನು ಮನ್ನಾ ಮಾಡಲಾಗಿದೆ. ಇದು ಯಾವ ಭಾಗ್ಯ ಎಂಬುದನ್ನು ಬಿಜೆಪಿ ನಾಯಕರು ಹೇಳಬೇಕು’ ಎಂದರು. ‘ದೊಡ್ಡ ಶ್ರೀಮಂತರಿಗೆ ಸಾಲ ಮನ್ನಾದ ಜತೆಗೆ ತೆರಿಗೆ ವಿನಾಯ್ತಿಗಳನ್ನೂ ಕೇಂದ್ರ ಸರ್ಕಾರ ನೀಡುತ್ತಿದೆ. ಆ ಹೊರೆಯನ್ನು ಹೊಸ ತೆರಿಗೆಗಳ ರೂಪದಲ್ಲಿ ಬಡವರ ಮೇಲೆ ಹೇರಲಾಗುತ್ತಿದೆ. ಇದರಿಂದ ಬಡವರು ಸಂಕಷ್ಟದಲ್ಲಿದ್ದಾರೆ. ಅವರ ನೆರವಿಗೆ ನಿಲ್ಲುವುದಕ್ಕಾಗಿ ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ. ಬಡವರ ಮೇಲಿನ ದ್ವೇಷದಿಂದ ಬಿಜೆಪಿ ನಾಯಕರು ಗ್ಯಾರಂಟಿ ಯೋಜನೆಗಳನ್ನೂ ಟೀಕಿಸುತ್ತಿದ್ದಾರೆ’ ಎಂದು ದೂರಿದರು. ಗ್ಯಾರಂಟಿ ಯೋಜನೆ ಎಂಬ ಪರಿಕಲ್ಪನೆ ಜನ್ಮ ತಳೆದಿರುವುದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯಲ್ಲಿ. ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಟೀಕಿಸುವ ಬಿಜೆಪಿಯವರು ಗ್ಯಾರಂಟಿ ಪರಿಕಲ್ಪನೆಯನ್ನು ಕದ್ದು ರಾಜಕಾರಣಕ್ಕೆ ಬಳಸಿಕೊಳ್ಳುತ್ತಿದ್ದಾರೆ ಎಂದು ಕೃಷ್ಣ ಬೈರೇಗೌಡ ವಾಗ್ದಾಳಿ ನಡೆಸಿದರು.

ಗಂಡನನ್ನು ಹುಡುಕಿ ಬಂದಿದ್ದ ಮಹಿಳೆ ಮೇಲೆ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ಜಗಳ ಮಾಡಿಕೊಂಡಿದ್ದ ಗಂಡನನ್ನು ಹುಡುಕಿಕೊಂಡು ಗಂಗಾವತಿಗೆ ಬಂದಿದ್ದ ಮಹಿಳೆಯನ್ನು ಎಳೆದೊಯ್ದು ಯುವಕನೊಬ್ಬ ಅತ್ಯಾಚಾರವೆಸಗಿದ್ದಾನೆ. ಇದಕ್ಕೂ ಮೊದಲು ದುಷ್ಕರ್ಮಿಗಳ ತಂಡ ಮಹಿಳೆಯ ಪತಿ ಮೇಲೆ ಹಲ್ಲೆ ನಡೆಸಿದೆ. ಪ್ರಕರಣ ಸಂಬಂಧ ಆರು ಜನರನ್ನು ಬಂಧಿಸಲಾಗಿದೆ.

ಮನೆಕೆಲಸ ಮಾಡಿಕೊಂಡಿದ್ದ ಬೆಂಗಳೂರಿನ ಗೊರಗುಂಟೆಪಾಳ್ಯದ ಸಂತ್ರಸ್ತೆ ಮೂರು ತಿಂಗಳ ಹಿಂದೆ ಜಿಲ್ಲೆಯ ಕಾರಟಗಿ ತಾಲ್ಲೂಕಿನ ಸಿದ್ದಾಪುರದ ವ್ಯಕ್ತಿಯ ಜೊತೆ ವಿವಾಹವಾಗಿದ್ದರು. 15 ದಿನಗಳಿಂದ ಇವರ ನಡುವೆ ಮೇಲಿಂದ ಮೇಲೆ ಜಗಳ ನಡೆಯುತ್ತಿದ್ದ ಕಾರಣ ಸಿಟ್ಟಿಗೆದ್ದ ಗಂಡ ತನ್ನೂರಿಗೆ ವಾಪಸ್ ಬಂದಿದ್ದರು.

ಗಂಡನನ್ನು ಹುಡುಕಿಕೊಂಡು ಫೆ. 8ರಂದು ರಾತ್ರಿ 9 ಗಂಟೆ ಸುಮಾರಿಗೆ ಮಹಿಳೆ ಗಂಗಾವತಿ ಬಸ್ ನಿಲ್ದಾಣಕ್ಕೆ ಬಂದಾಗ ಪತಿ ಕೂಡ ಅಲ್ಲಿಗೆ ಬಂದಿದ್ದರು. ಅಲ್ಲಿಯೇ ಕೌಟುಂಬಿಕ ವಿಷಯದ ಕುರಿತು ಜಗಳವಾಡುತ್ತಿದ್ದಾಗ ಆರು ಜನರ ಯುವಕರ ತಂಡ ಮಧ್ಯ ಪ್ರವೇಶಿಸಿತ್ತು.

ಆಗ ‘ಇದು ಗಂಡ–ಹೆಂಡತಿ ನಡುವಣ ವೈಮನಸ್ಸು. ನೀವು ಮಧ್ಯ ಪ್ರವೇಶಿಸಬೇಡಿ’ ಎಂದು ಮಹಿಳೆ ಹೇಳಿದರೂ ಯುವಕರು ಮೈ ಕೈ ಮುಟ್ಟಿ ಎಳೆದಾಡಿದ್ದಾರೆ. ಪತಿ ಮೇಲೆ ಎಲ್ಲರೂ ಸೇರಿ ಹಲ್ಲೆ ಮಾಡುತ್ತಿದ್ದುದರಿಂದ ರಕ್ಷಣೆಗಾಗಿ ಬಸ್‌ನಿಲ್ದಾಣದ ಎದುರು ಇರುವ ಉದ್ಯಾನದಲ್ಲಿ ಹೋಗಿ ಮಹಿಳೆ ಅಡಗಿಕೊಂಡರು. ‘ಆಗ ಲಿಂಗರಾಜ ಎಂಬಾತ ನನ್ನ ಮೇಲೆ ಅತ್ಯಾಚಾರ ಎಸಗಿದ್ದಾನೆ’ ಎಂದು ಸಂತ್ರಸ್ತೆ ದೂರಿನಲ್ಲಿ ತಿಳಿಸಿದ್ದಾರೆ.

‘ಮಹಿಳೆ ನೀಡಿದ ದೂರಿನನ್ವಯ ಗಂಗಾವತಿಯ ಲಿಂಗರಾಜ, ಮೌಲಾಹುಸೇನ್, ಶಿವಕುಮಾರ ಸ್ವಾಮಿ, ಪ್ರಶಾಂತ, ಮಹೇಶ ಮತ್ತು ಮಾದೇಶ ಎನ್ನುವವರನ್ನು ಬಂಧಿಸಲಾಗಿದೆ’ ಎಂದು ಗಂಗಾವತಿ ಡಿವೈಎಸ್‌ಪಿ ಸಿದ್ದಲಿಂಗಪ್ಪಗೌಡ ಪೊಲೀಸ್ ಪಾಟೀಲ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಗುಂಡು ಹೊಡೆದು ಕೊಲ್ಲಿ ಎನ್ನುವವರ ಒಪ್ಪಬೇಕೇ?’

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ‘ಗುಂಡು ಹೊಡೆದು ಕೊಲ್ಲಿ, ಕೈ ಕಾಲು ಕತ್ತರಿಸಿ, ನಾಲಿಗೆ ಸೀಳಿ, ಕತ್ತು ಕಡಿಯಿರಿ ಎನ್ನುವವರನ್ನು ನಮ್ಮ ನಾಯಕರೆಂದು ಒಪ್ಪಿಕೊಳ್ಳಬೇಕೆ’ ಎಂದು ವಿಮರ್ಶಕ ರಹಮತ್ ತರೀಕೆರೆ ಪ್ರಶ್ನಿಸಿದರು.

ಇಲ್ಲಿ ಭಾನುವಾರ ನಡೆದ ‘ಸರ್ವೋದಯ ಮೇಳ’ದಲ್ಲಿ ‘ಗಾಂಧಿ ಮತ್ತು ಬಹುತ್ವದ ಪರಿಕಲ್ಪನೆ’ ಕುರಿತು ಅವರು ಮಾತನಾಡಿದರು.

‘ಸಂವಿಧಾನದ ಮೇಲೆ ಪ್ರಮಾಣ ಮಾಡಿದವರು ರಾಜಕೀಯ ಲಾಭಕ್ಕಾಗಿ ಧರ್ಮ ಮತ್ತು ಜಾತಿ ಹೆಸರಿನಲ್ಲಿ ಸಮಾಜವನ್ನು ವಿಭಜಿಸುವ ಹುನ್ನಾರ ನಡೆಸುತ್ತಿದ್ದಾರೆ. ಬಹುತ್ವ ಸಂಸ್ಕೃತಿಯನ್ನು ಒಪ್ಪಿ ಮಾತನಾಡಿದ ಗಾಂಧೀಜಿ, ಕುವೆಂಪು ಮೊದಲಾದವರು ಏಕ ಸಂಸ್ಕೃತಿ ಪ್ರಿಯರಿಗೆ ಅಪಥ್ಯವಾಗಿದ್ದಾರೆ’ ಎಂದರು.

‘ಏಕ ಸಂಸ್ಕೃತಿ ಹೇರುವ ಬಗ್ಗೆ ಮಾತನಾಡುವವರಿಗೆ ಪ್ರತಿರೋಧ ಒಡ್ಡದಿದ್ದರೆ ಬಹು ಸಂಸ್ಕೃತಿ ನಾಶವಾಗಲಿದೆ. ವೈಚಾರಿಕ ಲೇಖಕ ಎಂ.ಎಂ. ಕಲಬುರ್ಗಿ ಹತ್ಯೆಯಂತಹ ಪ್ರಕರಣಗಳು ಮರುಕಳಿಸುವ ಅಪಾಯವಿದೆ’ ಎಂದು ಕಳವಳ ವ್ಯಕ್ತಪಡಿಸಿದರು.



ಶ್ರೀರಂಗಪಟ್ಟಣದಲ್ಲಿ ಭಾನುವಾರ ನಡೆದ ಗಾಂಧೀ ಪ್ರಣೀತ ವಿಚಾರಧಾರೆಗಳ ಸರ್ವೋದಯ ಮೇಳದಲ್ಲಿ ‘ಗಾಂಧಿ ಮತ್ತು ಬಹುತ್ವದ ಪರಿಕಲ್ಪನೆ’ ಕುರಿತು ವಿಮರ್ಶಕ ರಹಮತ್ ತರೀಕೆರೆ ಮಾತನಾಡಿದರು. ಸಂಯೋಜಕ ಬಿ. ಸುಜಯಕುಮಾರ್ ಪಾಲ್ಗೊಂಡಿದ್ದರು

‘ಕೇಡಿನ ಶಕ್ತಿಗಳು ಎಲ್ಲ ಧರ್ಮಗಳಲ್ಲೂ ಇದ್ದು, ಅಂಥ ಶಕ್ತಿಗಳ ದನಿಯನ್ನು ಅಡಗಿಸಬೇಕು. ಈಚಿನ ದಿನಗಳಲ್ಲಿ ಧರ್ಮದ ಹೆಸರಿನಲ್ಲಿ ಹಳ್ಳಿಗಾಡಿನ ಜನರಲ್ಲೂ ದ್ವೇಷ ಭಾವನೆ ಬಿತ್ತುವ ಕೆಲಸ ನಡೆಯುತ್ತಿದೆ’ ಎಂದು ದೂರಿದರು.

ಗಡ್ಡದ ಪ್ರಶ್ನೆ ಏಕೆ: ‘ನಿರ್ದಿಷ್ಟ ಧರ್ಮದವರು ಎಂದು ಗುರುತಿಸಿಕೊಳ್ಳಲು ಗಡ್ಡ ಬಿಡುತ್ತಾರೆ, ಬುರ್ಖಾ ಧರಿಸುತ್ತಾರೆ ಎಂಬ ಮಾತು ಸರಿಯಲ್ಲ. ಮತ್ತೊಂದು ಧರ್ಮದವರು ವಿಭೂತಿ ಧರಿಸುವುದು, ಕುಂಕುಮ ಹಚ್ಚುವುದನ್ನು ಆಕ್ಷೇಪಿಸಲೂಬಾರದು. ಧಾರ್ಮಿಕ ಚಿಹ್ನೆ ದೊಡ್ಡ ಸಂಗತಿಯಲ್ಲ; ಆದರೆ, ಅದು ಆತಂಕ ಹುಟ್ಟಿಸುವಂತೆ ಇರಬಾರದು. ವಿಭಿನ್ನ ಸಂಸ್ಕೃತಿಯ ಜನರು ಪರಸ್ಪರ ಗೌರವದಿಂದ ಬದುಕುವ ವಾತಾವರಣ ಸೃಷ್ಟಿಯಾಗಬೇಕು ಎಂಬುದು ಗಾಂಧೀಜಿ ಆಶಯವಾಗಿತ್ತು’ ಎಂದು ಪ್ರತಿಕ್ರಿಯಿಸಿದರು.

‘ಏಕರೂಪ ನಾಗರಿಕ ಸಂಹಿತೆ ನಮ್ಮ ದೇಶಕ್ಕೆ ಒಪ್ಪಿತವಲ್ಲ. ವೈವಿಧ್ಯ ಇರುವ ದೇಶದಲ್ಲಿ ಎಲ್ಲರೂ ಒಂದೇ ರೀತಿ ಇರಬೇಕೆಂಬ ಬಲವಂತ ಸಲ್ಲದು. ಹೇರುವುದನ್ನು ವಿರೋಧಿಸಬೇಕು. ಸಂವಿಧಾನದ ಪೀಠಿಕೆಯಲ್ಲಿರುವ ‘ನಾವು’ ಎಂಬ ಶಬ್ದ ಬಹುತ್ವವನ್ನು ಬಿಂಬಿಸುತ್ತದೆಯೇ ಹೊರತು ಏಕರೂಪತೆಯನ್ನಲ್ಲ’ ಎಂದು ಪ್ರತಿಕ್ರಿಯಿಸಿದರು.

ಕ್ರೀಡೆಗೆ ಬಜೆಟ್‌ನಲ್ಲಿ ₹500 ಕೋಟಿ ಕೇಳಿದ್ದೇವೆ: ಸಚಿವ ಬಿ.ನಾಗೇಂದ್ರ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಈ ಬಾರಿಯ ಬಜೆಟ್‌ನಲ್ಲಿ ಕ್ರೀಡಾ ಕ್ಷೇತ್ರಕ್ಕೆ ₹500 ಕೋಟಿ ಅನುದಾನ ಕೇಳಿದ್ದೇವೆ. ಮುಂದಿನ ದಿನಗಳಲ್ಲಿ ಕ್ರೀಡಾಪಟುಗಳಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುತ್ತೇವೆ’ ಎಂದು ಕ್ರೀಡಾ ಸಚಿವ ಬಿ.ನಾಗೇಂದ್ರ ಹೇಳಿದರು.

‘ನೆರವಿಗೆ ಕಾಯುತ್ತಿದೆ ‘ಆಟ’ ಶೀರ್ಷಿಕೆಯಡಿ ಫೆ.11ರಂದು ‘ಪ್ರಜಾವಾಣಿ’ ಮುಖಪುಟದಲ್ಲಿ ಪ್ರಕಟಗೊಂಡ ವರದಿಗೆ ಪ್ರತಿಕ್ರಿಯಿಸಿದ ಅವರು, ‘ರಾಜಸ್ಥಾನ, ಪಂಜಾಬ್, ಒಡಿಶಾ, ಹರಿಯಾಣ ರಾಜ್ಯಗಳಲ್ಲಿ ಕ್ರೀಡೆಗೆ ಮೀಸಲಿಟ್ಟಿರುವ ಬಜೆಟ್ ಪ್ರಮಾಣ ಹೆಚ್ಚಿದೆ. ನಮ್ಮಲ್ಲಿ ಪ್ರತಿಭಾವಂತ ಕ್ರೀಡಾಪಟುಗಳು ಹೆಚ್ಚಿದ್ದಾರೆ. ಆದರೆ, ಅನುದಾನದ ಪ್ರಮಾಣ ಕಡಿಮೆ. ಕ್ರೀಡಾ ಹಾಸ್ಟೆಲ್‌ಗಳು ಮತ್ತು ಕ್ರೀಡಾಂಗಣಗಳಲ್ಲಿ ಸಮಸ್ಯೆ ಬಹಳ ವರ್ಷಗಳಿಂದಲೂ ಇದೆ. ಇವುಗಳನ್ನೆಲ್ಲ ಬಗೆಹರಿಸಿ, ಕ್ರೀಡಾಪಟುಗಳಿಗೆ ಸೌಕರ್ಯ ಕಲ್ಪಿಸಲು ಹೆಚ್ಚಿನ ಅನುದಾನ ಬೇಕಿದೆ’ ಎಂದರು.

ವರದಿ ಪರಿಣಾಮ

‘ರಾಜ್ಯದಲ್ಲಿರುವ ಎಲ್ಲ ಕ್ರೀಡಾಂಗಣಗಳನ್ನು ಅಭಿವೃದ್ಧಿಪಡಿಸಲು ₹600 ಕೋಟಿಯಿಂದ ₹800 ಕೋಟಿ ಅನುದಾನ ಅಗತ್ಯವಿದೆ. ಆಗ ಎಲ್ಲ ಕ್ರೀಡಾಂಗಣಗಳನ್ನು ಉನ್ನತೀಕರಿಸಿ, ಒಂದು ಹಂತಕ್ಕೆ ತರಬಹುದು.



ಬಿ.ನಾಗೇಂದ್ರ

ಇದಕ್ಕಾಗಿ ಜಿಲ್ಲಾ ಹಂತದಲ್ಲಿರುವ ಸಿಎಸ್‌ಆರ್, ಡಿಎಂಎ ಅನುದಾನ ಬಳಸಿಕೊಳ್ಳುವ ಬಗ್ಗೆಯೂ ಚಿಂತನೆ ನಡೆಸಲಾಗುತ್ತಿದೆ ಎಂದರು.

ಆರಂಭದಲ್ಲಿ ಜಿಲ್ಲಾ ಕೇಂದ್ರದಲ್ಲಿನ ಕ್ರೀಡಾಂಗಣಗಳನ್ನು ಅಭಿವೃದ್ಧಿಪಡಿಸುತ್ತೇವೆ. ನಂತರದಲ್ಲಿ ತಾಲ್ಲೂಕು ಮತ್ತು ಹೋಬಳಿ ಹಂತದ ಕ್ರೀಡಾಂಗಣಗಳನ್ನು ಅಭಿವೃದ್ಧಿ ಪಡಿಸುತ್ತೇವೆ’ ಎಂದು ತಿಳಿಸಿದರು.

‘ಪ್ರಜಾವಾಣಿ’ ವರದಿಯಲ್ಲಿನ ಅಂಶಗಳನ್ನು ಆಧರಿಸಿ, ಕ್ರೀಡಾಪಟುಗಳಿಗೆ ಸೌಕರ್ಯ ಒದಗಿಸಲು ಕ್ರಮವಹಿಸಲಾಗುವುದು ಎಂದೂ ಹೇಳಿದರು. ‘ಬೆಳಗಾವಿಯಲ್ಲಿ ₹50 ಕೋಟಿ ವೆಚ್ಚದಲ್ಲಿ ನೂತನ ಜಿಲ್ಲಾ ಕ್ರೀಡಾಂಗಣ ನಿರ್ಮಿಸಲಾಗುತ್ತಿದೆ. ಇದಕ್ಕಾಗಿ 10 ಎಕರೆ ಜಾಗ ಗುರುತಿಸಿದ್ದೇವೆ’ ಎಂದು ಹೇಳಿದರು.

‘ಸಿದ್ದು ಸರ್ಕಾರದಿಂದ ಖಜಾನೆ ಲೂಟಿ’

ಮೈಸೂರು: ‘ಸಿದ್ದರಾಮಯ್ಯ ಕೊನೆಯ ಬಾರಿಗೆ ಮುಖ್ಯಮಂತ್ರಿ ಆಗಿದ್ದೇನೆ ಎಂಬ ಕಾರಣಕ್ಕೆ ಸರ್ಕಾರದ ಖಜಾನೆ ಲೂಟಿ ಮಾಡುತ್ತಿದ್ದಾರೆ. ಶೇ 40 ಕಮಿಷನ್ ಜೊತೆಗೆ ವರುಣಾ ಟ್ಯಾಕ್ಸ್, ಕನಕಪುರ ಟ್ಯಾಕ್ಸ್ ಸೇರುತ್ತಿದ್ದು, ಇದರಿಂದ ರಾಜ್ಯದ ಬೊಕ್ಕಸ ಬರಿದಾಗುತ್ತಿದೆ’ ಎಂದು ಬಿಜೆಪಿ ಮುಖಂಡ ಸಿ.ಟಿ. ರವಿ ದೂರಿದರು.

ಪತ್ರಕರ್ತರೊಂದಿಗೆ ಭಾನುವಾರ ಮಾತನಾಡಿದ ಅವರು, ‘ರಾಷ್ಟ್ರೀಯತೆ ವಿರುದ್ಧ ಪ್ರಾದೇಶಿಕತೆ ಎತ್ತಿ ಕಟ್ಟಲು ಸಂಚು ರೂಪಿಸಿ ಕಾಂಗ್ರೆಸ್ ದೆಹಲಿಯಲ್ಲಿ ಪ್ರತಿಭಟಿಸಿದೆ. ಸಿದ್ದರಾಮಯ್ಯ ರಾಜಕೀಯ ನಿವೃತ್ತಿ ಪಡೆಯುವ ಕಾಲ ಸಮೀಪಿಸಿದೆ’ ಎಂದು ಟೀಕಿಸಿದರು.

ಕಲಾಪವೋ ಕಲಹವೋ?

ಒಂದನೇ ಪುಟದಿಂದ...

ಉಳಿದ ಎಂಟು ದಿನಗಳ ಕಲಾಪದಲ್ಲಿ ಚರ್ಚೆಗೆ ಲಭ್ಯವಿರುವ ಅವಕಾಶವನ್ನು ಬಳಸಿಕೊಂಡು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಯೋಚನೆ ವಿರೋಧ ಪಕ್ಷಗಳಲ್ಲಿದೆ.

ಬರ ನಿರ್ವಹಣೆ, ಗ್ಯಾರಂಟಿ ಯೋಜನೆಗಳ ಅನುಷ್ಠಾನ, ಅಭಿವೃದ್ಧಿ ಕಾಮಗಾರಿಗಳಲ್ಲಿ ಹಿನ್ನಡೆಯ ಜತೆಗೆ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಮಾಡಿರುವ ‘ಕಮಿಷನ್’ ಆರೋಪ ಅಧಿವೇಶನದಲ್ಲಿ ಸದ್ದು ಮಾಡಬಹುದು.

ವರ್ಷದ ಮೊದಲ ಅಧಿವೇಶನದಲ್ಲೇ ಸರ್ಕಾರದ ಮೇಲೆ ಮುಗಿಬೀಳುವ ಮೂಲಕ ಲೋಕಸಭಾ ಚುನಾವಣೆಗೂ ಮೊದಲೇ ಕಾಂಗ್ರೆಸ್‌ನ ವರ್ಚಸ್ಸು ಕುಂದಿಸುವ ತಂತ್ರಗಾರಿಕೆಯನ್ನು ವಿರೋಧ ಪಕ್ಷಗಳು ಹೆಣೆಯುತ್ತಿವೆ.


ಗುತ್ತಿಗೆದಾರರ ಸಂಘದ ಆರೋಪದ ಕಾರಣಕ್ಕಾಗಿಯೇ ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರಕ್ಕೆ ‘ಶೇಕಡ 40ರಷ್ಟು ಕಮಿಷನ್ ಸರ್ಕಾರ’ ಎಂಬ ಕುಖ್ಯಾತಿ ಮೆತ್ತಿಕೊಂಡಿತ್ತು. ಅದೇ ಆರೋಪವನ್ನು ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರು ಕಾಂಗ್ರೆಸ್ ನೇತೃತ್ವದ ಈಗಿನ ಸರ್ಕಾರದ ವಿರುದ್ಧವೂ ಮಾಡಿದ್ದಾರೆ. ಈ ಹೇಳಿಕೆಯನ್ನು ಮುಂದಿಟ್ಟುಕೊಂಡೇ ಸಿದ್ದರಾಮಯ್ಯ ಮತ್ತು ಸರ್ಕಾರ ವನ್ನು ಮುಜುಗರಕ್ಕೆ ಸಿಲುಕಿಸುವ ತಾಲೀಮನ್ನು ವಿರೋಧ ಪಕ್ಷಗಳ ನಾಯಕರು ನಡೆಸುತ್ತಿದ್ದಾರೆ.

ಸೋಮವಾರ ಸಭೆ: ಬಿಜೆಪಿ ಮತ್ತು ಜೆಡಿಎಸ್‌ನ ಶಾಸಕಾಂಗ ಪಕ್ಷದ ಸಭೆಗಳು ಸೋಮವಾರ ನಡೆಯಲಿವೆ. ಮಂಗಳವಾರ ಎರಡೂ ಪಕ್ಷಗಳ ನಾಯಕರು ಒಟ್ಟಾಗಿ ಸಭೆ ನಡೆಸಿ ಕಲಾಪದ ಕಾರ್ಯತಂತ್ರವನ್ನು ಅಂತಿಮಗೊಳಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ನಡಿಗೆಯಲ್ಲೇ ಮಕ್ಕಾ ತಲುಪಿದ ಖಲೀಲ್

• ಸಿದ್ದಿಕ್ ನೀರಾಜೆ

ಉಪ್ಪಿನಂಗಡಿ (ದಕ್ಷಿಣ ಕನ್ನಡ): ಒಂದು ವರ್ಷದ ಹಿಂದೆ ನಡಿಗೆಯ ಮೂಲಕ ಮಕ್ಕಾ ಯಾತ್ರೆ ಹೊರಟಿದ್ದ ಉಪ್ಪಿನಂಗಡಿ ಸಮೀಪದ ಪೆರಿಯಡ್ಕದ ಅಬ್ದುಲ್ ಖಲೀಲ್ (ನೌಶಾದ್ ಬಿಕೆಎಸ್) ಫೆ.1ರಂದು ಮಕ್ಕಾ ತಲುಪಿದ್ದು, ಅವರು ಉಮ್ರಾ ಕರ್ಮವನ್ನು ನೆರವೇರಿಸಿದ್ದಾರೆ.



ಅಬ್ದುಲ್ ಖಲೀಲ್


2023ರ ಜ.30ರಂದು ಪೆರಿಯಡ್ಕದಿಂದ ಸೌದಿ ಅರೇಬಿಯಾದಲ್ಲಿರುವ ಮಕ್ಕಾಗೆ ಕಾಲ್ನಡಿಗೆ ಯಾತ್ರೆ ಹಮ್ಮಿಕೊಂಡಿದ್ದ ಖಲೀಲ್ 368 ದಿನಗಳ ಯಾತ್ರೆಯೊಂದಿಗೆ ಮಕ್ಕಾದ ಪವಿತ್ರ ಕಾಬಾದ ಬಳಿ ತಲುಪಿದ್ದಾರೆ. ಜೂನ್‌ನಲ್ಲಿ ಹಜ್ ಕರ್ಮ ನಿರ್ವಹಿಸಿದ ಬಳಿಕ ಅವರು ಊರಿಗೆ ವಾಪಸಾಗಲಿದ್ದಾರೆ.

ಉಪ್ಪಿನಂಗಡಿ ಗ್ರಾಮದ ಪೆರಿಯಡ್ಕ ನಿವಾಸಿ ಮುಹಮ್ಮದ್ ಹಾಗೂ ನಫೀಸಾ ದಂಪತಿ ಪುತ್ರ ಖಲೀಲ್ ತಮ್ಮ ಒಂದು ವರ್ಷದ ಯಾತ್ರೆಯಲ್ಲಿ 8,150 ಕಿ.ಮೀ ದೂರ ಕ್ರಮಿಸಿದ್ದಾರೆ. ಭಾರತ, ಪಾಕಿಸ್ತಾನ, ಒಮಾನ್ ಮತ್ತು ಯುಎಇ ಮೂಲಕ ಅವರು ಮತ್ತು ಸೌದಿ ಅರೇಬಿಯಾ ತಲುಪಿದ್ದಾರೆ. ಪಾಕಿಸ್ತಾನದಲ್ಲಿ ಅವರ ಕಾಲ್ನಡಿಗೆಗೆ ಅವಕಾಶ ಸಿಗದ ಕಾರಣ ವಾಘಾ ಗಡಿಯ ಮೂಲಕ ಪಾಕಿಸ್ತಾನ ಪ್ರವೇಶಿಸಿ ಅಲ್ಲಿಂದ ವಿಮಾನದಲ್ಲಿ ಒಮಾನ್‌ಗೆ ಪ್ರಯಾಣಿಸಿ, ಕಾಲ್ನಡಿಗೆ ಮುಂದುವರಿಸಿದ್ದರು.

ಎಲ್ಲೆಡೆ ಸಹಕಾರ ಸಿಕ್ಕಿತ್ತು: ಮಕ್ಕಾದಿಂದ ದೂರವಾಣಿ ಮೂಲಕ ‘ಪ್ರಜಾವಾಣಿ’ ಜತೆ ಮಾತನಾಡಿದ ಖಲೀಲ್, ‘ನನ್ನ ನಡಿಗೆ ವೇಳೆ ವಿವಿಧ ರಾಜ್ಯ– ದೇಶದ ಜನ ಸಂಪೂರ್ಣ ಸಹಕಾರ ನೀಡಿದ್ದರು. ಕಾಲ್ನಡಿಗೆ ಮೂಲಕ ನನ್ನ ದೇಶದ ಹಾಗೂ ಇತರ ದೇಶದ ಸಂಪ್ರದಾಯ, ಪರಂಪರೆಯನ್ನು ಅರಿಯಲೂ ಸಾಧ್ಯವಾಯಿತು. ಜಾತಿ, ಧರ್ಮ ನೋಡದೆ ಎಲ್ಲರೂ ನನಗೆ ಸಹಕಾರ ನೀಡಿದ್ದಾರೆ. ದೇಶದಲ್ಲಿ ಎಲ್ಲರೂ ಸೌಹಾರ್ದದಿಂದ ಬಾಳುವಂತಾಗಬೇಕು ಎಂದು ದೇವರಲ್ಲಿ ಬೇಡಿಕೊಳ್ಳುತ್ತೇನೆ. ಮಕ್ಕಾದಲ್ಲಿ ಇನ್ನೂ 4 ತಿಂಗಳು ಇದ್ದು, ಹಜ್ ಕೈಗೊಂಡು ಊರಿಗೆ ಮರಳುತ್ತೇನೆ’ ಎಂದರು.

ನಿಧನ ವಾರ್ತೆ

ಎಸ್.ಎ. ಜಿದ್ದಿ



ವಿಜಯಪುರ: ವಿಧಾನ ಪರಿಷತ್ ಮಾಜಿ ಸದಸ್ಯ, ಜಿಲ್ಲಾ ಕಾಂಗ್ರೆಸ್ ಘಟಕದ ಮಾಜಿ ಅಧ್ಯಕ್ಷ, ವಿಜಯಪುರ ನಗರದ ಕಾಳಿದಾಸ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿದ್ದ ಎಸ್.ಎ. ಜಿದ್ದಿ(82) ಶನಿವಾರ ರಾತ್ರಿ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಜಿದ್ದಿ ಅವರು 1978ರಲ್ಲಿ ತಿಕೋಟಾ ಮತ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಅಲ್ಪ ಅಂತರದಲ್ಲಿ ಸೋತಿದ್ದರು.ಜಿಲ್ಲೆಯ ಹಿಂದುಳಿದ ವರ್ಗಗಳ ಪ್ರಶ್ನಾತೀತ ನಾಯಕರಾಗಿದ್ದ ಎಸ್.ಎ. ಜಿದ್ದಿಯವರು ಆಗಿನ ಮುಖ್ಯಮಂತ್ರಿ ದೇವರಾಜ ಅರಸು, ಕೋಳೂರು ಮಲ್ಲಪ್ಪ ಮತ್ತು ಡಿ.ಕೆ. ನಾಯ್ಕರ್ ಅವರ ನಿಕಟ ಒಡನಾಡಿಯಾಗಿದ್ದುಕೊಂಡು, ಹಿಂದುಳಿದ ವರ್ಗಗಳಿಗೆ ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ಶಕ್ತಿಯನ್ನು ತುಂಬುವಲ್ಲಿ ಬಹುವಾಗಿ ಶ್ರಮಿಸಿದ್ದರು.

ವಿಜಯಪುರದಲ್ಲಿ ಕಾಳಿದಾಸ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ಶಾಲೆ, ಕಾಲೇಜು, ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದ್ದರು.

ವಾರ್ಡನ್ ಹುದ್ದೆಗೆ ಬಡ್ತಿ ರದ್ದು: ಕೆಎಟಿ

ಒಂದನೇ ಪುಟದಿಂದ...

‘ಹೀಗಾಗಿ, ವಾರ್ಡನ್ ಹುದ್ದೆಗೆ (ವೇತನ ಶ್ರೇಣಿ ₹ 37,900– ₹ 70,850) ಬಡ್ತಿ ಪಡೆದವರು, ನಿಲಯ ಮೇಲ್ವಿಚಾರಕ ವೃಂದದ ಹುದ್ದೆಗೆ ತಕ್ಷಣ ಮರಳಬೇಕು. ಬಡ್ತಿ ಪಡೆದು ಈ ವೇತನ ಶ್ರೇಣಿ ಪಡೆಯಲು ಅರ್ಹರಲ್ಲದ ಕಾರಣ, ಹೆಚ್ಚುವರಿಯಾಗಿ ಪಡೆದ ವೇತನ ಮೊತ್ತವನ್ನು ತಿಂಗಳ ಕಂತಿನಲ್ಲಿ ವಸೂಲು ಮಾಡಬೇಕು ಎಂದೂ ಆದೇಶದಲ್ಲಿದೆ ವಿವರಿಸಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು–2019 ಅನ್ನು ರೂಪಿಸಿ 2019 ರ ಅ. 30ರಂದು ಅಧಿಸೂಚನೆ ಹೊರಡಿಸಲಾಗಿದೆ. ಪ್ರಸ್ತುತ ಈ ನಿಯಮ ಜಾರಿಯಲ್ಲಿದೆ. ಆಗ ವಾರ್ಡನ್ ಹುದ್ದೆಯಲ್ಲಿದ್ದವರನ್ನು ಹೊರತುಪಡಿಸಿ, ವಾರ್ಡನ್ ಹುದ್ದೆಗಳನ್ನೇ ರದ್ದು ಮಾಡಲಾಗಿತ್ತು. ಹೊಸ ಹುದ್ದೆಗಳ ಸೃಜನೆಗೂ ಅವಕಾಶ ಇಲ್ಲ. ಅಲ್ಲದೆ, ನಿಲಯ ಮೇಲ್ವಿಚಾರಕರಿಗೆ ಕಚೇರಿ ಮೇಲ್ವಿಚಾರಕರು ಅಥವಾ ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳ ಹುದ್ದೆಗೆ ಮಾತ್ರ ಬಡ್ತಿ ನೀಡಲು ಅವಕಾಶ ಕಲ್ಪಿಸಲಾಗಿತ್ತು.

ಮುಖ್ಯಾಂಶಗಳು

- ರದ್ದುಗೊಂಡಿದ್ದ ಹುದ್ದೆಗೆ ಬಡ್ತಿ ನೀಡಿದ್ದ ಇಲಾಖೆ
- ನಿಯಮಬಾಹಿರವೆಂದು ಅಭಿಪ್ರಾಯಪಟ್ಟ ಕೆಎಟಿ
- ಅರ್ಜಿದಾರರಿಗೆ ತಲಾ ₹5 ಸಾವಿರ ಪರಿಹಾರ ನೀಡುವಂತೆಯೂ ಆದೇಶ

2019ರಲ್ಲಿ ಹೊಸ ವೃಂದ ಮತ್ತು ನೇಮಕಾತಿ ನಿಯಮಗಳು ಜಾರಿಗೆ ಬಂದು, ವಾರ್ಡನ್ ಹುದ್ದೆಗಳು ರದ್ದಾಗುವ ಮೊದಲೇ ತಮಗೆ ಬಡ್ತಿಯ ಅರ್ಹತೆ ಇತ್ತು ಎಂದು ಕೆಲವು ನೌಕರರು ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದ್ದರು. ಅದರ ಆಧಾರದಲ್ಲಿ ಒಂದು ಬಾರಿಗೆ ಬಡ್ತಿಗೆ ಅವಕಾಶ ನೀಡಲು ಅನುಮತಿ ಕೋರಿ ಇಲಾಖೆಯ ಆಯುಕ್ತರು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದರು. ಇಲಾಖೆಯು 2023ರ ಜುಲೈ 21ರಂದು 313 ವಾರ್ಡನ್ ಹುದ್ದೆಗಳಿಗೆ ಬಡ್ತಿಗೆ ಅನುಮತಿ ನೀಡಿತ್ತು.

ವಾರ್ಡನ್ ಹುದ್ದೆಗೆ ಬಡ್ತಿ ನೀಡುವಂತೆ ನಿಲಯ ಮೇಲ್ವಿಚಾರಕರು ಹಿಂದೆ ಹಲವು ಬಾರಿ ಮನವಿ ಸಲ್ಲಿಸಿದ್ದರು. ‘ನಿಲಯ ಪಾಲಕರ ಹುದ್ದೆಗಳನ್ನು ರದ್ದುಗೊಳಿಸಿ ರುವುದರಿಂದ ಬಡ್ತಿ ನೀಡಲು ಅವಕಾಶ ಇಲ್ಲ’ ಎಂದು ಇಲಾಖೆ ಆಯುಕ್ತ ಕೆ.ಎ. ದಯಾನಂದ ಅವರು 2022ರ ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ನಿಲಯ ಮೇಲ್ವಿಚಾರಕರಿಗೆ ಹಿಂಬರಹ ನೀಡಿದ್ದರು. ನಾಲ್ಕು ವರ್ಷಗಳ ಹಿಂದೆಯೇ ರದ್ದುಗೊಂಡಿದ್ದ ವಾರ್ಡನ್ ಹುದ್ದೆಗಳನ್ನು ಸಚಿವ ಸಂಪುಟ ಸಭೆಯ ಒಪ್ಪಿಗೆ ಪಡೆಯದೆ ಮರು ಸೃಜಿಸಿ ತರಾತುರಿಯಲ್ಲಿ ನಿಲಯ ಮೇಲ್ವಿಚಾರಕರಿಗೆ ಬಡ್ತಿ ನೀಡಿರುವುದು ಚರ್ಚೆಗೆ ಗ್ರಾಸವಾಗಿತ್ತು. ಈ ಬಗ್ಗೆ ‘ಪ್ರಜಾವಾಣಿ’ಯ ಆಗಸ್ಟ್ 22ರ ಸಂಚಿಕೆಯಲ್ಲಿ ವರದಿ ಪ್ರಕಟವಾಗಿತ್ತು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಕಿವಿಗೊಡುವ ಸದ್ಬುದ್ಧಿ ಇದ್ದರೆ ನಾವು ನಮ್ಮ ಜೀವನದಲ್ಲಿನ ಎಷ್ಟೋ ಅನಾಹುತಗಳನ್ನು ತಪ್ಪಿಸಬಹುದು.
-ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ಜನರ ಬವಣೆಯ ದರ್ಶನ ಆಡಳಿತ ವೈಫಲ್ಯಕ್ಕೆ ನಿದರ್ಶನ

ಮುಖ್ಯಮಂತ್ರಿ ಸಿದ್ದರಾಮಯ್ಯ ಈ ತಿಂಗಳ 8ರಂದು ನಡೆಸಿದ ರಾಜ್ಯಮಟ್ಟದ ಎರಡನೇ 'ಜನಸ್ಪಂದನ'ವು ನಾಡಿನುದ್ದಕ್ಕೂ ಅಬಲರು, ಅಂಗವಿಕಲರು, ಹಿರಿಯ ಜೀವಗಳು, ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಅಗಾಧತೆಗೆ ಕನ್ನಡಿ ಹಿಡಿದಿದೆ. ಮುಖ್ಯಮಂತ್ರಿ ಬಳಿಗೆ ಜನರು ಹೊತ್ತು ತಂದ ಅಹವಾಲುಗಳನ್ನು ಅವಲೋಕಿಸಿದರೆ ಆಡಳಿತ ವ್ಯವಸ್ಥೆ ಯಾವ ಮಟ್ಟಿಗೆ ಜಡ್ಡುಗಟ್ಟಿದೆ ಎಂಬುದು ಯಾರಿಗಾದರೂ ಮನವರಿಕೆ ಆಗುತ್ತದೆ. ಜನರ ಕಷ್ಟಕ್ಕೆ ಕಿವಿಗೊಡಬೇಕಾದ, ಅಹವಾಲು ಹೊತ್ತು ಕಚೇರಿಗೆ ಬಂದವರಿಗೆ ಸಕಾರಾತ್ಮಕವಾಗಿ ಸ್ಪಂದಿಸಬೇಕಾದ ವಿವಿಧ ಇಲಾಖೆಯ ಅಧಿಕಾರಿಗಳು, ನೌಕರರು ಸಂವೇದನೆ ಕಳೆದುಕೊಂಡಿರುವುದರ ಜೊತೆಗೆ ಕರ್ತವ್ಯಪ್ರಜ್ಞೆ ಮರೆತಿರುವುದರಿಂದಲೇ ಜನರಿಗೆ ಮುಖ್ಯಮಂತ್ರಿಯವರೇ ಕೊನೆಯ ಆಸರೆಯಾಗಿ ಕಂಡಿರಬಹುದು. ನವೆಂಬರ್‌ನಲ್ಲಿ ನಡೆದ ಜನಸ್ಪಂದನದಲ್ಲಿ 4,030 ಅರ್ಜಿಗಳನ್ನು ಸ್ವೀಕರಿಸಲಾಗಿತ್ತು. ಅವುಗಳಲ್ಲಿ 3,738 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು, ಶೇ 98ರಷ್ಟು ಸಾಧನೆಯಾಗಿದೆ ಎಂದು ಎರಡನೇ ಜನಸ್ಪಂದನದ ವೇಳೆ ಸಿದ್ದರಾಮಯ್ಯ ಹೇಳಿದ್ದಾರೆ. ಎಲ್ಲ ಜಿಲ್ಲೆಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಈವರೆಗೆ ಒಟ್ಟು 108 ಜನಸ್ಪಂದನ ಕಾರ್ಯಕ್ರಮಗಳನ್ನು ನಡೆಸಿದ್ದಾರೆ ಎಂದೂ ವಿವರಿಸಿದ್ದಾರೆ. ಹಾಗಿದ್ದರೂ ಮೊದಲನೇ ಜನಸ್ಪಂದನಕ್ಕೆ ಹೋಲಿಸಿದರೆ ಎರಡನೇ ಜನಸ್ಪಂದನದಲ್ಲಿ ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ ಮೂರು ಪಟ್ಟು ಹೆಚ್ಚಾಗಿದೆ. 12,372 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಆ ಪೈಕಿ 246 ಅರ್ಜಿಗಳನ್ನು ಸ್ಥಳದಲ್ಲಿಯೇ ಇತ್ಯರ್ಥಪಡಿಸಲಾಗಿದೆ. ಇನ್ನೂ 12,126 ಅರ್ಜಿಗಳು ಪರಿಶೀಲನೆಯ ಹಂತದಲ್ಲಿಯೇ ಇವೆ. ಅರ್ಜಿಗಳ ಮಹಾಪೂರ ನೋಡಿದರೆ, ಜನರು ನಿತ್ಯವೂ ಮುಖಾಮುಖಿಯಾಗುತ್ತಿರುವ ಸಂಕಷ್ಟಗಳ ಆಳ-ಅಗಲದ ಬಾಹುಳ್ಯ ಎಷ್ಟೆಂಬುದು ಮುಖ್ಯಮಂತ್ರಿಯವರ ಅರಿವಿಗೆ ಬಂದಿರಬಹುದು.



ಸಾರ್ವಜನಿಕರ ಅರ್ಜಿಗಳನ್ನು ನಿರ್ದಿಷ್ಟ ಕಾಲಮಿತಿಯೊಳಗೆ ಇತ್ಯರ್ಥಪಡಿಸುವಂತಹ ಜನಸ್ನೇಹಿ ಆಡಳಿತವು ಇಂದಿನ ತುರ್ತು ಅಗತ್ಯ

ಬಿಜೆಪಿ ನೇತೃತ್ವದ ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ, ಆಡಳಿತ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ ಎಂದು ಅಂದು ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್ ಟೀಕಿಸಿತ್ತು. ಅದರಿಂದ ರೋಸಿಹೋಗಿದ್ದ ಜನ, ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಭಾರಿ ಬಹುಮತ ನೀಡಿದರು. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ಎಂಟು ತಿಂಗಳು ಕಳೆದಿದೆ. ಆದರೆ, ಅಧಿಕಾರಿಶಾಹಿಯ ಮನೋಧರ್ಮ ಬದಲಾಗಿಲ್ಲ ಎಂಬುದನ್ನು ಮುಖ್ಯಮಂತ್ರಿಯವರ ಜನಸ್ಪಂದನಕ್ಕೆ ಹರಿದುಬಂದ ಅಹವಾಲುಗಳ ಮಹಾಪೂರ ದೃಢಪಡಿಸುತ್ತದೆ. ಜಿಲ್ಲಾ ಮಟ್ಟದಲ್ಲಿ ಜನಸ್ಪಂದನ ನಡೆಸಿ ಜನರ ಅಹವಾಲುಗಳನ್ನು ಇತ್ಯರ್ಥಪಡಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವರಿಗೆ ಮುಖ್ಯಮಂತ್ರಿ ಸೂಚಿಸಿದ್ದರು. ಆದರೆ, ಹೆಚ್ಚಿನ ಜಿಲ್ಲೆಗಳಲ್ಲಿ ಜನಸ್ಪಂದನ ನಿಯಮಿತವಾಗಿ ನಡೆಯುತ್ತಿಲ್ಲ. ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಹಂತದಲ್ಲೇ ಸಮಸ್ಯೆ ಆಲಿಸಿ, ಪರಿಹಾರ ಕಲ್ಪಿಸಲು ವಿಪುಲ ಅವಕಾಶಗಳು ಇರುತ್ತವೆ. ತಾಲ್ಲೂಕು ಮಟ್ಟದಲ್ಲಿ ಕೂಡ ಇಂತಹದೇ ವ್ಯವಸ್ಥೆ ಇದೆ. ಹಾಗಿದ್ದರೂ ಮುಖ್ಯಮಂತ್ರಿಗೆ ಮನವಿ ಕೊಡಲು ನಾಡಿನ ಮೂಲೆ ಮೂಲೆಗಳಿಂದ ಬೆಂಗಳೂರಿನವರೆಗೂ ಜನರು ಧಾವಿಸಿರುವುದು ಕೆಳಹಂತದಲ್ಲಿ ಆಡಳಿತ ವ್ಯವಸ್ಥೆಯು ಜಡ್ಡುಗಟ್ಟಿರುವುದರ ಸಂಕೇತದಂತಿದೆ. 'ಅಧಿಕಾರಿಗಳು ಕೆಳ ಹಂತದಲ್ಲೇ ಸಮಸ್ಯೆ ಬಗೆಹರಿಸಿದರೆ ಬೆಂಗಳೂರಿಗೆ ಜನ ಬಂದು ಅರ್ಜಿ ಕೊಡುವ ಸಂದರ್ಭ ಉದ್ಭವಿಸುವುದಿಲ್ಲ. ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಸಿಇಒಗಳ ಮೇಲೆ ಜವಾಬ್ದಾರಿ ಹೆಚ್ಚು. ಆಡಳಿತವು ಜಡತ್ವದಿಂದ ಕೂಡಿರಬಾರದು. ಅಧಿಕಾರಿಗಳ ಹಂತದಲ್ಲೇ ಸಮಸ್ಯೆ ಬಗೆಹರಿಸಿ. ಜನರನ್ನು ಸರಿಯಾಗಿ ನಡೆಸಿಕೊಳ್ಳದಿದ್ದರೆ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಎಚ್ಚರಿಸುತ್ತಲೇ ಇದ್ದಾರೆ. ಆದರೂ, ಅವರ ಎಚ್ಚರಿಕೆಯು ಅಧಿಕಾರಿಗಳ ಕಾರ್ಯಶೈಲಿಯ ಮೇಲೆ ಯಾವುದೇ ಪರಿಣಾಮ ಬೀರಿದಂತಿಲ್ಲ. ಜನರ ಸಂಕಷ್ಟಗಳಿಗೆ ಸ್ಪಂದಿಸದ ನೌಕರರು ಮತ್ತು ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕಾದ ಅಗತ್ಯವನ್ನು ಇದು ಸಾರಿ ಹೇಳುತ್ತದೆ. ಗ್ರಾಮ, ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಇತ್ಯರ್ಥವಾಗಬೇಕಾದ ಅರ್ಜಿಗಳು ರಾಜಧಾನಿಯವರೆಗೂ ಬಂದು ಮುಖ್ಯಮಂತ್ರಿ ಕಚೇರಿ ತಲುಪಿವೆ. ಜನಸ್ನೇಹಿ ಕೇಂದ್ರ, ಗ್ರಾಮ ಪಂಚಾಯಿತಿ, ನಾಡ ಕಚೇರಿ ಹೆಚ್ಚೆಂದರೆ ಜಿಲ್ಲಾ ಮಟ್ಟದಲ್ಲೇ ಇಂತಹ ಬಹುತೇಕ ಅರ್ಜಿಗಳನ್ನು ವಿಲೇವಾರಿ ಮಾಡಬಹುದು. ಸಾರ್ವಜನಿಕರ ಅರ್ಜಿಗಳನ್ನು ನಿರ್ದಿಷ್ಟ ಕಾಲಮಿತಿಯೊಳಗೆ ವಿಲೇವಾರಿ ಮಾಡುವುದಕ್ಕಾಗಿಯೇ 2012ರಲ್ಲಿ ರಾಜ್ಯ ಸರ್ಕಾರ ಜಾರಿಗೊಳಿಸಿದ 'ಸಕಾಲ' ಕಾಯ್ದೆ ಇದೆ. ದೇಶದಲ್ಲೇ ಮೊದಲ ಬಾರಿಗೆ ಇಂತಹ ಮಹತ್ವದ ಕಾಯ್ದೆಯನ್ನು ಜಾರಿಗೊಳಿಸಿದ್ದರೂ ಅದು ಸಮರ್ಪಕವಾಗಿ ಅನುಷ್ಠಾನಕ್ಕೆ ಬಂದಿಲ್ಲ ಎಂಬುದನ್ನು ಹದಗೆಟ್ಟ ಈ ಸ್ಥಿತಿಯೇ ಹೇಳುತ್ತದೆ. ಸಣ್ಣಪುಟ್ಟ ಸಮಸ್ಯೆಗಳ ಪರಿಹಾರಕ್ಕೂ ಮುಖ್ಯಮಂತ್ರಿಯವರ ಆದೇಶ ಅಥವಾ ನಿರ್ದೇಶನ ಬೇಕು ಎನ್ನುವುದಾದರೆ ಆಡಳಿತ ವ್ಯವಸ್ಥೆಯಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯ ನೌಕರವರ್ಗ ಏಕಿರಬೇಕು ಎನ್ನುವ ಪ್ರಶ್ನೆ ಏಳುತ್ತದೆ. ಸಾರ್ವಜನಿಕರ ಅರ್ಜಿಗಳನ್ನು ನಿರ್ದಿಷ್ಟ ಕಾಲಮಿತಿಯೊಳಗೆ ಇತ್ಯರ್ಥಪಡಿಸುವಂತಹ ಜನಸ್ನೇಹಿ ಆಡಳಿತವು ಇಂದಿನ ತುರ್ತು ಅಗತ್ಯ. ಅದಕ್ಕಾಗಿ ಪರಿಣಾಮಕಾರಿಯಾದ ನಿಗಾ ವ್ಯವಸ್ಥೆಯೂ ಬೇಕು. ಸಾರ್ವಜನಿಕರ ಅಹವಾಲುಗಳಿಗೆ ಸ್ಪಂದಿಸದ, ಅರ್ಜಿಗಳ ವಿಲೇವಾರಿಯಲ್ಲಿ ವಿಳಂಬ ಮಾಡುವ ಅಧಿಕಾರಿಗಳು, ನೌಕರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತಹ ಇಚ್ಛಾಶಕ್ತಿಯನ್ನು ಸರ್ಕಾರ ಪ್ರದರ್ಶಿಸಬೇಕು.

ದಿನದ ಟ್ವೀಟ್


ರೈತರ ಬವಣೆ ತಪ್ಪಲಿ



ಇದು ಅತ್ಯಂತ ನೋವಿನ ಸಂಗತಿ. ಪಂಜಾಬ್ ರೈತರು ರಸ್ತೆಗಳಲ್ಲಿ ಬಿಸಾಡಿರುವ ಲೋಡ್‌ಗಟ್ಟಲೆ ಕಿನ್ನೊ ಹಣ್ಣುಗಳ ಮೇಲೆ ಟ್ರ್ಯಾಕ್ಟರ್‌ಗಳನ್ನು ಹತ್ತಿಸುತ್ತಿದ್ದಾರೆ. ನಗರಗಳಲ್ಲಿ ಕಿನ್ನೊ ಹಣ್ಣು ₹ 100ಕ್ಕೆ 3 ಕೆ.ಜಿ.ಯಂತೆ ಲಭ್ಯವಿದ್ದರೆ, ರೈತರಿಗೆ ಸಿಗುತ್ತಿರುವುದು ಕೆ.ಜಿ.ಗೆ ₹ 5 ಮಾತ್ರ...

ದೇವಿಂದರ್ ಶರ್ಮಾ, ಲೇಖಕ

ಕಿಡಿನುಡಿ



ಇಂದಿನ ದೃಶ್ಯ ಮಾಧ್ಯಮಗಳು ಪ್ರಶ್ನಿಸುವ ಪ್ರವೃತ್ತಿಯನ್ನೇ ಕೊಲ್ಲುತ್ತಿವೆ. ಗಾಂಧಿ ಅವರು ನಂಬಿದ್ದ ರಾಮನು ಪ್ರಜಾಪ್ರಭುತ್ವವಾದಿ ರಾಮ ಎಂಬ ಸತ್ಯವನ್ನು ಮುಚ್ಚಿಡುತ್ತಿವೆ.

ರಹಮತ್ ತರೀಕೆರೆ, ವಿಮರ್ಶಕ

25 ವರ್ಷಗಳ ಹಿಂದೆ

ಶುಕ್ರವಾರ, 12-2-1999

• **ಪಿರಿಯಾಪಟ್ಟಣದಲ್ಲಿ ಬ್ಯಾಂಕ್ ದರೋಡೆ**

ಪಿರಿಯಾಪಟ್ಟಣ, ಫೆ. 11– ಪಟ್ಟಣದ ಹೊರವಲಯದ ಅಬ್ಬೂರಿನಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ವ್ಯವಸಾಯ ಅಭಿವೃದ್ಧಿ ಶಾಖೆಗೆ ಇಂದು ಮಧ್ಯಾಹ್ನ ಹಠಾತ್ತನೆ ಮೂವರು ಬಂದೂಕುಧಾರಿಗಳು ಪ್ರವೇಶಿಸಿ ಗುಂಡು ಹಾರಿಸಿ ಕ್ಯಾಷ್ ಕೌಂಟರ್‌ನಲ್ಲಿದ್ದ ಹಣವನ್ನಲ್ಲದೆ ನೌಕರರ ಬಳಿಯಿದ್ದ ಹಣ, ಒಡವೆ ದೋಚಿಕೊಂಡು ಪರಾರಿಯಾಗಿದ್ದಾರೆ.

ದರೋಡೆಕೋರರು ಹಾರಿಸಿದ ಗುಂಡು ತಗುಲಿ ಬ್ಯಾಂಕ್ ನೌಕರರೊಬ್ಬರು ಗಾಯಗೊಂಡಿದ್ದಾರೆ.

• **ಕೃಷ್ಣಾ ಮೇಲ್ದಂಡೆ: 2000 ಇಸವಿ ಒಳಗೆ ರಾಜ್ಯದ ಪಾಲಿನ ನೀರು ಬಳಕೆ- ಪಾಟೀಲ್**

ಬಳ್ಳಾರಿ, ಫೆ. 11– ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ 2000 ಇಸವಿ ಒಳಗೆ ರಾಜ್ಯದ ಪಾಲಿನ ನೀರು ಬಳಸಿಕೊಳ್ಳಲು ಸರ್ವಸನ್ನದ್ಧರಾಗಿರುವುದಾಗಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ಇಲ್ಲಿ ತಿಳಿಸಿದರು.

ಆಲಮಟ್ಟಿ ಅಣೆಕಟ್ಟಿನ ಕಾಮಗಾರಿಯ ಪ್ರಗತಿ ವೀಕ್ಷಿಸಿ ಹೆಲಿಕಾಪ್ಟರ್‌ನಲ್ಲಿ ಬೆಂಗಳೂರಿಗೆ ತೆರಳುವ ಮಾರ್ಗದಲ್ಲಿ ಇಲ್ಲಿನ ವಿಮಾನ ನಿಲ್ದಾಣದಲ್ಲಿ ಸ್ವಲ್ಪ ಸಮಯ ತಂಗಿದ್ದ ಅವರು ಪತ್ರಕರ್ತರ ಜೊತೆ ಮಾತನಾಡುತ್ತಿದ್ದರು.

'2000 ಇಸವಿ ಒಳಗೆ ಯೋಜನೆ ಮುಗಿಸುತ್ತೇವೆ ಎಂದು ಹೇಳುತ್ತಿದ್ದೀರಿ. ಆದರೆ, ಉಳಿದಿರುವ 20–22 ತಿಂಗಳಲ್ಲಿ ಯೋಜನೆ ಪೂರ್ಣಗೊಂಡು ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳುವ ಸಾಧ್ಯತೆ ಬಗ್ಗೆ ಜನತೆ ಆತಂಕಗೊಂಡಿದೆಯಲ್ಲ' ಎಂದಾಗ, 'ಅಣೆಕಟ್ಟೆಗೆ ಗೇಟ್ ಕೂರಿಸಿದರೆ ನಮ್ಮ ಪಾಲಿನ ನೀರು ಉಳಿಸಿಕೊಂಡಂತೆಯೇ' ಎಂದರು.

50 ವರ್ಷಗಳ ಹಿಂದೆ

ಮಂಗಳವಾರ, 12-2-1974

• **ಉತ್ತಮ ವರ್ಗದ್ದು ಬಿಟ್ಟು ಮಿಕ್ಕ ಎಲ್ಲ ಅಕ್ಕಿ ಕೆ.ಜಿಗೆ 2 ರೂ**

ಬೆಂಗಳೂರು, ಫೆ. 11– ಉತ್ತಮ ಅಕ್ಕಿ ಹೊರತು ಉಳಿದ ಎಲ್ಲ ವರ್ಗಗಳ ಅಕ್ಕಿಯ ಪರಮಾವಧಿ ಬೆಲೆಯನ್ನು ಸಗಟು ಮಾರಾಟ ಘಟ್ಟದಲ್ಲಿ ಕೆ.ಜಿ ಒಂದಕ್ಕೆ ಎರಡು ರೂಪಾಯಿ ಒಳಗೆ ಇಡಲು ನಗರದ ಸಗಟು ಅಕ್ಕಿ ವರ್ತಕರು ನಿರ್ಣಯ ಮಾಡಿದ್ದಾರೆ.

ಅಕ್ಕಿ ವ್ಯಾಪಾರವನ್ನು ತಾವು ನಿಲ್ಲಿಸುವುದಾಗಿ ಬಂದ ವರದಿಯನ್ನು ಈ ವರ್ತಕರು ನಿರಾಕರಿಸಿದ್ದಾರೆ.

ಇಂದು ವಿಧಾನಸೌಧದಲ್ಲಿ ಆಹಾರ ಸಚಿವ ಕೆ.ಎಚ್. ಪಾಟೀಲ್ ಅವರೊಡನೆ ವಾಣಿಜ್ಯ ಸಂಘದ ಅಧ್ಯಕ್ಷರು ಹಾಗೂ ಸಗಟು ಅಕ್ಕಿ ವರ್ತಕರ ಸಂಘದ ಸದಸ್ಯರು ಪರಿಸ್ಥಿತಿ ಕುರಿತು ಚರ್ಚೆ ನಡೆಸಿದ ನಂತರ ಸಗಟು ವರ್ತಕರು ಈ ನಿರ್ಣಯ ಅಂಗೀಕರಿಸಿದ್ದಾರೆ.

• **ಬೆಳ್ಳಿ ಬೆಲೆ ಅಪಾರ ಏರಿಕೆ**

ಮುಂಬೈ, ಫೆ. 11– ಬೆಳ್ಳಿಯ ಬೆಲೆ ಕಿಲೊ ಗ್ರಾಂಗೆ 60 ರೂ.ಗಳಷ್ಟು ಮೇಲಕ್ಕೆ ಪುಟಿಯಿತು. ಬೆಳ್ಳಿಯು ಕಿಲೊ ಗ್ರಾಂಗೆ 1,140 ರೂ.ಗಳ ದಾಖಲೆ ಬೆಲೆಯನ್ನು ಇಂದು ತಲುಪಿತು.

ಶನಿವಾರವಷ್ಟೇ ಬೆಳ್ಳಿಯ ಬೆಲೆ 73 ರೂ.ಗಳಷ್ಟು ಮೇಲಕ್ಕೆ ಜಿಗಿದಿತ್ತು. ಮಾರಾಟದ ದಿನವಾದ ಇಂದು ಮತ್ತೆ 60 ರೂ. ಏರಿದ್ದು, ಇದು ಅಪರೂಪದ ಬೆಳವಣಿಗೆ ಆಗಿದೆ. ಇದರಿಂದ ಎರಡನೇ ದಿನದಲ್ಲಿ ಬೆಲೆಯು 133 ರೂ. ನಷ್ಟು ಏರಿದಂತಾಯಿತು.

ಆಟದ ಅಂಗಳವನ್ನು ಆಕ್ರಮಿಸಿಕೊಂಡಿವೆ ಸಾಮಾಜಿಕ ಜಾಲತಾಣದ ವಿಕೃತಿಗಳು

ಕ್ರೀಡಾತಾರೆಯರನ್ನೂ ಕಾಡುವ ಸುಳ್ಳು ಸುದ್ದಿ



ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಭಾರತ ಕ್ರಿಕೆಟ್ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ಮತ್ತು ದಕ್ಷಿಣ ಆಫ್ರಿಕಾದ ಎಬಿ ಡಿವಿಲಿಯರ್ಸ್ ಸ್ನೇಹವೆಂದರೆ, ಕ್ರೀಡಾಕ್ಷೇತ್ರದ ಮಧುರ ಕತೆಗಳಲ್ಲಿ ಒಂದು. ಇಬ್ಬರೂ ಆಧುನಿಕ ಕ್ರಿಕೆಟ್ ರಂಗದ ಉನ್ನತ ಸಾಧಕರು. ಆದರೆ ಇದೇ ಮೊದಲ ಸಲ ಅವರಿಬ್ಬರಿಗೂ ಮುಜುಗರ ಉಂಟುಮಾಡುವಂತಹ ಸಂಗತಿಯೊಂದು ನಡೆಯಿತು.

ವಿರಾಟ್ ಮತ್ತು ಅನುಷ್ಕಾ ದಂಪತಿ ಎರಡನೇ ಮಗುವಿನ ನಿರೀಕ್ಷೆಯಲ್ಲಿದ್ದಾರೆ, ಆದ್ದರಿಂದ ಇಂಗ್ಲೆಂಡ್ ಎದುರಿನ ಟೆಸ್ಟ್‌ನಲ್ಲಿ ವಿರಾಟ್ ಆಡುತ್ತಿಲ್ಲ ಎಂದು ಸಾಮಾಜಿಕ ಜಾಲತಾಣದಲ್ಲಿ ಸಂದೇಶವೊಂದು ಹರಿದಾಡಿತು. ಅದನ್ನು ಇಟ್ಟುಕೊಂಡು ಎಬಿ ಡಿವಿಲಿಯರ್ಸ್ ಕೂಡ ತಮ್ಮ ಯುಟ್ಯೂಬ್ ವಾಹಿನಿಯಲ್ಲಿ ಸಂದೇಶ ಹಾಕಿದ್ದರು. ನಂತರ ಅದು ಸುಳ್ಳು ಸುದ್ದಿ ಎಂದು ಗೊತ್ತಾದ ಕೂಡಲೇ ಕನಲಿದರು. ಕೂಡಲೇ ತಮ್ಮ ಆಪ್ತಮಿತ್ರ ಕೊಹ್ಲಿ ಕುಟುಂಬದ ಕ್ಷಮೆ ಕೇಳಿದರು. ತಾವು ಸುಳ್ಳು ಸಂದೇಶವೊಂದನ್ನು ನಂಬಿ ಎಡವಿದ್ದಾಗಿ ಹಳಹಳಿಸಿದರು.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಆಡುತ್ತಿದ್ದ ಎಬಿಡಿಗೆ ಕರ್ನಾಟಕವೂ ಸೇರಿದಂತೆ ಭಾರತದೆಲ್ಲೆಡೆ ಅಭಿಮಾನಿಗಳಿದ್ದಾರೆ. ಅಂತಹ ಸಭ್ಯ ಆಟಗಾರ ತಲೆತಗ್ಗಿಸಲು 'ಫೇಕ್ ನ್ಯೂಸ್' ಕಾರಣವಾಗಿದ್ದು ವಿಪರ್ಯಾಸ.

ಸುಳ್ಳು ಸುದ್ದಿಗಳಷ್ಟೇ ಅಲ್ಲ, ಕೃತಕ ಬುದ್ಧಿಮತ್ತೆಯಿಂದ ಸಿದ್ಧಗೊಳಿಸಿದ ಡೀಪ್ ಫೇಕ್ ವಿಡಿಯೊಗಳ ಹಾವಳಿಯೂ ಮಿತಿ ಮೀರುತ್ತಿದೆ. ಇದು ಕ್ರೀಡಾರಂಗವನ್ನೂ ಬಿಟ್ಟಿಲ್ಲ. ತಮ್ಮ ವೃತ್ತಿ ಮತ್ತು ವ್ಯಕ್ತಿತ್ವವು ಟ್ರೋಲರ್‌ಗಳು ಹಾಗೂ ಫೇಕರ್‌ಗಳಿಗೆ ತುತ್ತಾಗದಂತೆ ಎಚ್ಚರ ವಹಿಸುವ ಒತ್ತಡ ಕ್ರೀಡಾಪಟುಗಳ ಮೇಲೆ ಬೀಳುತ್ತಿದೆ. ತಮ್ಮ ಆಟದ ಬಗ್ಗೆ ಬರುವ ಟೀಕೆಗಳು ಮತ್ತು ವಿಶ್ಲೇಷಣೆಗಳನ್ನು ನಿರ್ವಹಿಸುವುದನ್ನು ಕ್ರೀಡಾಪಟುಗಳು ಕಾಲಕ್ರಮೇಣ ಕಲಿತುಬಿಡುತ್ತಾರೆ. ಆದರೆ ಅದರಾಚೆ ಸಭ್ಯತೆಯ ಎಲ್ಲೆ ಮೀರಿದ ವಿಕೃತ ಸಂದೇಶಗಳ ಬಗ್ಗೆ ಈಗ ತಲೆಕೆಡಿಸಿಕೊಳ್ಳಬೇಕಾದ ಪರಿಸ್ಥಿತಿ ಎದುರಾಗಿದೆ. ಇವೆಲ್ಲದರ ಪರಿಣಾಮವಾಗಿ, ಈಗ ಮಹತ್ವದ ಟೂರ್ನಿಗಳ ಸಂದರ್ಭದಲ್ಲಿ ತಂಡದ ಆಟಗಾರರನ್ನು ಸಾಮಾಜಿಕ ಜಾಲತಾಣ ಮತ್ತು ಮಾಧ್ಯಮಗಳಿಂದ ದೂರವಿರಿಸಲು ಆಡಳಿತಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿವೆ. ಅಲ್ಲದೆ ಆಟಗಾರರು ಮತ್ತು ಅಭಿಮಾನಿಗಳ ನಡುವಣ ನೇರ ಸಂಪರ್ಕಗಳನ್ನು ಕಡಿತ ಮಾಡಲಾಗುತ್ತಿದೆ. ಖ್ಯಾತನಾಮ ಆಟಗಾರರು ತಮ್ಮ ಸಾಮಾಜಿಕ ಜಾಲತಾಣ ಖಾತೆಗಳ ನಿರ್ವಹಣೆಗಾಗಿ ಪರಿಣತರ ಮೊರೆ ಹೋಗುತ್ತಿದ್ದಾರೆ. 'ಕಷ್ಟಪಟ್ಟು ಗಳಿಸಿದ ವರ್ಚಸ್ಸನ್ನು ಉಳಿಸಿಕೊಳ್ಳುವುದು ಮುಖ್ಯ' ಎಂಬುದು ಅವರ ಕಳಕಳಿ.

ಆದರೆ ಇಂತಹ ಅತಿರೇಕಗಳ ಹಿಂದೆ ಮಾರುಕಟ್ಟೆಯಲ್ಲಿ ಲಾಭ ಗಳಿಸುವ ಕೆಲವರ ಹುನ್ನಾರವೂ ಅಡಗಿರಬಹುದು ಎಂಬ ಗುಮಾನಿ ಇದೆ. ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರಿಗೆ ಸಂಬಂಧಿಸಿದ ಇತ್ತೀಚಿನ ಪ್ರಕರಣವನ್ನು ಗಮನಿಸಿ. ಕಂಪನಿಯೊಂದು ತನ್ನ ಗೇಮಿಂಗ್ ಆ್ಯಪ್ ಮೂಲಕ ಸುಲಭವಾಗಿ ಹಣ ಗಳಿಸಬಹುದು ಎಂದು ಸಚಿನ್ ಅವರೇ ಹೇಳಿರುವಂತಹ ನಕಲಿ ವಿಡಿಯೊವೊಂದನ್ನು ಸೃಷ್ಟಿಸಿ ಹರಿಯಬಿಟ್ಟಿತ್ತು. ಅದರಲ್ಲಿ ಸಚಿನ್ ಧ್ವನಿಯನ್ನು ಯಥಾವತ್ತಾಗಿ ಬಳಸಲಾಗಿತ್ತು. ಇದರಿಂದಾಗಿ, 'ಭಾರತರತ್ನ' ಸಚಿನ್ ಜೂಜಾಟಕ್ಕೆ ಪ್ರಚಾರ ನೀಡುತ್ತಿರುವುದು ಎಷ್ಟು ಸರಿ ಎಂದು ಹಲವರು ಅಸಮಾಧಾನ ವ್ಯಕ್ತಪಡಿಸಿದ್ದರು.

ಇದೆಲ್ಲದರ ನಂತರ ಸ್ವತಃ ಸಚಿನ್ ಅವರೇ, 'ನನ್ನ ಹೆಸರಿನಲ್ಲಿ ಓಡಾಡುತ್ತಿರುವ ವಿಡಿಯೊ ಸುಳ್ಳು. ನಾನು ಗೇಮಿಂಗ್ ಆ್ಯಪ್ ಪರ ಪ್ರಚಾರ ಮಾಡಿಲ್ಲ. ತಂತ್ರಜ್ಞಾನದ ದುರ್ಬಳಕೆ ತಡೆಯಬೇಕು' ಎಂದು ವಿಡಿಯೊ ಸಂದೇಶ ಹಾಕಿದ್ದರು. ಮುಂಬೈ ಸೈಬರ್ ಪೊಲೀಸರು ಸದ್ಯ ಆ ಗೇಮಿಂಗ್ ಕಂಪನಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಕೆಲವು ಘಟನೆಗಳನ್ನು ಧರ್ಮ ಮತ್ತು ರಾಜಕಾರಣಕ್ಕೆ ತಳಕು ಹಾಕಲು ಕೂಡ ಈ ಫೇಕ್ ಸುದ್ದಿಗಳು ಸೃಷ್ಟಿ ಆಗುತ್ತಿವೆ. ಟೆನಿಸ್ ತಾರೆ ಸಾನಿಯಾ ಮಿರ್ಜಾ ಮತ್ತು ಶೋಯೆಬ್ ಮಲಿಕ್ ಅವರ ದಾಂಪತ್ಯಕ್ಕೆ ಸಂಬಂಧಿಸಿದ ಪ್ರಕರಣ ಇದಕ್ಕೊಂದು ಉದಾಹರಣೆ. ಮಲಿಕ್ ಅವರು ಇತ್ತೀಚೆಗೆ ಪಾಕಿಸ್ತಾನದ ನಟಿಯೊಬ್ಬರನ್ನು ಮದುವೆಯಾದಾಗಲೂ ಸಮಾಜದ ಒಂದು ವರ್ಗವು ಸಾನಿಯಾ ಅವರ ಮೇಲೆ ಮುಗಿಬಿದ್ದಿತ್ತು. ಪ್ರಕರಣವನ್ನು ಮುಂದಿಟ್ಟು ಧರ್ಮ ಮತ್ತು ದೇಶಗಳ ನಡುವೆ ದ್ವೇಷಭಾವ ಬಿತ್ತುವ ಕೆಲಸ ನಡೆಯಿತು. ಈ ಸಂದರ್ಭದಲ್ಲಿ ಸಾನಿಯಾ ಅವರ ಕುಟುಂಬವು, 'ಸಾನಿಯಾ ಯಾವಾಗಲೂ ತಮ್ಮ ವೈಯಕ್ತಿಕ ಜೀವನವನ್ನು ಸಾರ್ವಜನಿಕರ ದೃಷ್ಟಿಯಿಂದ ದೂರವಿಟ್ಟಿದ್ದಾರೆ. ಆದರೂ ಶೋಯೆಬ್ ಮತ್ತು ಸಾನಿಯಾ ಕೆಲ ತಿಂಗಳ ಹಿಂದೆ ವಿಚ್ಛೇದನ ಪಡೆದಿರುವುದನ್ನು ಹಂಚಿಕೊಳ್ಳುವ ಅವಶ್ಯಕತೆ ಉದ್ಭವಿಸಿದೆ. ಶೋಯೆಬ್ ಅವರ ಹೊಸ ಜೀವನಕ್ಕೆ ಸಾನಿಯಾ ಶುಭ ಹಾರೈಸುತ್ತಾರೆ' ಎಂದು ಹೇಳಿಕೆ ನೀಡಿತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಂದು ಅತಿರೇಕವೂ ನಡೆಯಿತು. ಸಾನಿಯಾ ಅವರು ಎರಡನೇ ಮದುವೆ ಆಗಿದ್ದಾರೆ, ಅದೂ ಭಾರತದ ಕ್ರಿಕೆಟ್ ಆಟಗಾರನೊಂದಿಗೆ ಎಂಬ ಸುಳ್ಳು ಚಿತ್ರಗಳನ್ನು ಸಾಮಾಜಿಕ ಜಾಲತಾಣದಲ್ಲಿ ಕಿಡಿಗೇಡಿಗಳು ಹಂಚಿದರು. ಕ್ರೀಡಾಪಟುಗಳು, ಸಿನಿತಾರೆಯರು, ರಾಜಕಾರಣಿಗಳು ಸಾರ್ವಜನಿಕ ಜೀವನದಲ್ಲಿದ್ದಾರೆ ನಿಜ. ಆದರೆ, ಅವರಿಗೂ ವೈಯಕ್ತಿಕ ಬದುಕು ಎಂಬುದು ಇದೆಯಲ್ಲವೇ? ಎಲ್ಲವನ್ನೂ ಹೊರಗೆಳೆಯುವ ಹುಚ್ಚು ಮತ್ತು ಇಲ್ಲಸಲ್ಲದ್ದನ್ನೆಲ್ಲ ಹರಿಯಬಿಡುವ ಪ್ರಯತ್ನಗಳು ಸಾಮಾಜಿಕ ಜಾಲತಾಣಗಳಲ್ಲಿ ನಡೆಯುತ್ತಿವೆ. ಕೆಲವು ವರ್ಷಗಳ ಹಿಂದೆ ವಿರಾಟ್ ಕೊಹ್ಲಿ ಮತ್ತು ಮಹೇಂದ್ರ ಸಿಂಗ್ ಧೋನಿಯವರ ಕುಟುಂಬಗಳ ಬಗ್ಗೆಯೂ ಅವಹೇಳನಕಾರಿ ಸಂದೇಶಗಳು ಹರಿದಾಡಿದ್ದವು.



ಹೋದ ವರ್ಷದ ಏಕದಿನ ವಿಶ್ವಕಪ್ ಟೂರ್ನಿಯ ಯಶಸ್ವಿ ಬೌಲರ್ ಮೊಹಮ್ಮದ್ ಶಮಿ ಅವರು ಪಂದ್ಯವೊಂದರಲ್ಲಿ ವಿಕೆಟ್ ಪಡೆದ ನಂತರ ಮೊಣಕಾಲೂರಿ ನೆಲಕ್ಕೆ ಕುಳಿತಿದ್ದನ್ನು ನಾನಾ ಬಗೆಯಲ್ಲಿ ವಿಶ್ಲೇಷಿಸಲಾಯಿತು. ಆ ಕುರಿತು ಶಮಿ ಹಲವು ಟಿ.ವಿ. ಕಾರ್ಯಕ್ರಮಗಳಲ್ಲಿ ಸ್ಪಷ್ಟನೆ ನೀಡಿದ್ದಾರೆ.

ಇಲ್ಲಿ ಇನ್ನೊಂದು ಆಯಾಮವೂ ಇದೆ. ಬರೀ ಟೀಕೆ ಮತ್ತು ಫೇಕ್‌ಗಳಷ್ಟೇ ಅಲ್ಲ, ಯಾವುದೇ ಆಟಗಾರ ಯಶಸ್ಸು ಗಳಿಸಿದಾಗ ವಿಪರೀತ ಹೊಗಳಿ ಹೊನ್ನಶೂಲಕ್ಕೆ ಏರಿಸುವುದೂ ನಡೆಯುತ್ತಿದೆ. ಈಚೆಗೆ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಯಶಸ್ವಿ ಜೈಸ್ವಾಲ್ ದ್ವಿಶತಕ ಹೊಡೆದಾಗ ಹಲವು ಮಾಜಿ ಕ್ರಿಕೆಟಿಗರೂ ಸೇರಿದಂತೆ ಜನ ಹೊಗಳಿಕೆಯ ಮಹಾಪೂರವನ್ನೇ ಹರಿಸಿದರು. ಈ ಸಂದರ್ಭದಲ್ಲಿ ಮಾಜಿ ಆಟಗಾರ ಗೌತಮ್ ಗಂಭೀರ್ ಅವರು, 'ಜೈಸ್ವಾಲ್ ಅವರಿಗೆ ಆಡಲು ಬಿಡಿ. ಈಗಲೇ ಅವರನ್ನು ಹೊಗಳಿ ಅಟ್ಟಕ್ಕೇರಿಸಿ, ಕೆಲವು ದಿನಗಳ ನಂತರ ಯಾವುದೋ ಒಂದೆರಡು ಪಂದ್ಯಗಳಲ್ಲಿ ವಿಫಲರಾದಾಗ ನೆಲಕ್ಕೆ ಒಗೆಯಬೇಡಿ' ಎಂದು ಮನವಿ ಮಾಡಿದ್ದರು.

ಹಾಗಿದ್ದರೆ, ಇಂತಹ ಪರಿಸ್ಥಿತಿಯನ್ನು ಆಟಗಾರರು ಮೀರಿ ನಿಲ್ಲುವುದು ಹೇಗೆ ಎಂಬ ಪ್ರಶ್ನೆ ಈಗ ಉದ್ಭವವಾಗಿದೆ. ಇದಕ್ಕೆ ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ ಉತ್ತಮ ಉದಾಹರಣೆಯಾಗಬಲ್ಲರು. 2021ರಲ್ಲಿ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅವರು ಚಿನ್ನ ಗೆದ್ದಾಗ ಇಂತಹದೇ ಸನ್ನಿವೇಶ ಸೃಷ್ಟಿಯಾಗಿತ್ತು. ಶ್ಲಾಘನೆಗಳ ಮಹಾಪೂರವೇ ಹರಿಯಿತು. ಅವರ ಕುರಿತ ಬಯೋಪಿಕ್ ಬರಲಿದೆ ಎಂಬ ಊಹಾಪೋಹವೂ ಹರಡಿತು. ಆದರೆ ಅವರು ತಮ್ಮ ಬಗ್ಗೆ ಯಾವುದೇ ಚಿತ್ರ ಬರುತ್ತಿಲ್ಲ, ತಾವಿನ್ನೂ ಸಾಧಿಸುವುದು ಅಪಾರವಿದೆ ಎಂದು ಉತ್ತರ ಕೊಟ್ಟರು. ಮದುವೆ, ಗರ್ಲ್‌ಫ್ರೆಂಡ್‌ನಂತಹ ಸಂಗತಿಗಳಿಗೆ ಸಂಬಂಧಿಸಿದ ಸಂದೇಶಗಳನ್ನು ನಿರ್ಲಕ್ಷಿಸಿ ವಿವೇಕ ಮೆರೆದರು. ಹೋದ ವರ್ಷ ವಿಶ್ವ ಚಾಂಪಿಯನ್ ಆದರು. ಡೈಮಂಡ್ ಲೀಗ್ ಕೂಟಗಳಲ್ಲಿ ಪದಕ ಜಯಿಸಿದರು. ಇದೇ ವರ್ಷ ಬರಲಿರುವ ಒಲಿಂಪಿಕ್ ಕೂಟದಲ್ಲಿ ಸ್ಪರ್ಧಿಸಲು ಭರದ ಸಿದ್ಧತೆ ನಡೆಸಿದ್ದಾರೆ.

ಆದರೆ ಎಲ್ಲರಿಗೂ ನೀರಜ್ ಅವರಷ್ಟೇ ಗಟ್ಟಿ ಮನೋಬಲ ಇರುವುದು ಕಷ್ಟ. ಇವತ್ತಿನ ಕ್ರೀಡಾರಂಗದಲ್ಲಿ 16ರಿಂದ 25 ವರ್ಷದೊಳಗಿನ ಯುವಪ್ರತಿಭೆಗಳು ಹೆಚ್ಚಿನ ಸಂಖ್ಯೆಯಲ್ಲಿ ಯಶಸ್ಸು ಗಳಿಸುತ್ತಿದ್ದಾರೆ. ಕೋಟಿ ಕೋಟಿ ಹಣವನ್ನೂ ಗಳಿಸುತ್ತಿದ್ದಾರೆ. ಯಶಸ್ಸು ಮತ್ತು ವೈಫಲ್ಯಗಳನ್ನು ಸಮನಾಗಿ ನಿಭಾಯಿಸುವ ಪರಿಪಕ್ವತೆಯನ್ನು ಈ ವಯೋವರ್ಗದಲ್ಲಿ ನಿರೀಕ್ಷಿಸುವುದು ಕಷ್ಟ. ಆದ್ದರಿಂದ ಈ ದಿಸೆಯಲ್ಲಿಯೂ ಆಟಗಾರರಿಗೆ ತರಬೇತಿ ಮತ್ತು ಸಾಮಾಜಿಕ ಜಾಲತಾಣಗಳಿಂದ ಎದುರಾಗುವ ಪಿಡುಗುಗಳನ್ನು ಎದುರಿಸುವ ವಿಧಾನವನ್ನು ಕಲಿಸಿಕೊಡುವ ಹೊಣೆ ಆಯಾ ಕ್ರೀಡಾ ಸಂಘಟನೆಗಳದ್ದೇ ಆಗಿದೆಯಲ್ಲವೇ?

ಚುರುಮುರಿ



ರತ್ನ ಸಂವತ್ಸರ

• ಸುಮಂಗಲಾ

ಬೆಕ್ಕಣ್ಣ ಲ್ಯಾಪ್‌ಟಾಪಿನಲ್ಲಿ ಹತ್ತಾರು ಜಾಲತಾಣಗಳನ್ನು ತೆರೆದಿಟ್ಟುಕೊಂಡು ಬಲು ಗಂಭೀರವಾಗಿ ಅಧ್ಯಯನ ಮಾಡುತ್ತ ಕೂತಿತ್ತು. 'ಏನಲೇ... ಯಾವುದಾದರೂ ಕಾಂಪಿಟಿಟಿವ್ ಎಕ್ಸಾಂಗೆ ತಯಾರಿ ನಡಸೀಯೇನು?' ಎಂದೆ ಅಚ್ಚರಿಯಿಂದ.

'ಅಯ್ಯೋ... ಇದ್ ಎಕ್ಸಾಂಗಿಂತ ಭಾರೀ ಕಷ್ಟದ ವಿಷ್ಯ. ಈ ವರ್ಷ ರತ್ನ ಸಂವತ್ಸರ ಅಂತ ಗೊತ್ತೈತಿಲ್ಲೋ? ಮೋದಿಮಾಮಾರು ಐದು ಮಂದಿಗೆ ಭಾರತರತ್ನ ಕೊಟ್ಟಾರೆ. ಚುನಾವಣೆ ಪ್ರಕಟಣೆ ಆಗೋದ್ರೊಳಗೆ ಇನ್ನಾ ಒಬ್ಬಿಬ್ಬರಿಗೆ ಕೊಡಬೌದೇನೋ ಅಂತ ಅಧ್ಯಯನ ಮಾಡಿ, ಪಟ್ಟಿ ಕಳಿಸೂಣು ಅಂತ' ಎಂದು ಮುಗುಮ್ಮಾಗಿ ಹೇಳಿತು.

'ಭಪ್ಪರೆ... ಮಗನೆ...!'

'ರತ್ನದಂಥ ಮಂದೀನ ಹುಡುಕಿ ಹುಡುಕೀ ಹತ್ತು ವರ್ಷದಾಗೆ ಒಟ್ಟು ಹನ್ನೆರಡು ರತ್ನ ಕೊಟ್ಟಾರೆ ಮೋದಿಮಾಮ' ಎಂದು ಕೊಂಡಾಡಿತು.

'ಮಂಗ್ಯಾನಂಥವನೇ... ಪ್ರಶಸ್ತಿ ಮಂಡಳಿ ಇರತೈತಿ, ಅವರು ಶಿಫಾರಸು ಮಾಡತಾರೆ' ಎಂದೆ.

'ಯಾರು ಪ್ರಧಾನಿಯಾಗಿದ್ದಾಗ ಕೊಟ್ಟರು ಅನ್ನೂದೇ ಕೊನೆಗೂ ಮುಖ್ಯ ಆಗೂದು'.

'ಹೋಗಲಿಬಿಡಲೇ... ನನಗೆ ನಿನಗೆ ಇದರಿಂದ ಏನು? ನಮ್ಮ ದೇಶದ ಡಿಜಿಟಲ್ ಕ್ರಿಯೇಟಿವ್ ಎಕಾನಮಿ ಬಗ್ಗೆ ಸೃಜನಶೀಲ ಬರವಣಿಗೆ ಮಾಡೋವ್ರಿಗೆ ರಾಷ್ಟ್ರೀಯ ಪ್ರಶಸ್ತಿ ಕೊಡತಾರಂತೆ. ಒಟ್ ಇಪ್ಪತ್ತು ವಿಭಾಗಗಳು ಅದಾವು. ನೀ ಒಂದಾದರೂ ಪ್ರಶಸ್ತಿಗೆ ಅರ್ಜಿ ಹಾಕಿ, ಪ್ರಯತ್ನ ಮಾಡು' ಎಂದೆ.

ಬೆಕ್ಕಣ್ಣ ಲಗುಬಗೆಯಿಂದ ಜಾಲತಾಣ ತೆರೆದು, ನೋಡತೊಡಗಿತು.

'ಬೆಸ್ಟ್ ಸ್ಟೋರಿಟೆಲ್ಲರ್ ಅವಾರ್ಡ್- ಇದು ಡಿಜಿಟಲ್ ಮೀಡಿಯಾಗಳಲ್ಲಿ ಕಟ್ಟುಕಥೆ ಹರಡೋವ್ರಿಗೇ ಸಿಗಬೌದು, ನಮಗೆಲ್ಲ ಸಾಧ್ಯವಿಲ್ಲ. ಮನರಂಜನಾ ಮೌಲ್ಯ ಮತ್ತು ಸಾಮಾಜಿಕ ಸಂದೇಶ ಎರಡನ್ನೂ ನೀಡೋ ಸೃಜನಶೀಲ ರಚನಾಕಾರರಿಗೆ ಪ್ರಶಸ್ತಿ... ನೀವು ಚುರುಮುರಿ ಬರೆಯೋವ್ರೆಲ್ಲ ಇದಕ್ಕೆ ಅರ್ಜಿ ಹಾಕಬೌದು! ಆದರೆ ಇದಕ್ಕೂ ಕೆಲವು ಟಿ.ವಿ. ನಿರೂಪಕರಿಂದ ಭಯಂಕರ ಪೈಪೋಟಿ ಇರತೈತಿ' ಬೆಕ್ಕಣ್ಣ ಒಂದೊಂದೇ ಪ್ರಶಸ್ತಿ ವಿಭಾಗಗಳನ್ನು ನೋಡುತ್ತ, 'ಇದು ನಮಗಲ್ಲೇಳು' ಎನ್ನುತ್ತ ಕೊನೆಗೆ ಹ್ಯಾಪುಮೋರೆ ಮಾಡಿತು!

ಸಂಗತ

ಸರಣಿ ಪರೀಕ್ಷೆ: ಶಾಲೆಯ ಹೆಗ್ಗಳಿಕೆಯಲ್ಲ

ಪರೀಕ್ಷಾ ಕ್ರಮದ ಬಗ್ಗೆ ಅಭ್ಯಾಸ ಮಾಡಿಸಲು ನಾಲ್ಕಾರು ಪರೀಕ್ಷೆಗಳನ್ನು ನಡೆಸಿದರೆ ಮಗುವಿನ ದೇಹ ಮತ್ತು ಮನಸ್ಸು ಎರಡೂ ದಣಿದು ಹೋಗುತ್ತವೆ

• ಸದಾಶಿವ್ ಸೊರಟೂರು

ಜಿಲ್ಲಾ ಹಂತದ್ದೊ, ರಾಜ್ಯ ಮಟ್ಟದ್ದೊ ಆಟದ ಪಂದ್ಯಾವಳಿಗೆ ಇನ್ನೊಂದು ವಾರ ಇದೆ ಅನ್ನುವಾಗ, ದೈಹಿಕ ಶಿಕ್ಷಣ ಶಿಕ್ಷಕರು ನಮ್ಮ ಕಠಿಣ ಅಭ್ಯಾಸವನ್ನು ನಿಲ್ಲಿಸುತ್ತಿದ್ದರು. ಆ ಒಂದು ವಾರ ಬರೀ ಲಘು ದೈಹಿಕ ಚಟುವಟಿಕೆಗಳು. ಒತ್ತಡ ನಿವಾರಿಸುವ ದಿಸೆಯಲ್ಲಿ ನಿರಾಳ ಮಾತುಕತೆ. ಆಟದ ಕುರಿತಾಗಿ ಸಕಾರಾತ್ಮಕ ವಿಚಾರಗಳನ್ನು ಚರ್ಚಿಸುತ್ತಿದ್ದರು. ಕಠಿಣ ಅಭ್ಯಾಸ ಯಾಕೆ ಬೇಡ ಎಂದು ಕೇಳಿದರೆ 'ಆಟ ಆಡುತ್ತಾ ಏನಾದರೂ ಗಾಯಗಳಾದರೆ ಪಂದ್ಯಾವಳಿಗೆ ದೊಡ್ಡ ಹೊಡೆತ ಬೀಳುತ್ತದೆ. ವಿಶ್ರಾಂತಿ ಇಲ್ಲದ ಅಭ್ಯಾಸ ಸುಸ್ತು ಮಾಡುತ್ತದೆ. ಅಲ್ಲದೆ ಒತ್ತಡವನ್ನೂ ತರುತ್ತದೆ' ಎನ್ನುತ್ತಿದ್ದರು. ಅವರ ಈ ಯೋಜನೆ ಕೆಲಸ ಮಾಡುತ್ತಿತ್ತು. ನಾವು ಬಹಳ ಆತ್ಮವಿಶ್ವಾಸದಲ್ಲೇ ಆಡಿ ಗೆಲ್ಲುತ್ತಿದ್ದೆವು.

ನಮ್ಮ ಪಕ್ಕದ ಮನೆಯಲ್ಲಿ ಹತ್ತನೇ ತರಗತಿ ಓದುತ್ತಿರುವ ಮಗುವಿನ ಪೋಷಕರು ಮಗನ ಸರಣಿ ಪೂರ್ವಸಿದ್ಧತಾ ಪರೀಕ್ಷೆಗಳ ಬಗ್ಗೆ ಅಲವತ್ತುಕೊಂಡರು. ಮಗುವನ್ನು ಮುಖ್ಯ ಪರೀಕ್ಷೆಗೆ ಸಜ್ಜಾಗಿಸಲು ಎಷ್ಟು ಪೂರ್ವಸಿದ್ಧತಾ ಪರೀಕ್ಷೆಗಳನ್ನು ಕೊಡಬಹುದು? ಒಂದು ಅಥವಾ ಎರಡು ಸಾಕಾಗುತ್ತದೆ. ಆದರೆ ಅವುಗಳ ಸಂಖ್ಯೆ ನಾಲ್ಕೋ ಐದೋ ಆದರೆ ಏನಾಗಬಹುದು?

'ಒಂದು ತಿಂಗಳಿನಿಂದ ದಿನಾಲೂ ಪರೀಕ್ಷೆ ಬರೆದೂ ಬರೆದೂ ಸಾಕಾಗಿದೆ. ಇವತ್ತು ರಾತ್ರಿ ಓದು, ನಾಳೆ ಹಗಲು ಬರೆ... ಎರಡು ಸಬ್ಜೆಕ್ಟ್‌ಗಳಲ್ಲಿ ನಾನು ಸ್ವಲ್ಪ ವೀಕು. ಅದರ ಕಡೆ ಹೆಚ್ಚು ಗಮನಹರಿಸುವುದಕ್ಕೇ ಆಗುತ್ತಿಲ್ಲ. ಪರೀಕ್ಷೆ ಎಂದರೆ ವಾಕರಿಕೆ ಬಂದಂತೆ ಆಗುತ್ತಿದೆ' ಅಂದನಂತೆ ಅವರ ಮಗ. ಹೆಚ್ಚು ಪೂರ್ವಸಿದ್ಧತಾ ಪರೀಕ್ಷೆಗಳು ಅಂದರೆ ಒಳ್ಳೆಯದು, ಪರಿಣಾಮಕಾರಿ ಅಂದು ಕೊಂಡಿದ್ದ ಅವರ ಪೋಷಕರಿಗೆ ಗಾಬರಿಯಾಗಿದೆ.


ಮುಖ್ಯ ಪರೀಕ್ಷೆ ಬರೆಯುವ ಮುಂಚೆಯೇ ಆ ಹುಡುಗ ಅಂಕಣದಿಂದ ನಿರ್ಗಮಿಸಲು ಯೋಚಿಸಿದನೇ? ಪರೀಕ್ಷೆ ಬಗ್ಗೆ ಇರುವ ಕುತೂಹಲ, ಆಸಕ್ತಿ, ಸಣ್ಣ ಆರೋಗ್ಯಯುತ ಭಯ ಇಲ್ಲದೇಹೋದರೆ ಮುಖ್ಯ ಪರೀಕ್ಷೆ ಬೇರೆಯದೇ ಬಗೆಯ ಫಲಿತಾಂಶ ಕೊಡಬಹುದು. ನಷ್ಟ ಮಾತ್ರ ಮಗುವಿಗೆ.

ಪೂರ್ವಸಿದ್ಧತಾ ಪರೀಕ್ಷೆಗಳಿಂದ ಮಗುವಿನ ಮುಖ್ಯ ಪರೀಕ್ಷೆಗೆ ಮಾತ್ರ ಅನುಕೂಲವಾದರೆ ಸಾಕು. ಅದು ಅವರನ್ನು ಕಾಡಿಸುವಂತೆ ಇರಬಾರದು. ಮಕ್ಕಳು ಸುಸ್ತಾಗುವಂತೆ ಮಾಡಬಾರದು. ಸರಣಿ ಪರೀಕ್ಷೆಗಳನ್ನು ನಡೆಸುವುದು ಒಂದು ಶಾಲೆಯ ಹೆಗ್ಗಳಿಕೆಯಲ್ಲ.

ಪರೀಕ್ಷಾ ದಿನದ ಸಿದ್ಧತೆಗಳೇನು, ಮೂರು ಗಂಟೆಯ ಆ ಸಮಯವನ್ನು ಹೇಗೆ ಹೊಂದಿಸಿಕೊಳ್ಳಬೇಕು, ಯಾವ ಪ್ರಶ್ನೆಗೆ ಎಷ್ಟು ಸಮಯ ಬಳಸಿಕೊಳ್ಳಬೇಕು, ಉತ್ತರ ಬರೆಯುವ ಪರಿ ಹೇಗೆ, ಅಂಕಗಳನ್ನು ಪಡೆಯುವ ತಂತ್ರ ಯಾವುದು, ಪರೀಕ್ಷಾ ಕೊಠಡಿಯಲ್ಲಿ ಶಿಸ್ತು ಹಾಗೂ ಗಾಂಭೀರ್ಯವನ್ನು ಹೇಗೆ ಕಂಡುಕೊಳ್ಳಬೇಕು ಎಂಬಂತಹ ಸಂಗತಿಗಳ ಬಗ್ಗೆ ಮಕ್ಕಳಿಗೆ ಅಭ್ಯಾಸ ಮಾಡಿಸಲು ಪೂರ್ವಸಿದ್ಧತಾ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಈ ಕ್ರಮ ತಿಳಿಸಲು ಒಂದು ಅಥವಾ ಎರಡು ಸರಣಿ ಪರೀಕ್ಷೆಗಳು ಸಾಕು. ನಾಲ್ಕಾರು ಪರೀಕ್ಷೆಗಳನ್ನು ನಡೆಸಿ ಒಂದು ತಿಂಗಳು ಮಗುವಿನ ಸಮಯವನ್ನೂ ಶ್ರಮವನ್ನೂ ತಿಂದುಹಾಕಬಾರದು. ಅದರಿಂದ ದೇಹ ಮತ್ತು ಮನಸ್ಸು ಎರಡೂ ದಣಿದು ಹೋಗುತ್ತವೆ.

ಮಗು ಒಂದೆರಡು ಪೂರ್ವಸಿದ್ಧತಾ ಪರೀಕ್ಷೆಗಳನ್ನು ತೀರಾ ಗಂಭೀರವಾಗಿ ತೆಗೆದುಕೊಳ್ಳಬಹುದು. ಅಭ್ಯಾಸ ಮಾಡಬಹುದು. ನಂತರವೂ ಮತ್ತೊಂದು, ಇನ್ನೊಂದು ಅಂದರೆ ಮಗುವಿನ ಮನಸ್ಸು ಒದ್ದಾಡುತ್ತದೆ. ಅಭ್ಯಾಸ ಕೈಬಿಡುತ್ತದೆ. ಏನೋ ಒಂದು ಎಂದು ಬರೆದು ಬರುತ್ತದೆ. ಯಾವುದು ಕೂಡ ಅತಿ ಆಗಬಾರದು!

ನಾಲ್ಕು ಪರೀಕ್ಷೆಗಳನ್ನು ಬರೆಯುವುದರಿಂದ ಕಲಿತದ್ದು ಹೆಚ್ಚು ಮನನ ಆಗಬಹುದು. ಹೀಗಾಗಿ, ಅದಾಗಲೇ ಎಲ್ಲವನ್ನೂ ಕಲಿತ ಮಕ್ಕಳಿಗೆ ಅದು ಪುನರಾವರ್ತನೆಯಂತೆ ಭಾಸವಾಗಬಹುದು. ಆದರೆ ಇನ್ನೂ ಕಲಿಯುತ್ತಿರುವ ನಿಧಾನಗತಿಯ ಮಕ್ಕಳಿಗೆ ಅಷ್ಟೊಂದು ಅನುಕೂಲವಾಗದು. ಅವರಿಗೆ ಕಲಿಯಲು ಬಹಳಷ್ಟು ಸಮಯ ಬೇಕು. ಪರೀಕ್ಷೆಗಳ ಸಂಖ್ಯೆ ಹೆಚ್ಚಾದರೆ ಆ ಸಮಯದಲ್ಲಿ ಮಗು ನಿರಂತರವಾಗಿ ಪರೀಕ್ಷೆ ಬರೆಯುತ್ತಾ ಕೂರಬೇಕಾಗುತ್ತದೆ.



ತಾನು ಏನು ಕಲಿಯಬೇಕು, ತುಂಬಾ ಹಿಂದಿರುವ ವಿಷಯದಲ್ಲಿ ಹೇಗೆ ಸುಧಾರಿಸಿಕೊಳ್ಳಬೇಕು ಎಂದು ಯೋಜಿಸುವುದಕ್ಕೆ ಸಮಯ ಮತ್ತು ಸಂಬಂಧಿಸಿದ ಶಿಕ್ಷಕರು ಇಬ್ಬರೂ ಪೂರ್ಣವಾಗಿ ಲಭ್ಯವಾಗುವುದಿಲ್ಲ. ಅಲ್ಲದೆ ನಾಲ್ಕು ಪೂರ್ವಸಿದ್ಧತಾ ಪರೀಕ್ಷೆಗಳನ್ನು ಬರೆದ ಮಾತ್ರಕ್ಕೆ ಮಗು ಸಂಪೂರ್ಣವಾಗಿ ಶಕ್ತವಾಗುವುದಿಲ್ಲ. ಸತತ ಅಭ್ಯಾಸ ಮತ್ತು ಪುನರಾವರ್ತಿತ ಕಲಿಕೆಗೆ ಅವಕಾಶ ಇರಬೇಕು.

ಹತ್ತನೇ ತರಗತಿಯ ಮಕ್ಕಳು ಎದುರಿಸುವ ಇನ್ನೊಂದು ಸಮಸ್ಯೆ ಎಂದರೆ, ಮೂರು ತಿಂಗಳ ಮುಂಚೆಯೇ ಅವರ ಸಿಲೆಬಸ್ ಬೋಧನೆ ಮುಗಿದು ಹೋಗಿರುತ್ತದೆ. ಬೋಧನೆಯನ್ನು ಬಹಳಷ್ಟು ವೇಗವಾಗಿ ಮಾಡಲಾಗುತ್ತದೆ. ಶಿಕ್ಷಕರಿಗೆ ಇದು ಅನಿವಾರ್ಯ. ಏಕೆಂದರೆ ಸರಣಿ ಪರೀಕ್ಷೆಗೆ ಸಮಯ ಕೊಡಬೇಕು ಮತ್ತು ಅದಕ್ಕೆ ತಯಾರಿ ಮಾಡಿಕೊಳ್ಳಬೇಕು. ಬೋಧನೆಯ ಗತಿ ವೇಗವಾಗುವುದರಿಂದ ಮಗು ಪಠ್ಯವನ್ನು ಆಳವಾಗಿ ಮತ್ತು ಪರಿಣಾಮಕಾರಿಯಾಗಿ ಕಲಿಯಲು ಸಾಧ್ಯವಾಗುವುದಿಲ್ಲ. ಬರೀ ಪರೀಕ್ಷಾ ಉದ್ದೇಶಕ್ಕಾಗಿ ವೇಗದಿಂದ ಕಲಿತು ಪರೀಕ್ಷೆ ಬರೆದು ಮರೆತುಬಿಡುವಂತಹ ಕಲಿಕೆಯಾಗಿರುತ್ತದೆ ಅದು. ಶಿಕ್ಷಣ ಅಂದರೆ ಬರೀ ಪರೀಕ್ಷೆಯಲ್ಲ, ಅದು ಬದುಕು ಎಂದು ಸದಾ ತುತ್ತೂರಿ ಊದುವ ನಾವು ಈ ಕ್ರಮವನ್ನು ಬಿಡಬೇಕು.

ಓದು-ಬರಹ-ಪರೀಕ್ಷೆಗಳು ಈ ಹೊತ್ತಿನಲ್ಲಿ ಮಗುವನ್ನು ಬಹಳಷ್ಟು ಹೈರಾಣಾಗಿಸುತ್ತಿವೆ. ಅವರ ಬಾಲ್ಯ, ಮುಗ್ಧತೆ, ಕುತೂಹಲ, ಕನಸು ಎಲ್ಲವೂ ನಮ್ಮ ಅತೀವ ಹೇರಿಕೆಯಿಂದ ಕಮರಿ ಹೋಗುತ್ತಿವೆ. ಮಕ್ಕಳಸ್ನೇಹಿ ಶಿಕ್ಷಣ ವ್ಯವಸ್ಥೆ, ಪರೀಕ್ಷಾ ವ್ಯವಸ್ಥೆ ಎಂದು ಬರುವುದೋ?!

ವಾಚಕರ ವಾಣಿ

ಸ್ವಾಮಿನಾಥನ್ ಶಿಫಾರಸು ಅನುಷ್ಠಾನಕ್ಕೆ ಬರಲಿ

ಹಸಿರುಕ್ರಾಂತಿಯ ಹರಿಕಾರ ಎಂ.ಎಸ್.ಸ್ವಾಮಿನಾಥನ್ ಅವರಿಗೆ ಕೇಂದ್ರ ಸರ್ಕಾರವು ಮರಣೋತ್ತರವಾಗಿ 'ಭಾರತರತ್ನ' ಪ್ರಶಸ್ತಿ ನೀಡಿ ಗೌರವಿಸಿರುವುದು ಸರಿಯಷ್ಟೆ. ಆದರೆ ರೈತ ಪರವಾದ ಸ್ವಾಮಿನಾಥನ್ ಅವರ ಆಶಯಗಳನ್ನು ಜಾರಿಗೊಳಿಸಲು ಸರ್ಕಾರ ವಿಫಲವಾಗಿರುವುದು ದುರದೃಷ್ಟಕರ. 'ರೈತ ಬಂಧುಗಳು ಸಂಕಷ್ಟಕ್ಕೆ ಈಡಾಗುವುದನ್ನು ತಪ್ಪಿಸಲು, ಕೈಗಾರಿಕಾ ವಲಯಕ್ಕೆ ಆದ್ಯತೆ ನೀಡಿದಂತೆ ಕೃಷಿ ವಲಯಕ್ಕೂ ಆದ್ಯತೆ ನೀಡಬೇಕು. ಈ ದಿಸೆಯಲ್ಲಿ, ಭೂಮಿ, ಕೃಷಿ ಪರಿಕರ, ಬಿತ್ತನೆ ಬೀಜ, ಗೊಬ್ಬರ, ಉಳುಮೆ ಎಲ್ಲಕ್ಕೂ ಹೂಡಿದ ಬಂಡವಾಳ ಹಾಗೂ ಪಟ್ಟ ಶ್ರಮ ಎಲ್ಲವನ್ನೂ ಪರಿಗಣಿಸಿ, ರೈತರಿಗೆ ಅವರ ಒಟ್ಟು ಹೂಡಿಕೆಯೊಂದಿಗೆ ಹೆಚ್ಚುವರಿಯಾಗಿ ಶೇ 50ರಷ್ಟು ಆದಾಯ ಬಂದರೆ ದೇಶದಲ್ಲಿ ಹಸಿರುಕ್ರಾಂತಿ ಆಗುತ್ತದೆ. ಆಗ ರೈತರು ಆತ್ಮಹತ್ಯೆಗೆ ಮುಂದಾಗುವುದಿಲ್ಲ ಮತ್ತು ಯುವಕರು ಕೃಷಿಯತ್ತ ಮುಖ ಮಾಡುತ್ತಾರೆ. ಇದರಿಂದ ದೇಶದ 140 ಕೋಟಿ ಜನರಿಗೆ ಅನ್ನವನ್ನು ನೀಡಲು ಸಾಧ್ಯವಾಗುತ್ತದೆ' ಎಂದು ಅವರು ಪ್ರತಿಪಾದಿಸಿದ್ದರು.

2014ರ ಚುನಾವಣೆ ಸಮಯದಲ್ಲಿ ಬಿಜೆಪಿಯು ಸ್ವಾಮಿನಾಥನ್ ಅವರ ಈ ಸಂಬಂಧದ ಶಿಫಾರಸುಗಳನ್ನು ಅನುಷ್ಠಾನಗೊಳಿಸುವುದಾಗಿ ಪ್ರಣಾಳಿಕೆಯಲ್ಲಿ ತಿಳಿಸಿತ್ತು. ಆದರೆ ಪಕ್ಷ ಅಧಿಕಾರಕ್ಕೆ ಬಂದು ಹತ್ತು ವರ್ಷಗಳಾದರೂ ಇದು ಸಾಧ್ಯವಾಗಿಲ್ಲ. ರಾಜ್ಯ ಸರ್ಕಾರವೂ ರೈತರ ವಿಷಯದಲ್ಲಿ ಇದಕ್ಕಿಂತ ಭಿನ್ನವಾಗೇನೂ ಇಲ್ಲ. ಇಂದು ರೈತನನ್ನು ದಿವಾಳಿ ಎಬ್ಬಿಸಿ, ಶ್ರೀಮಂತರಿಗೆ ಜಮೀನು ಮಾರುವಂತಹ ಸಂದರ್ಭ ಸೃಷ್ಟಿಸಲಾಗಿದೆ. ಇದರಿಂದ ರೈತನು ಕೂಲಿಕಾರ್ಮಿಕನಾಗಿ, ಆತನ ಮಗ ವಾಚ್‌ಮನ್ ಆಗಿ ಹಾಗೂ ಅವನ ಹೆಂಡತಿ ಮನೆಗೆಲಸದವಳಾಗಿ ದುಡಿಯುವಂತಹ ಸ್ಥಿತಿ ನಿರ್ಮಾಣವಾಗಿದೆ. ರೈತ ವಿರೋಧಿಯಾಗಿರುವ ಎರಡೂ ಸರ್ಕಾರಗಳು ತಕ್ಷಣ ತಮ್ಮ ನಡವಳಿಕೆಯನ್ನು ತಿದ್ದಿಕೊಂಡು, ರೈತ ಪರ ಕ್ರಮಗಳನ್ನು ಕೈಗೊಳ್ಳಬೇಕು.

ಬಲ್ಲೂರ್ ರವಿಕುಮಾರ್, ದಾವಣಗೆರೆ

ಹೀಗಿದೆ ವ್ಯತ್ಯಾಸ!

ಹಿಂದೆ...
ದೇಶಕ್ಕೋಸ್ಕರ
ಸಾಯಲು ತಯಾರಾಗಿದ್ದರು,
ಇಂದು...
'ದೇಶಕ್ಕೋಸ್ಕರ'
ಕೊಲ್ಲಲು
ತಯಾರಾಗಿದ್ದಾರೆ!

ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

ಪಠ್ಯದಲ್ಲಿ ಸಂಚಾರ ನಿಯಮ: ಸಮಂಜಸ ಕ್ರಮ

ಸಂಚಾರ ನಿಯಮಗಳ ಬಗೆಗಿನ ಜಾಗೃತಿಗೆ ಸಂಬಂಧಿಸಿದ ಪಾಠವನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಶಾಲಾ ಪಠ್ಯದಲ್ಲಿ ಸೇರಿಸುವ ಪ್ರಯತ್ನ ನಡೆದಿದೆ ಎಂದು ಬೆಂಗಳೂರು ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್.ಅನುಚೇತ್ ಅವರು ಹೇಳಿರುವುದು (ಪ್ರ.ವಾ., ಫೆ.11) ಅತ್ಯಂತ ಸಮಂಜಸವಾಗಿದೆ. ಸಂಚಾರ ನಿಯಂತ್ರಣವು ಮಕ್ಕಳಿಗೆ ಖಂಡಿತವಾಗಿಯೂ ಕಲಿಸಬೇಕಾದ ವಿಷಯವಾಗಿದೆ. ಇದು ಶಿಕ್ಷಣಕ್ಕೆ ಹೆಚ್ಚಿನ ಮೌಲ್ಯವನ್ನು ತಂದುಕೊಡುತ್ತದೆ ಮತ್ತು ಮಕ್ಕಳ ಮೂಲಕ ಪೋಷಕರು ಸಹ ಕಲಿಯಲು ಸಹಕಾರಿಯಾಗುತ್ತದೆ.

ಪೋಷಕರು ವಾಹನ ಚಲಾಯಿಸುವಾಗ ಸುರಕ್ಷಿತವಾಗಿ ಓಡಿಸಲು ಮತ್ತು ಎಲ್ಲಾ ನಿಯಮ, ನಿಬಂಧನೆಗಳನ್ನು ಅನುಸರಿಸಲು ಮಕ್ಕಳು ಒತ್ತಾಯಿಸಿದರೆ ಹೆಚ್ಚು ಪರಿಣಾಮಕಾರಿ ಆಗಬಹುದು ಹಾಗೂ ಇದು ಬಹಳಷ್ಟು ಅಪಘಾತಗಳನ್ನು ತಪ್ಪಿಸಲೂಬಹುದು. ಕೆಲವೊಮ್ಮೆ ಮಕ್ಕಳು ತುಂಬಾ ಪರಿಣಾಮಕಾರಿಯಾಗಿ ಹೇಳುವ ಚಾತುರ್ಯವನ್ನು ಹೊಂದಿರುತ್ತಾರೆ. ಇದರಿಂದ ಅವರು ಸ್ವಯಂ ಅನುಸರಿಸುವ ಮತ್ತು ಕಲಿಸುವ ಎರಡು ರೀತಿಯ ಪ್ರಯೋಜನಗಳಾಗುತ್ತವೆ. ಪಾಶ್ಚಿಮಾತ್ಯ ದೇಶಗಳಲ್ಲಿ ಇಂತಹ ಅನೇಕ ಕಲಿಕಾ ಕಾರ್ಯಕ್ರಮಗಳು ಯಶಸ್ವಿಯಾಗಿ ಉತ್ತಮ ಫಲಿತಾಂಶವನ್ನು ನೀಡಿದ ನಿದರ್ಶನಗಳಿವೆ.

ಕಡೂರು ಫಣಿಶಂಕರ್, ಬೆಂಗಳೂರು

'ಆಶಾ' ಗೌರವಧನ: ಗೊಂದಲವೇಕೆ?

ಹದಿನೈದು ವರ್ಷಗಳಿಂದಲೂ ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸೇವೆಯಲ್ಲಿ ಅಹರ್ನಿಶಿ ತೊಡಗಿಕೊಂಡಿರುವ ಆಶಾ ಕಾರ್ಯಕರ್ತೆಯರಿಗೆ ರಾಜ್ಯ ಸರ್ಕಾರವು 8 ವರ್ಷಗಳ ಹಿಂದೆ, ಆರ್.ಸಿ.ಎಚ್. ಪೋರ್ಟಲ್‌ಗೆ ಲಿಂಕ್ ಮಾಡಿ ಗೌರವಧನ ನೀಡುವ ಮಾದರಿಯನ್ನು ಜಾರಿಗೊಳಿಸಿದೆ. ಆಗಿನಿಂದಲೂ ತಾಂತ್ರಿಕ ಸಮಸ್ಯೆಗಳೂ ಸೇರಿ ಹಲವು ಕಾರಣಗಳಿಂದ ಕಾರ್ಯಕರ್ತೆಯರಿಗೆ ವೇತನ ಸರಿಯಾಗಿ ವಿತರಣೆಯಾಗದಿರುವುದು ವಿಪರ್ಯಾಸ. ಕೇಂದ್ರ ನಿಗದಿಗೊಳಿಸಿರುವ ಸುಮಾರು 40 ಸೇವೆಗಳಿಗೆ ಪ್ರತಿ ಕಾರ್ಯಕರ್ತೆಗೆ ಮಾಸಿಕ ₹ 7,000ದಷ್ಟು ಗೌರವಧನ ಸಿಗಬೇಕಿದ್ದರೂ ದಾಖಲೆಗಳ ಪ್ರಕಾರ 10 ಸಾವಿರಕ್ಕೂ ಹೆಚ್ಚು ಕಾರ್ಯಕರ್ತೆಯರು ಪೋರ್ಟಲ್ ಸಮಸ್ಯೆಯಿಂದಾಗಿಯೇ ದೊಡ್ಡ ಮೊತ್ತದ ನಷ್ಟಕ್ಕೆ ಒಳಗಾಗುತ್ತಿದ್ದಾರೆ. ಉಳಿದವರೂ ಮಾಸಿಕ ₹ 2000ದಿಂದ ₹ 5000ದ ತನಕ ನಷ್ಟ ಅನುಭವಿಸುತ್ತಿದ್ದಾರೆ.

ದೇಶದ ಇತರ ರಾಜ್ಯಗಳಲ್ಲಿ ಇಲ್ಲದ 'ಈ ಕೊಂಕಣ ಸುತ್ತಿ ಮೈಲಾರ ಸೇರುವ' ವೇತನ ಮಾದರಿಯನ್ನು ನಮ್ಮ ರಾಜ್ಯದಲ್ಲಿ ಅಳವಡಿಸಿ, ಬಡ ಕಾರ್ಯಕರ್ತೆಯರ ದುಡಿತಕ್ಕೆ ಹೊಡೆತ ನೀಡಲಾಗುತ್ತಿದೆ. ಆರೋಗ್ಯ ಇಲಾಖೆ ಇನ್ನಾದರೂ ಪೋರ್ಟಲ್‌ಗೆ ಲಿಂಕ್ ಮಾಡಿ ಪ್ರೋತ್ಸಾಹಧನ ನೀಡುವ ಮಾದರಿಯನ್ನು ತಕ್ಷಣವೇ ನಿಲ್ಲಿಸಿ, ಅವರ ಬ್ಯಾಂಕ್ ಖಾತೆಗೆ ಪ್ರತಿ ತಿಂಗಳು ನೇರವಾಗಿ ನಿಗದಿತ ಗೌರವಧನ ಹಾಕುವ ಪದ್ಧತಿ ಜಾರಿಗೊಳಿಸಬೇಕು.

ರೂಪ ಹಾಸನ, ಹಾಸನ

ಧರ್ಮಪ್ರಧಾನ ಚರ್ಚೆ: ಸಲ್ಲದ ನಡೆ

17ನೇ ಲೋಕಸಭೆಯ ಕೊನೆಯ ಅಧಿವೇಶನಕ್ಕೆ ತೆರೆ ಬೀಳುವ ಮುನ್ನ ನಡೆದ ಕಲಾಪದಲ್ಲಿ, ರಾಮ ಮಂದಿರ ನಿರ್ಮಾಣ, ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯು ಚರ್ಚಿತ ವಿಷಯಗಳಲ್ಲಿ ಮುಖ್ಯ ಎನಿಸಿಕೊಂಡಿರುವುದು ವರದಿಯಾಗಿದೆ (ಪ್ರ.ವಾ., ಫೆ. 11). ಕೊನೆಯ ಕಲಾಪವಾದ್ದರಿಂದ ಸರ್ಕಾರ ಈ ಐದು ವರ್ಷಗಳ ಅವಧಿಯಲ್ಲಿ ಕೈಗೊಂಡ ನಿರುದ್ಯೋಗ ನಿವಾರಣೆ, ಶಿಕ್ಷಣ ಸುಧಾರಣೆ, ಆರೋಗ್ಯ ನಿರ್ವಹಣೆ, ಒದಗಿಸಲಾದ ರಸ್ತೆ, ನೀರು, ಸೂರಿನಂತಹ ಅಭಿವೃದ್ಧಿ ಯೋಜನೆಗಳ ಜೊತೆಯಲ್ಲಿ ಸಮಾಜವನ್ನು ಮುನ್ನಡೆಸಿದ ಬಗ್ಗೆ ಚರ್ಚೆ ಮಾಡಬೇಕಾಗಿತ್ತು. ಆದರೆ, ಧರ್ಮದ ವಿಷಯವನ್ನೇ ಪ್ರಧಾನವಾಗಿ ಇಟ್ಟುಕೊಂಡು ಕಲಾಪ ಮುಗಿಸಿರುವುದು ಪ್ರಜಾಪ್ರಭುತ್ವಕ್ಕೆ ಶೋಭೆ ತರುವ ಸಂಗತಿಯಲ್ಲ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬರ ಪರಿಹಾರ ಯಾರ ಹೊಣೆ? 5

ರಾಜ್ಯದಲ್ಲಿ ಈ ಬಾರಿ ತಲೆದೋರಿದ್ದು ವರದಿ ಪ್ರಕಾರ ಭೀಕರ ಬರ

ರಾಜ್ಯದಲ್ಲಿ ಈ ಬಾರಿ ತಲೆದೋರಿದ ಬರವು 122 ವರ್ಷಗಳಲ್ಲೇ ಮೂರನೇ ಅತ್ಯಂತ ಭೀಕರ ಬರ ಎನಿಸಿಕೊಂಡಿದೆ. ಈ ಬರದಿಂದ ರಾಜ್ಯದಲ್ಲಿ ಆದ ಬೆಳೆ ನಷ್ಟವೂ ದೊಡ್ಡ ಮೌಲ್ಯದ್ದೇ ಆಗಿದೆ. ಬರ ಪರಿಹಾರ ಕಾರ್ಯಗಳಿಗೆ ಅಗತ್ಯವಿರುವ ಹಣದ ಮೊತ್ತವೂ ದೊಡ್ಡದೇ ಆಗಿದೆ. ಪರಿಹಾರ ಕಾರ್ಯಗಳಿಗಾಗಿ ನಿಯಮಗಳ ಪ್ರಕಾರವೇ ಕೇಂದ್ರದಿಂದ ನೆರವು ಕೋರಲಾಗಿದೆ. ಆದರೆ ಕೇಂದ್ರ ಸರ್ಕಾರ ಮಾತ್ರ ಕರ್ನಾಟಕಕ್ಕೆ ನೆರವು ಒದಗಿಸುತ್ತಿಲ್ಲ ಎನ್ನುತ್ತಿದೆ ರಾಜ್ಯ ಸರ್ಕಾರ

ಪ್ರಜಾವಾಣಿ ವಾರ್ತೆ

ರಾಜ್ಯದಲ್ಲಿ ಮುಂಗಾರು ಮಳೆ ಭಾರಿ ಪ್ರಮಾಣದಲ್ಲಿ ಕಡಿಮೆಯಾದ ಕಾರಣ ಹತ್ತಾರು ಸಾವಿರ ಕೋಟಿ ಮೌಲ್ಯದಷ್ಟು ಬೆಳೆ ನಷ್ಟವಾಗಿದೆ. ಇದರ ಜತೆಯಲ್ಲೇ ಮೇವಿನ ಕೊರತೆ ಮತ್ತು ಕುಡಿಯುವ ನೀರಿನ ಕೊರತೆ ಎದುರಾಗಿದೆ. ಬರ ನಿರ್ವಹಣೆ ಸಂದರ್ಭದಲ್ಲಿ ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ಮತ್ತು ಜನರಿಗೆ ಕುಡಿಯುವ ನೀರಿನ ಕೊರತೆ ಎದುರಾಗದಂತೆ ಎಚ್ಚರವಹಿಸುವುದು ರಾಜ್ಯ ಸರ್ಕಾರದ ಆದ್ಯ ಕರ್ತವ್ಯಗಳಲ್ಲಿ ಒಂದು. ಇದಕ್ಕಾಗಿ ರಾಜ್ಯ ಸರ್ಕಾರವು ತನ್ನ ಬಳಿ ಇರುವ ರಾಜ್ಯ ವಿಪತ್ತು ನಿರ್ವಹಣಾ ನಿಧಿಯಲ್ಲಿನ (ಎಸ್‌ಡಿಆರ್‌ಎಫ್) ಮೊತ್ತವನ್ನು ಬಳಸಬೇಕು. ಆ ಮೊತ್ತವು ಈ ಪರಿಹಾರ ಕಾರ್ಯಗಳಿಗೆ ಸಾಲದೇ ಇದ್ದರೆ, ಕೇಂದ್ರದ ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಿಂದ (ಎನ್‌ಡಿಆರ್‌ಎಫ್) ನೆರವು ಕೇಳಬಹುದು. ಹೀಗೆ ಬರದ ಪರಿಣಾಮವನ್ನು ಎದುರಿಸಲು ವಿವಿಧ ಪರಿಹಾರ ಕಾರ್ಯಗಳಿಗಾಗಿ ರಾಜ್ಯ ಸರ್ಕಾರವು ಕೇಂದ್ರದಿಂದ ಒಟ್ಟು ₹18,171 ಕೋಟಿಯಷ್ಟು ನೆರವನ್ನು ಕೋರಿದೆ. 'ನೆರವು ಕೋರಿ ಹಲವು ತಿಂಗಳುಗಳೇ ಕಳೆದಿವೆ. ಆದರೆ ನೆರವು ಮಾತ್ರ ದೊರೆತಿಲ್ಲ' ಎಂದು ರಾಜ್ಯ ಸರ್ಕಾರ ಹೇಳುತ್ತಿದೆ.

ರಾಜ್ಯದಲ್ಲಿ ಈ ಮುಂಗಾರು ಮತ್ತು ಹಿಂಗಾರಿನಲ್ಲಿ ತಲೆದೋರಿದ ಬರವು ಅತ್ಯಂತ ತೀವ್ರವಾದುದು ಎಂದು ರಾಜ್ಯ ಸರ್ಕಾರವು ಹವಾಮಾನ ಇಲಾಖೆಯ ದತ್ತಾಂಶಗಳನ್ನು ಮುಂದಿಡುತ್ತದೆ. ಹವಾಮಾನ ಇಲಾಖೆಯು ಮಳೆ ಸಂಬಂಧಿ ದತ್ತಾಂಶಗಳನ್ನು ಕಲೆಹಾಕಲು ಆರಂಭಿಸಿ 122 ವರ್ಷಗಳಾಗಿವೆ. ಈ ಮುಂಗಾರಿನಲ್ಲಿ ತಲೆದೋರಿದ ಬರವು ಆ 122 ವರ್ಷಗಳಲ್ಲೇ ಅತ್ಯಂತ ಕಡುಬರಗಳಲ್ಲಿ ಮೂರನೇ ಸಾಲಿನಲ್ಲಿ ನಿಲ್ಲುತ್ತದೆ ಎನ್ನುತ್ತದೆ ರಾಜ್ಯ ಸರ್ಕಾರದ ವರದಿ. ಬರದ ತೀವ್ರತೆಯನ್ನು ಇದು ತೋರಿಸುತ್ತದೆ. ಈ ಅವಧಿಯಲ್ಲಿ ಕೆಲವು ತಿಂಗಳಲ್ಲಿ ಉತ್ತಮ ಮಳೆಯಾಗಿದ್ದರೂ ಬಿತ್ತನೆ ಮತ್ತು ತೆನೆಕಟ್ಟುವ ಅವಧಿಯಲ್ಲಿ ಮಳೆ ತೀವ್ರ ಕೊರತೆಯಾದ ಕಾರಣ, ಬೆಳೆ ನಷ್ಟವಾಗಿದೆ ಎನ್ನುತ್ತದೆ ರಾಜ್ಯ ಸರ್ಕಾರದ ವರದಿ.


ರಾಜ್ಯದಲ್ಲಿ ಈ ಬಾರಿ ಬಿತ್ತನೆಯಾದ ಒಟ್ಟು ಜಮೀನಿನಲ್ಲಿ ಶೇ 50ಕ್ಕಿಂತಲೂ ಹೆಚ್ಚು ಬಿತ್ತನೆ ಪ್ರದೇಶದಲ್ಲಿ ಬೆಳೆ ನಷ್ಟವಾಗಿದೆ. ಕೇಂದ್ರ ಸರ್ಕಾರದ ನಿಯಮಗಳ ಪ್ರಕಾರ ನಿರೀಕ್ಷಿತ ಇಳುವರಿಯಲ್ಲಿ ಶೇ 33ರಷ್ಟು ಮತ್ತು ಅದಕ್ಕಿಂತಲೂ ಹೆಚ್ಚು ನಷ್ಟವಾದರೆ ಅದನ್ನು ಬೆಳೆ ನಷ್ಟ ಎಂದೇ ಪರಿಗಣಿಸಬೇಕು. ಈ ಪ್ರಕಾರ ರಾಜ್ಯದಲ್ಲಿ 48.15 ಲಕ್ಷ ಹೆಕ್ಟೇರ್‌ನಲ್ಲಿನ ಬೆಳೆ ನಷ್ಟವಾಗಿದೆ. ಇಷ್ಟೂ ಪ್ರದೇಶದಲ್ಲಿನ ಬೆಳೆಯು ಶೇ 33 ಮತ್ತು ಅದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಬೆಳೆ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಕೆಲವು ಪ್ರದೇಶದಲ್ಲಿ ಬೆಳೆಯು ಶೇ 100ರಷ್ಟೂ ನಷ್ಟವಾಗಿದೆ. ಕೇಂದ್ರ ಸರ್ಕಾರದ ಲೆಕ್ಕಾಚಾರದಂತೆಯೇ ಇದಕ್ಕೆಲ್ಲಾ ಬೇಸಾಯ ವೆಚ್ಚ ಸಹಾಯಧನ ಒದಗಿಸಬೇಕು. ಅದೇ ಲೆಕ್ಕಾಚಾರದಲ್ಲಿ ರೈತರಿಗೆ ಪರಿಹಾರ ಒದಗಿಸಲು ರಾಜ್ಯ ಸರ್ಕಾರಕ್ಕೆ ಒಟ್ಟು ₹4,663.12 ಕೋಟಿ ಬೇಕಿದೆ ಎಂದು ರಾಜ್ಯ ಸರ್ಕಾರ ಹೇಳಿಕೊಂಡಿದೆ.

ರಾಜ್ಯದಲ್ಲಿರುವ ಎಸ್‌ಡಿಆರ್‌ಎಫ್ ಮೊತ್ತ ಸಾಲದೇ ಇದ್ದರಷ್ಟೇ ಕೇಂದ್ರ ಸರ್ಕಾರದ ಬಳಿ ರಾಜ್ಯ ಸರ್ಕಾರವು ಆರ್ಥಿಕ ನೆರವು ಕೋರಬೇಕು ಎಂದು ಕೇಂದ್ರ ಸರ್ಕಾರದ ನಿಯಮಗಳು ಹೇಳುತ್ತವೆ. 2023–24ನೇ ಆರ್ಥಿಕ ವರ್ಷಕ್ಕೆ ರಾಜ್ಯದ ಪಾಲೂ ಸೇರಿ ಕೇಂದ್ರ ಸರ್ಕಾರವು ಒದಗಿಸಿದ ಎಸ್‌ಡಿಆರ್‌ಎಫ್ ಮೊತ್ತ ₹929 ಕೋಟಿ. ಈ ಮೊತ್ತ ಯಾವ ಪರಿಹಾರ ಕಾರ್ಯಕ್ಕೂ ಸಾಲುವುದಿಲ್ಲ ಎಂದು ಕೇಂದ್ರದ ಬಳಿ ಆರ್ಥಿಕ ನೆರವು ಕೋರಲಾಗಿದೆ ಎಂದು ರಾಜ್ಯ ಸರ್ಕಾರ ಹೇಳಿದೆ. ಯಾವ ಕಾರ್ಯಗಳಿಗೆಲ್ಲಾ ಹಣವನ್ನು ವೆಚ್ಚ ಮಾಡಬೇಕಿದೆ ಎಂಬುದನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ವಿವರಿಸಿದೆ. ರಾಜ್ಯದಲ್ಲಿ ತೀವ್ರ ಬರದ ಕಾರಣದಿಂದ ಬೆಳೆಯೊಂದರಲ್ಲೇ ₹35,000 ಕೋಟಿಗೂ ಅಧಿಕ ನಷ್ಟವಾಗಿದೆ. ಇದರಲ್ಲಿ ಸರಿಸುಮಾರು ಅರ್ಧದಷ್ಟು ಮೊತ್ತವನ್ನು ಮಾತ್ರ ಆರ್ಥಿಕ ನೆರವಿನ ರೂಪದಲ್ಲಿ ಕೇಳಲಾಗಿದೆ.

ಕೇಂದ್ರ ಸರ್ಕಾರದ್ದೇ ನಿಯಮಗಳ ಪ್ರಕಾರ, ಕೇಂದ್ರದ ತಜ್ಞರ ತಂಡ ವರದಿ ಸಲ್ಲಿಸಿದ ಒಂದು ತಿಂಗಳ ಒಳಗೆ ಕೇಂದ್ರ ಸರ್ಕಾರವು ನೆರವನ್ನು ಒದಗಿಸಬೇಕು. ಆದರೆ ಕೇಂದ್ರ ತಂಡವು ರಾಜ್ಯಕ್ಕೆ ಭೇಟಿ ನೀಡಿ ಹಲವು ತಿಂಗಳು ಕಳೆದರೂ, ಕೇಂದ್ರದಿಂದ ನೆರವು ದೊರೆತಿಲ್ಲ. ಪರಿಹಾರ ದೊರೆಯುತ್ತದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆಯೂ ಮಾಹಿತಿ ಇಲ್ಲ.



ಹುಬ್ಬಳ್ಳಿ ಸಮೀಪದ ಛಬ್ಬಿ ಗ್ರಾಮದ ಹೊಲವೊಂದರಲ್ಲಿ ಮುರುಟಿ ನಿಂತ ಮೆಕ್ಕೆಜೋಳದ ತೆನೆ ಪ್ರಜಾವಾಣಿ ಚಿತ್ರ



ರಾಜ್ಯ ಸರ್ಕಾರ ಕೇಳಿದ ಬರ ಪರಿಹಾರದ ವಿವರ

₹18,171.5 ಕೋಟಿ — ರಾಜ್ಯ ಸರ್ಕಾರವು ಬರ ಪರಿಹಾರದ ಸಲುವಾಗಿ ಕೇಂದ್ರ ಸರ್ಕಾರದಿಂದ ಕೇಳಿದ ಒಟ್ಟು ನೆರವು

₹4,663.12 ಕೋಟಿ — ಬೆಳೆ ನಷ್ಟ ಪರಿಹಾರಕ್ಕೆ ಕೇಳಲಾದ ಮೊತ್ತ

₹363.68 ಕೋಟಿ — ಜಾನುವಾರುಗಳಿಗೆ ಶಿಬಿರ, ಮೇವು ಪೂರೈಕೆ ಮತ್ತು ಔಷಧಗಳ ಒದಗಿಸಲು ಕೇಳಲಾದ ಮೊತ್ತ

₹12,577.9 ಕೋಟಿ — ಬರದ ತೀವ್ರತೆಗೆ ಗುರಿಯಾದ ಕುಟುಂಬಗಳಿಗೆ ನೆರವು ಒದಗಿಸಲು ಕೇಳಲಾದ ಮೊತ್ತ

₹566.78 ಕೋಟಿ — ಬರದ ಸಂದರ್ಭದಲ್ಲಿ ಕುಡಿಯುವ ನೀರು ಒದಗಿಸುವ ಕಾಮಗಾರಿಗೆ ಕೇಳಲಾದ ಮೊತ್ತ

ಹಸಿರು ಬರ

ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರವು ಸಲ್ಲಿಸಿದ ಮನವಿಯಲ್ಲಿ 'ಹಸಿರು ಬರ' ಎಂಬ ಪರಿಕಲ್ಪನೆಯನ್ನು ವಿವರಿಸಿದೆ. ಅಂದರೆ ಬೆಳೆ ಹಸಿರಾಗಿ ಕಂಡರೂ, ಕುಂಠಿತ ಬೆಳವಣಿಗೆ ಮತ್ತು ಇಳುವರಿ ಭಾರಿ ಪ್ರಮಾಣದಲ್ಲಿ ಇಳಿಕೆಯಾಗಿರುವ ಸ್ಥಿತಿಯನ್ನು 'ಹಸಿರು ಬರ' ಎಂದು ಕರೆಯಲಾಗಿದೆ. ರಾಜ್ಯದಲ್ಲಿ ಈ ಬಾರಿ 'ಹಸಿರು ಬರ' ಏಕೆ ತಲೆದೋರಿದೆ ಎಂಬುದನ್ನೂ ವರದಿಯಲ್ಲಿ ವಿವರಿಸಲಾಗಿದೆ. ಈ ಬಾರಿ ಮುಂಗಾರು ವಿಳಂಬವಾದರೂ, ಜುಲೈ ಕೊನೆಯ ವಾರ ಮತ್ತು ಆಗಸ್ಟ್ ಮೊದಲ ವಾರದಲ್ಲಿ ವಾಡಿಕೆಯಷ್ಟು ಮಳೆಯಾಗಿತ್ತು. ಹೀಗಾಗಿ ಬಿತ್ತನೆ ಕಾರ್ಯ ಚುರುಕಿನಿಂದ ನಡೆದಿತ್ತು. ಆದರೆ ನಂತರದ ದಿನಗಳಲ್ಲಿ ಮಳೆ ತೀವ್ರ ಕೊರತೆಯಾಗಿದ್ದು ಕುಂಠಿತ ಬೆಳವಣಿಗೆಗೆ ಕಾರಣವಾಯಿತು. ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಆಗ್ಗಾಗ್ಗೆ ಚದುರಿದಂತೆ ಮಳೆಯಾದ ಕಾರಣ, ಪೈರುಗಳು ಹಸಿರಾದವು. ಆದರೆ ನಿರೀಕ್ಷಿತ ಮಟ್ಟದಲ್ಲಿ ಬೆಳವಣಿಗೆ ಸಾಧ್ಯವಾಗಲಿಲ್ಲ. ಇಳುವರಿಯೂ ಕುಸಿಯಿತು. ಈ ಪರಿಸ್ಥಿತಿಯೇ ಹಸಿರು ಬರ.

ಕೇಂದ್ರ ಸರ್ಕಾರದ ನೂತನ ನಿಯಮಗಳ ಪ್ರಕಾರ ಉಪಗ್ರಹ ಚಿತ್ರಗಳ ಮೂಲಕ ಬರ ಪೀಡಿತ ಪ್ರದೇಶದಲ್ಲಿನ ಹಸಿರಿನ ಪ್ರಮಾಣವನ್ನು ಪರಿಶೀಲಿಸಲಾಗುತ್ತದೆ. ಆದರೆ ಈಗ ಕುಂಠಿತ ಬೆಳವಣಿಗೆಯಿದ್ದರೂ ಹೊಲ–ತೋಟಗಳು ಹಸಿರಾಗಿ ಕಾಣುವುದರಿಂದ ಉಪಗ್ರಹ ಚಿತ್ರಗಳಲ್ಲಿ ಬರದ ತೀವ್ರತೆ ಕಾಣುವುದಿಲ್ಲ.

₹35,162 ಕೋಟಿ — ಬೆಳೆ ನಷ್ಟದ ಒಟ್ಟು ಅಂದಾಜು ಮೊತ್ತ

₹32,245 ಕೋಟಿ — ಸಾಮಾನ್ಯ ಬೆಳೆಯ ನಷ್ಟದ ಮೊತ್ತ

₹2,916 ಕೋಟಿ — ತೋಟಗಾರಿಕಾ ಬೆಳೆಯ ನಷ್ಟದ ಮೊತ್ತ

ಆಧಾರ: ಬರ ಪರಿಹಾರಕ್ಕಾಗಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ಮನವಿ–ವರದಿಗಳು, ಕೇಂದ್ರ ಸರ್ಕಾರದ ಬರ ನಿರ್ವಹಣೆ ಕೈಪಿಡಿ

'ಮಾರಿಗೋಲ್ಡ್'ನೊಂದಿಗೆ ಬಂದ ಸಂಗೀತಾ

ಇತ್ತೀಚೆಗಷ್ಟೇ 'ಬಿಗ್‌ಬಾಸ್' ಶೋ ಮುಗಿಸಿ ಹೊರಬಂದ ನಟಿ ಸಂಗೀತಾ ಶೃಂಗೇರಿ ಸದ್ಯಕ್ಕೆ 'ಮಾರಿಗೋಲ್ಡ್' ಹಿಡಿದಿದ್ದಾರೆ. ದಿಗಂತ್ ಮತ್ತು ಸಂಗೀತಾ ಶೃಂಗೇರಿ ಜೋಡಿಯಾಗಿ ನಟಿಸಿರುವ ಈ ಚಿತ್ರದ ಟೀಸರ್ ಬಿಡುಗಡೆಗೊಂಡಿದೆ.

ರಾಘವೇಂದ್ರ ಎಂ. ನಾಯ್ಕ ಆ್ಯಕ್ಷನ್–ಕಟ್ ಹೇಳಿರುವ ಚಿತ್ರವನ್ನು ಆರ್.ವಿ ಕ್ರಿಯೇಷನ್ಸ್ ಬ್ಯಾನರ್‌ನಡಿ ರಘುವರ್ಧನ್ ನಿರ್ಮಾಣ ಮಾಡಿದ್ದಾರೆ. 'ಮಾರಿಗೋಲ್ಡ್ ಚಿನ್ನದ ಬಿಸ್ಕತ್ತು ಮಾರಲು ಹೋದ ನಾಲ್ಕು ಹುಡುಗರ ಕಥೆ. ಚಿತ್ರದುರ್ಗ, ಬೆಂಗಳೂರು, ಸಕಲೇಶಪುರ ಮತ್ತಿತರ ಕಡೆ ಚಿತ್ರೀ ಕರಣ ಮಾಡಲಾಗಿದೆ. ಕೋವಿಡ್ ನಂತರದ ಬೆಳವಣಿಗೆಗಳು ಚಿತ್ರ ವಿಳಂಬಕ್ಕೆ ಕಾರಣವಾಯಿತು. ಮಾರ್ಚ್‌ನಲ್ಲಿ ತೆರೆಗೆ ಬರುತ್ತೇವೆ' ಎಂದರು ನಿರ್ದೇಶಕರು.



ದಿಗಂತ್, ಸಂಗೀತಾ

'ನಟ ದಿಗಂತ್ ನನ್ನ ಬಾಲ್ಯದ ಕ್ರಷ್. ಅದನ್ನು ಅವರಿಗೂ ಹೇಳಿದ್ದೇನೆ. ಈ ಚಿತ್ರದಿಂದ ನನ್ನ ಸುಮಾರು ವರ್ಷದ ಕನಸು ನನಸಾಗಿದೆ' ಎಂದರು ಸಂಗೀತಾ.

ವೀರ್ ಸಮರ್ಥ್ ಸಂಗೀತ, ಕೆ.ಎಸ್.ಚಂದ್ರಶೇಖರ್ ಛಾಯಾಚಿತ್ರಗ್ರಹಣವಿದೆ. ಸಂಪತ್ ಮೈತ್ರೇಯ, ಯಶ್ ಶೆಟ್ಟಿ , ಕಾಕ್ರೋಚ್ ಸುಧೀ, ವಜ್ರಾಂಗ್ ಶೆಟ್ಟಿ, ಬಲ ರಾಜವಾಡಿ ಮತ್ತಿತರರು ಚಿತ್ರದ ತಾರಾಬಳಗದಲ್ಲಿದ್ದಾರೆ.

'ಧೈರ್ಯಂ'ಗೆ ಧ್ರುವ ಸರ್ಜಾ ಸಾಥ್

ವಿವಾನ್.ಕೆ ಮತ್ತು ಅನುಷಾ ರೈ ಜೋಡಿಯಾಗಿ ನಟಿಸಿರುವ 'ಧೈರ್ಯಂ ಸರ್ವತ್ರ ಸಾಧನಂ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ಧ್ರುವ ಸರ್ಜಾ ಚಿತ್ರದ ಟ್ರೇಲರ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು. ಎ.ಆರ್. ಸಾಯಿರಾಮ್ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿರುವ ಚಿತ್ರಕ್ಕೆ ಎ.ಪಿ.ಪ್ರೊಡಕ್ಷನ್ ಅಡಿಯಲ್ಲಿ ಆನಂದ್ ಬಾಬು.ಜಿ ಬಂಡವಾಳ ಹೂಡಿದ್ದಾರೆ.

'ಹಲವು ಭಾಗಗಳು ಸೇರಿ ಒಂದು ಉತ್ಪನ್ನ ಸಿದ್ಧವಾಗುತ್ತದೆ. ಅದೇ ರೀತಿ ಹಲವರು ಸೇರಿಕೊಂಡು ಚಿತ್ರ ಸಿದ್ಧಗೊಂಡಿದೆ. ಇದೊಂದು ಸತ್ಯ ಘಟನೆ ಆಧಾರಿತ ಚಿತ್ರ. ಯಾರ ಕಥೆ, ಎಲ್ಲಿ ನಡೆದಿದ್ದು? ಎಂಬುದನ್ನು ಚಿತ್ರದ ಕೊನೆಯಲ್ಲಿ ಆ ವ್ಯಕ್ತಿಗಳ ಭಾವಚಿತ್ರ ಹಾಗೂ ಪೂರ್ಣ ವಿವರದೊಂದಿಗೆ ತೋರಿಸಿದ್ದೇವೆ. ಆ ವ್ಯಕ್ತಿಗಳ ಬಳಿ ಅನುಮತಿ ಪಡೆದು, ಘಟನೆ ನಡೆದ ಸ್ಥಳಗಳಲ್ಲಿಯೇ ಚಿತ್ರೀಕರಣ ನಡೆಸಲಾಗಿದೆ' ಎಂದು ನಿರ್ದೇಶಕರು ಹೇಳಿದರು.



ಅನುಷಾ ರೈ

ಯಶ್‌ಶೆಟ್ಟಿ, ಬಲರಾಜವಾಡಿ, ಚಕ್ರವರ್ತಿ ಚಂದ್ರಚೂಡ್ ಮೊದಲಾದವರು ತಾರಾಗಣದಲ್ಲಿದ್ದಾರೆ. ಐದು ಹಾಡುಗಳಿದ್ದು, ಜ್ಯೂಡಾಸ್ಯಾಂಡಿ ಸಂಗೀತ ಸಂಯೋಜಿಸಿದ್ದಾರೆ. ರವಿಕುಮಾರ್ ಸನಾ ಛಾಯಾಗ್ರಹಣ, ಶ್ರೀಕಾಂತ್ ಸಂಕಲನ ಚಿತ್ರಕ್ಕಿದೆ. ತುಮಕೂರು, ಕೊರಟಗೆರೆ, ದೇವರಾಯನದುರ್ಗ ಮೊದಲಾದೆಡೆ ಚಿತ್ರೀಕರಣಗೊಂಡಿದೆ.


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ **'ಡೇಟಿಂಗ್ ಆ್ಯಂಡ್ ರಿಲೇಷನ್‌ಶಿಪ್ಸ್:** ಅಂಡರ್‌ಸ್ಟ್ಯಾಂಡಿಂಗ್ ಯುವರ್‌ಸೆಲ್ಫ್ ಆ್ಯಂಡ್ ದಿ ಅದರ್ ಪರ್ಸನ್ಸ್' ಎಂಬ ತಲೆಬರಹ ಇರುವ ಪುಟವೊಂದರ ಚಿತ್ರ. ಡೇಟಿಂಗ್ ಆ್ಯಪ್ ಕುರಿತ ಮಾಹಿತಿ ಇರುವ, ವೈಯಕ್ತಿಕ ಸಂಬಂಧವನ್ನು ಕೊನೆಗಾಣಿಸುವ ಕುರಿತೆಲ್ಲಾ ಮಾಹಿತಿಗಳಿರುವ ಪುಟವೊಂದರ ಚಿತ್ರ. ಜೊತೆಯಲ್ಲಿ, ವಿಜ್ಞಾನದ ವಿಷಯ ಕುರಿತ ಕೈಬರಹ ಇರುವ ಪುಟ– ಹೀಗೆ ಎರಡು ಚಿತ್ರಗಳಿರುವ ಫೋಟೊ ಕೊಲಾಜ್‌ವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದು ಸಿಬಿಎಸ್‌ಇ ಪಠ್ಯಕ್ರಮದ 9ನೇ ತರಗತಿಯ ಪಠ್ಯಪುಸ್ತಕ ಎಂದೂ ಹೇಳಲಾಗುತ್ತಿದೆ. '9ನೇ ತರಗತಿಗೆ ಡೇಟಿಂಗ್ ಕುರಿತು ಪಾಠ ಮಾಡುವಲ್ಲಿಗೆ ಬಂದವಾ ಎನ್‌ಸಿಆರ್‌ಟಿ ಪುಸ್ತಕಗಳು. ಮಕ್ಕಳು ಯಾಕಾಗಿ ಪಾಶ್ಚಿಮಾತ್ಯ ಸಂಸ್ಕೃತಿಗೆ ಹೊರಳುತ್ತಿದ್ದಾರೆ ಎಂದು ನಾವು ಯೋಚಿಸು ತ್ತಿದ್ದರೆ, ಉತ್ತರ ಇಲ್ಲಿದೆ. ಏನಿದು?' ಎಂಬಂತೆ ಪೋಸ್ಟ್‌ಗಳನ್ನು ಹಂಚಿಕೊಳ್ಳಲಾಗುತ್ತಿದೆ. ಈ ಕುರಿತು ಕೆಲವು ಮಾಧ್ಯಮಗಳು ಕೂಡ ವರದಿ ಮಾಡಿವೆ. ಆದರೆ, ಇದು ತಪ್ಪು ಮಾಹಿತಿಯೊಂದಿಗೆ ಹಂಚಿಕೊಳ್ಳುತ್ತಿರುವ ಸುದ್ದಿ.

✓ **ಈ ಕುರಿತು ಸಿಬಿಎಸ್‌ಇ ತನ್ನ 'ಎಕ್ಸ್'** ಖಾತೆ ಮೂಲಕ ಸ್ಪಷ್ಟೀಕರಣ ನೀಡಿದೆ. 'ಇದು ಸಿಬಿಎಸ್‌ಇಯ ಪಠ್ಯವಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಫೋಟೊವು ಗಗನ್ ದೀಪ್ ಕೌರ್ ಎಂಬವರು ಬರೆದ, ಜಿ.ರಾಮ್ ಬುಕ್ಸ್ ಪ್ರೈ ಲಿ. ಪ್ರಕಟಿಸಿರುವ, 'ಎ ಗೈಡ್ ಟು ಸೆಲ್ಫ್ ಅವೇರ್‌ನೆಸ್ ಆ್ಯಂಡ್ ಎಂಪವರ್‌ಮೆಂಟ್' ಪುಸ್ತಕದ ಪುಟಗಳ ಚಿತ್ರಗಳು. ಅವುಗಳನ್ನೇ ಸಿಬಿಎಸ್‌ಇ ಪಠ್ಯ ಎಂದು ಹೇಳಲಾಗುತ್ತಿದೆ' ಎಂದು ಸಿಬಿಎಸ್‌ಇ ಹೇಳಿದೆ. ಈ ಕುರಿತು ಪ್ರಕಾಶನ ಸಂಸ್ಥೆ ಕೂಡ ಸ್ಪಷ್ಟನೆ ನೀಡಿದೆ. ಆದ್ದರಿಂದ, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಚಿತ್ರವು ಸಿಬಿಎಸ್‌ಇ ಪಠ್ಯವಲ್ಲ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಕೀಳರಿಮೆ ಕಿತ್ತು ಹಾಕಿ

ನುಡಿ ಬೆಳಗು

ಎಚ್.ಎಸ್.ನವೀನಕುಮಾರ್, ಹೊಸದುರ್ಗ

ವಿಕಾಸ ಒಳ್ಳೆಯ ಮಾತುಗಾರ. ಆದರೆ ಕಾಲೇಜಿನ ಸಭೆಗಳಲ್ಲಿ ಮಾತನಾಡಲು ಆತನಿಗೆ ಅಳುಕು. ಬುದ್ಧಿವಂತಿಕೆಯಲ್ಲಿ, ವಿಷಯ ಸಂಗ್ರಹಣೆಯಲ್ಲಿ ಇವನಿಗಿಂತ ದುರ್ಬಲರಾದವರು ಭಾಷಣ ಸ್ಪರ್ಧೆಯಲ್ಲಿ ಬಹುಮಾನ ಗಿಟ್ಟಿಸುತ್ತಿದ್ದರು. ವಿಕಾಸನನ್ನು ವೇದಿಕೆ ಏರದಂತೆ ಕಾಡುತ್ತಿದ್ದ ಮುಖ್ಯ ಸಮಸ್ಯೆ ಎಂದರೆ ಅವನಲ್ಲಿದ್ದ ಕೀಳರಿಮೆ ಅಥವಾ ಹಿಂಜರಿಕೆ. ತಾನು ಗ್ರಾಮೀಣ ಪ್ರದೇಶದ ಕನ್ನಡ ಶಾಲೆಯಲ್ಲಿ ಕಲಿತವನು, ಕಾನ್ವೆಂಟ್ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳು ಇಂಗ್ಲಿಷ್‌ನಲ್ಲಿ ಸರಾಗವಾಗಿ ಮಾತಾಡುತ್ತಾರೆ, ನನಗದು ಸಾಧ್ಯವಾಗದು. ಅವರೆದುರು ಸ್ಪರ್ಧೆ ಗಿಳಿದರೆ ಎಲ್ಲಿ ಅವಮಾನಿತನಾಗುತ್ತೇನೋ ಎಂಬ ಅಳಕು ವಿಕಾಸನಿಗೆ. ಹಾಗೆಯೇ ಲಕ್ಷ್ಮಿಗೆ ಒಳ್ಳೆಯ ಕಂಠಸಿರಿ ಇದೆ. ಆದರೆ ತನಗಿಂತಲೂ ಚೆನ್ನಾಗಿ ಹಾಡುವವರಿದ್ದಾರೆ ಅವರೆದುರು ಸ್ಪರ್ಧಿಸಲಾರ ಎಂಬ ಹಿಂಜರಿಕೆ ಅವಳದ್ದು. ಹೀಗಾಗಿ ಮನೆಯಲ್ಲಿ ಸುಶ್ರಾವ್ಯವಾಗಿ ಹಾಡುವ ಆಕೆ ಶಾಲೆಯ ಗಾಯನ ಸ್ಪರ್ಧೆಗಳಲ್ಲಿ ಭಾಗವಹಿಸುವ ಗೋಜಿಗೇ ಹೋಗುತ್ತಿರಲಿಲ್ಲ. ಹೀಗಾಗಿ ಅವಳ ಪ್ರತಿಭೆ ಬೆಳಕಿಗೇ ಬರಲಿಲ್ಲ. ರಮೇಶನಿಗೆ ಉತ್ತರಗಳೆಲ್ಲವೂ ಗೊತ್ತಿದ್ದರೂ ಪರೀಕ್ಷೆ ಬರೆಯುವಾಗ ತಾನು ಬೇರೆಯವರಿಗಿಂತ ದಡ್ಡನೆಂಬ ಕೀಳರಿಮೆಯ ಭಾವ ಕಾಡಿ ಸರಿಯಾಗಿ ಬರುತ್ತಿದ್ದ ಉತ್ತರವನ್ನೂ ತಪ್ಪಾಗಿ ಬರೆದು ಕಡಿಮೆ ಅಂಕ ಗಳಿಸಿ ದುಃಖಿತನಾಗುತ್ತಿದ್ದ.

ನಮ್ಮ ವ್ಯಕ್ತಿತ್ವಕ್ಕೆ ಕಾಟ ಕೊಡುವ ಅತಿ ದೊಡ್ಡ ವೈರಸ್ ಎಂದರೆ ಕೀಳರಿಮೆ ಅಥವಾ ಹಿಂಜರಿಕೆ. ನಮಗೆ ಗೊತ್ತಿರುವ ವಿಷಯವನ್ನೂ ಗೊತ್ತಾಗಲು ಬಿಡದ ವೈರಸ್ಸೇ ಈ ಕೀಳರಿಮೆ. ಇದಕ್ಕೆ ಇಂಗ್ಲಿಷ್‌ನಲ್ಲಿ INFERIORITY COMPLEX ಎನ್ನುತ್ತಾರೆ. ಹೆಚ್ಚಾಗಿ ಬಾಲ್ಯದಲ್ಲಿ ಅಂಟಿಕೊಳ್ಳುವ ಈ ವೈರಸ್ಸು, ದೊಡ್ಡವರಾದ ಮೇಲೂ ಹಾಗೇ ಉಳಿದುಕೊಂಡರೆ ನಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಸಾಧನೆ ಮಾಡಲು ಬಿಡದೆ ಕಾಡುತ್ತದೆ. ಎಲ್ಲಾ ವ್ಯಕ್ತಿಗಳಲ್ಲೂ ಸಾಮರ್ಥ್ಯ ಹಾಗೂ ದೌರ್ಬಲ್ಯಗಳೆರಡೂ ಇರುತ್ತವೆ. ಯಶಸ್ವೀ ವ್ಯಕ್ತಿಗಳು ತಮ್ಮ ಸಾಮರ್ಥ್ಯದ ಕಡೆಗೆ ಗಮನ ಕೇಂದ್ರೀಕರಿಸಿ ಶ್ರಮಪಟ್ಟು ಸಾಧನೆಯ ಮೆಟ್ಟಿಲೇರುತ್ತಾರೆ. ಅದೇ ರೀತಿ ಅವರಿಗೆ ತಮ್ಮ ದೌರ್ಬಲ್ಯಗಳ ಅರಿವೂ ಇರುತ್ತದೆ. ಆದರೆ ಯಶಸ್ಸು ಪಡೆಯದೇ ಸದಾ ಕೊರಗುವವರು ತಮ್ಮ ದೌರ್ಬಲ್ಯಗಳನ್ನೇ ದೊಡ್ಡದಾಗಿಸಿಕೊಂಡು ಕೀಳರಿಮೆಗೆ ಒಳಗಾಗಿ ತಮ್ಮ ಸಾಮರ್ಥ್ಯಗಳೇನೆಂದು ಗುರುತಿಸಿಕೊಳ್ಳುವುದೇ ಇಲ್ಲ.

ಕೀಳರಿಮೆಗೆ ಮುಖ್ಯ ಕಾರಣವೆಂದರೆ ಸೋಲಿನ ಭಯ. ಸೋಲು ಎಂಬುದರ ಆಂಗ್ಲ ರೂಪವಾದ FAIL ಅನ್ನು First Attempt In Learning ಎಂದು ಧನಾತ್ಮಕವಾಗಿ ವಿಸ್ತರಿಸಬಹುದು. ಹೀಗಾಗಿ ವೈಫಲ್ಯದ ಕಥೆಗಳನ್ನು ಓದಿದರೆ ಯಶಸ್ಸಿನ ದಾರಿ ಖಂಡಿತ ಗೋಚರಿಸುತ್ತದೆ. ಅದೇ ರೀತಿ ದೈಹಿಕ ರೂಪ, ವೃತ್ತಿ ಅಂತಸ್ತುಗಳೂ ಕೀಳರಿಮೆಯ ಭಾವನೆಗೆ ಕಾರಣವಾಗುತ್ತವೆ. ಕೀಳರಿಮೆಯನ್ನು ಹೋಗಲಾಡಿಸಲು ಸೋಲಿಗೆಂದೂ ಅಂಜದ, ಸೋಲಿನಿಂದ ಕಲಿಯುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ನಮ್ಮ ಸಾಮರ್ಥ್ಯದ ಮೇಲೆ ಗಮನ ಕೇಂದ್ರೀಕರಿಸಿ ಅದರ ಮೇಲೆ ನಂಬಿಕೆಯಿರಿಸಿ ಪರಿಶ್ರಮ ಪಡಬೇಕು. ಬಸವಣ್ಣನವರು ಹೇಳಿದಂತೆ 'ಕಾಯಕವೇ ಕೈಲಾಸ' ಎಂದುಕೊಂಡು ನಾವು ಮಾಡುವ ಕೆಲಸ ಶ್ರೇಷ್ಠವಾದದ್ದೆಂದು ಅದನ್ನು ಸದಾ ಪ್ರೀತಿಸಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಸೋಮವಾರ ಫೆಬ್ರುವರಿ 12, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ತೃತೀಯ ಗಂ. 17-45 ನಕ್ಷತ್ರ: ಪೂರ್ವಾಭಾದ್ರ ಗಂ. 14-57 ಯೋಗ: ಸಿದ್ಧ ಗಂ. 26-37 ಕರಣ: ತೈತಿಲ ಗಂ. 07-25, ಮಕರ ಮಾಸದ 29 ನೇ ದಿನ, ಮಳೆನಕ್ಷತ್ರ: ಧನಿಷ್ಠಾ 2.
ರಾಹುಕಾಲ : ಬೆಳಿಗ್ಗೆ 07-30 – 09-00
ಸೂರ್ಯೋದಯ : 06-58 ಸೂರ್ಯಾಸ್ತ : 06-31
ಮುಸ್ಲಿಂ ದಿನಾಂಕ : 01 ಶಬನ್
ಅದೃಷ್ಟ ಸಂಖ್ಯೆ : 7, 2

ಮೇಷ: ಬುದ್ಧಿವಂತಿಕೆ ಕೊರತೆಯಿಂದ ಸಮಸ್ಯೆಯಲ್ಲಿ ಸಿಲುಕುವ ಸಂಭವವಿರುವುದು. ದೇಹದಲ್ಲಿ ಪಿತ್ತ ಅಧಿಕವಾಗುವುದರಿಂದ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಅವಶ್ಯಕ. ಮದುವೆ ಕೆಲಸಗಳಿಗೆ ಓಡಾಟ ನಡೆಸುವಿರಿ.

ವೃಷಭ: ಇನ್ನೊಬ್ಬರಿಗೆ ಗೌರವವನ್ನು ಕೊಟ್ಟು ನೀವು ಗೌರವವನ್ನು ಅಪೇಕ್ಷಿಸುವ ಮನಸ್ಥಿತಿ ಇಟ್ಟುಕೊಳ್ಳಿರಿ. ರಾಜಕೀಯ ವರ್ಗದವರಿಗೆ ದೇವತಾನುಗ್ರಹದಿಂದ ಅದೃಷ್ಟ ಖುಲಾಯಿಸಲಿದೆ. ಶುಭವಾರ್ತೆಗಳು ನಿಮ್ಮದಿಗೆ ಕಾರಣವಾದೀತು.

ಮಿಥುನ: ಖಾದಿ ಉದ್ಯಮದವರಿಗೆ ಬೇಡಿಕೆಯನ್ನು ಪೂರೈಸಲು ಸಾಧ್ಯವಾಗದ ರೀತಿಯಲ್ಲಿ ವ್ಯವಹಾರ ನಡೆಯುವುದು. ಸಂಬಂಧಿಕರ ವಲಯದಲ್ಲಿದ್ದ ತಪ್ಪು ಅಭಿಪ್ರಾಯಗಳು ದೂರಾಗುವುದು.

ಕರ್ಕಾಟಕ: ಬಾಲ್ಯದ ಸ್ನೇಹಿತರ ಆಶ್ಚರ್ಯಕರ ಭೇಟಿಯು ಮನಸ್ಸಿಗೆ ಸಂತೋಷ ಉಂಟುಮಾಡಲಿದೆ. ಕೆಲಸಕಾರ್ಯಗಳಿಗೆ ಅಪೇಕ್ಷಿಸಿದ ಬೆಂಬಲ ದೊರೆಯಲಿದೆ. ಆಡಿದ ಮಾತುಗಳು ನಿಮಗೆ ಮುಳ್ಳಾಗುವ ದಿನ.

ಸಿಂಹ: ವೃತ್ತಿಯನ್ನು ಅಭಿವೃದ್ಧಿ ಮಾಡುವ ಸಂಕಲ್ಪದಿಂದ ಈ ದಿನವನ್ನು ಪ್ರಾರಂಭಿಸಿ, ದೇವತಾನುಗ್ರಹದಿಂದ ಅಭಿವೃದ್ಧಿಯಾಗುವುದು. ಸ್ನೇಹಿತರ ಸಂಪರ್ಕದಿಂದ ಜೀವನ ನಡೆಸಲು ಬೇಕಾದ ಉಪಾಯ ಹೊಂದುವಿರಿ.

ಕನ್ಯಾ: ಜೀವನೋಪಾಯಕ್ಕೆ ಹಲವಾರು ಅವಕಾಶಗಳು ಎದುರಾಗುವುದರಿಂದ ಗೊಂದಲಕ್ಕೆ ಈಡಾಗುವಿರಿ. ಕಾರ್ಮಿಕ ವರ್ಗದವರಿಗೆ ಪರಿಶ್ರಮದಿಂದ ಹೆಚ್ಚಿನ ಆದಾಯ ಉಂಟಾಗಲಿದೆ. ಕುಲದೇವರ ಸೇವೆಯಿಂದ ಹೆಚ್ಚಿನ ಫಲ ಲಭಿಸಲಿದೆ.

ತುಲಾ: ಸಾಮಾಜಿಕ ಕ್ಷೇತ್ರದಲ್ಲಿನ ಸಮರ್ಥ ಕಾರ್ಯನಿರ್ವಹಣೆಯು ಕೆಟ್ಟ ಜನರ ದೃಷ್ಟಿ ದೋಷಕ್ಕೆ ಕಾರಣವಾಗುವುದು. ವೃತ್ತಿಯ ಮತ್ತು ಮುಂದಿನ ಬದುಕಿನ ಬಗ್ಗೆ ಗಂಭೀರವಾಗಿ ಚಿಂತಿಸಬೇಕಾದ ಅಗತ್ಯವಿದೆ.

ವೃಶ್ಚಿಕ: ಯಶಸ್ಸಿಗೆ ಇನ್ನೊಂದಿಷ್ಟು ಪೂರಕವಾದ ವಾತಾವರಣ ಮೂಡಿ ಬರಲಿದೆ. ಯಾವುದೇ ಕೆಲಸಗಳಿಗೂ ಅಳುಕುವ ಪ್ರಮೇಯ ಈ ದಿನ ಇರುವುದಿಲ್ಲ. ನೂತನ ವಸ್ತುಗಳ ಖರೀದಿಗೆ ಈ ದಿನ ಸಮಯವಲ್ಲ.

ಧನು: ಮರಕೆಲಸ ಮಾಡುವ ವಿಶ್ವಕರ್ಮರಿಗೆ ಉದ್ಯೋಗದಲ್ಲಿ ಕೀರ್ತಿ, ಲಾಭ ಹಾಗೂ ಸಮಾಜದಲ್ಲಿ ಹೆಸರು ಸಂಪಾದನೆಯಾಗುವುದು. ತ್ಯಾಗದ ಮನೋಭಾವ ಬೆಳೆಸಿಕೊಳ್ಳುವಿರಿ. ಶಿರೋವೇದನೆ ಕಾಡಲಿದೆ.

ಮಕರ: ತೆರೆಮರೆಯಲ್ಲಿ ನಡೆಸಿದ ಕೆಲಸಗಳಿಂದ ಹಾಗೂ ಪಕ್ಷನಿಷ್ಠೆ, ಸೇವಾಮನೋಭಾವದಿಂದ ಅಧಿಕಾರ ಪಡೆದುಕೊಳ್ಳುವಿರಿ. ಮಾನಸಿಕ ಅಸ್ಥಿರತೆ ಹಾಗೂ ಋಣಾತ್ಮಕ ಚಿಂತನೆ ಆಗಾಗ ಕಾಡಲಿದೆ. ನೀಲಿ ಬಣ್ಣ ಶುಭ ತರಲಿದೆ.

ಕುಂಭ: ಪರಸ್ಪರ ಕಾಳಜಿಗಳ ಬಗ್ಗೆ ಪಾಲುದಾರರು ಸಂತಸದ ಒಪ್ಪಿಗೆ ನೀಡುತ್ತಾರೆ. ಕ್ರೀಡಾಪಟುಗಳಿಗೆ, ಉಪನ್ಯಾಸಕರಿಗೆ ಮತ್ತು ಕಲಾವಿದರಿಗೆ ಹೆಚ್ಚಿನ ಅವಕಾಶ ಲಭಿಸಲಿದೆ. ಶುಭಫಲಗಳ ಪ್ರಾಪ್ತಿಗಾಗಿ ನವಗ್ರಹಗಳನ್ನು ಆರಾಧಿಸಿ.

ಮೀನ: ವ್ಯವಹಾರಿಕ ಜೀವನದ ಕೆಲವು ಮುಖ್ಯ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ ಇಂದು ಸೂಕ್ತ ದಿನವಾಗಿದೆ. ದಾನ-ಧರ್ಮ ಪ್ರವೃತ್ತಿಯಿಂದ ಕೆಲವು ಶುಭ ಫಲಗಳು ಅನುಭವಕ್ಕೆ ಬರಲಿವೆ.

ಪದಬಂಧ 5589


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹೀಗೆ ತಿರುವಿ ಹಾಕು (4)
3.ಅದೇ ತಾನೆ ಮೂಡುತ್ತಿರುವ ಸೂರ್ಯ (4)
5.ತಲೆಯಲ್ಲಿರುವ ಅನ್ನದ ಪಾತ್ರೆ (3)
6.ಕುಸುರಿ ಕೆಲಸವಿದು (3)
8.ಉಪಯುಕ್ತವಾಗಿ ಸೇರಿದುದು! (3)
9.ಮೆಲ್ಲಗೆ ಬಿರಿದಿರುವ ಸುವಾಸಿತ ಹೂವು (3)
10.ಕನ್ನ ಕೊರೆದು ಕದ್ದಿರುವ ಚಿನ್ನ (3)
12.ಕೊತ್ತಂಬರಿ ಬೀಜವಿದು (3)
14.ಕವಳದ ನಂತರ ತಂದಿರುವ ವೀಳ್ಯೆದೆಲೆ ಕಟ್ಟು (4)
15.ಮರವನ್ನು ಕತ್ತರಿಸುವ ಸಾಧನ (4)

ಮೇಲಿಂದ ಕೆಳಕ್ಕೆ

1.ನಿದ್ರಿಸುವಾಗ ಉಸಿರಾಟದಿಂದಾಗುವ ಶಬ್ದ (3)
2.ಹರಸುತಲಿದ್ದಾಗ ಕಾಣಿಸಿದ ಪುತ್ರ (2)
3.ಹುಡುಗಿ ಇಲ್ಲಿದ್ದಾಳೆ (2)
4.ಬಿಡುಗಡೆ ಹೊಂದಿದವನು (3)
7.ನೆಲದ ಅಡಿಯಲ್ಲಿರುವ ಗುಪ್ತಗೃಹ (5)
8.ಸಂಖ್ಯೆಯನ್ನು ಸೂಚಿಸುವ ಪದ (5)
9.ಪ್ರಾಯಕ್ಕೆ ಬರುತ್ತಿರುವ ಎಮ್ಮೆ (3)
11.ಗುಡಿಯ ಮೇಲಿರುವ ಗೋಪುರದ ತುದಿ (3)
12.ಹಳೆಗೆಳೆಯನಲ್ಲಿ ವೈರ ಕಾಣುತ್ತಿದೆಯಲ್ಲಾ? (2)
13.ಆನೆ ತಿರುಗಿದರೆ ಲೋಕ ಕಂಡೀತು! (2)



5588ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಛಾಯಾಗ್ರಾಹಿ
3.ಪರಿತ್ಯಾಗ 5.ಷಿಕಾರಿ
6.ಪಾತಿ 7.ನೆಪ 9.ರಜ
11.ವಾರ 12.ಮಾತೃಕೆ
14.ಸುರಕ್ಷಿತ 15.ಸಮಾನತೆ

ಮೇಲಿಂದ ಕೆಳಕ್ಕೆ:
1.ಛಾಪಾಖಾನೆ
2.ಹಿತೈಷಿ 3.ಪರಾರಿ
4.ಗರತಿ 6.ಪಾಲುದಾರ
8.ಪರಿಕರ 10.ಜಟಿಲತೆ
11.ವಾರಸು 12.ಮಾರುತ
13.ಕೆಲಸ

ಸುಡೊಕು 5974

1		3	5		6		4	7
				4			8	
7		4	9			5		3
9	1							8
		7		9			1	
	2							4
8		1		5			6	
	5		1		4	8		9
4		9		6			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5973 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಪೇಟಿಎಂ ಪೇಮೆಂಟ್ಸ್‌ನಲ್ಲಿ ಚೀನಾದ ಎಫ್‌ಡಿಐ ಪರಿಶೀಲನೆ

ನವದೆಹಲಿ (ಪಿಟಿಐ): ಒನ್97 ಕಮ್ಯುನಿಕೇಷನ್ ಲಿಮಿಟೆಡ್‌ನ ಪೇಟಿಎಂ ಪಾವತಿ ಸೇವೆಗಳಲ್ಲಿ (ಪಿಪಿಎಸ್‌ಎಲ್) ಚೀನಾದಿಂದ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಕುರಿತು ಸರ್ಕಾರ ಪರಿಶೀಲಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಒನ್97 ಕಮ್ಯುನಿಕೇಷನ್ಸ್ ಲಿಮಿಟೆಡ್ ಚೀನಾದ ಆಂಟ್ ಗ್ರೂಪ್ ಕಂಪನಿಯಿಂದ ಹೂಡಿಕೆ ಹೊಂದಿದೆ.

2020ರ ನವೆಂಬರ್‌ನಲ್ಲಿ ಪೇಟಿಎಂ ಪಾವತಿ ಅಗ್ರಿಗೇಟರ್‌ಗಳು ಮತ್ತು ಪಾವತಿ ಗೇಟ್‌ವೇಗಳ ನಿಯಂತ್ರಣದ ಮಾರ್ಗಸೂಚಿಗಳ ಅಡಿಯಲ್ಲಿ ಪಾವತಿ ಸಂಗ್ರಾಹಕರಾಗಿ ಕಾರ್ಯನಿರ್ವಹಿಸಲು ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಪರವಾನಗಿಗಾಗಿ ಅರ್ಜಿ ಸಲ್ಲಿಸಿತ್ತು. 2022ರ ನವೆಂಬರ್‌ನಲ್ಲಿ ಆರ್‌ಬಿಐ ಅರ್ಜಿಯನ್ನು ತಿರಸ್ಕರಿಸಿ, ಎಫ್‌ಡಿಐ ನಿಯಮಗಳ ಅಡಿಯಲ್ಲಿ ಮರುಸಲ್ಲಿಸುವಂತೆ ಕಂಪನಿಗೆ ಸೂಚಿಸಿತ್ತು. ನಂತರ ಕಂಪನಿ ಅರ್ಜಿ ಸಲ್ಲಿಸಿತ್ತು.

ಅಂತರ ಸಚಿವಾಲಯ ಸಮಿತಿಯು ಪಿಪಿಎಸ್‌ಎಲ್‌ನಲ್ಲಿ ಚೀನಾದಿಂದ ಹೂಡಿಕೆಗಳನ್ನು ಪರಿಶೀಲಿಸುತ್ತಿದೆ. ಸಮಗ್ರ ಪರಿಶೀಲನೆ ನಂತರ ಎಫ್‌ಡಿಐ ವಿಷಯದ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಮೂಲಗಳು ತಿಳಿಸಿವೆ.

ಕೋವಿಡ್ ಸಾಂಕ್ರಾಮಿಕದ ನಂತರ ಭಾರತದೊಂದಿಗೆ ಭೂ ಗಡಿ ಹಂಚಿಕೊಳ್ಳುವ ದೇಶಗಳಿಂದ ಯಾವುದೇ ವಲಯದಲ್ಲಿ ವಿದೇಶಿ ಹೂಡಿಕೆಗೆ ಸರ್ಕಾರವು ತನ್ನ ಪೂರ್ವಾನುಮತಿಯನ್ನು ಕಡ್ಡಾಯಗೊಳಿಸಿದೆ.

ಗ್ರಾಹಕರಿಗೆ ಪೇಟಿಎಂ ಭರವಸೆ: ಯಾವುದೇ ಅಡೆತಡೆಗಳಿಲ್ಲದೆ ನಿರಂತರ ಸೇವೆಯನ್ನು ನೀಡಲಾಗುವುದು ಎಂದು ವ್ಯಾಪಾರಿಗಳಿಗೆ ಹಾಗೂ ಬಳಕೆದಾರರಿಗೆ ಪೇಟಿಎಂ ಪೇಮೆಂಟ್ ಬ್ಯಾಂಕ್ ಭರವಸೆ ನೀಡಿದೆ. ಪೇಟಿಎಂ ತನ್ನ ವ್ಯಾಪಾರ ಪಾಲುದಾರರು ಹಿಂದಿನಂತೆಯೇ ಪೇಟಿಎಂನ ಕ್ಯೂಆರ್ ಕೋಡ್‌ಗಳು, ಸೌಂಡ್ ಬಾಕ್ಸ್‌ಗಳಿಂದ ಪ್ರಯೋಜನವನ್ನು ಪಡೆಯುವುದನ್ನು ಮುಂದುವರಿಸಬಹುದು ಎಂದು ಹೇಳಿದೆ.

ಇದೇ 29ರ ಬಳಿಕ ಪೇಟಿಎಂ ಬಳಕೆದಾರರ ಪ್ರೀಪೇಯ್ಡ್ ಪೇಮೆಂಟ್, ವ್ಯಾಲೆಟ್, ಫಾಸ್ಟ್ಯಾಗ್‌ಗಳಿಗೆ ಯಾವುದೇ ಠೇವಣಿ ಅಥವಾ ಟಾಪ್ ಅಪ್‌ಗಳನ್ನು ಸ್ವೀಕರಿಸಬಾರದು ಎಂದು ಪಿಪಿಬಿಎಲ್‌ಗೆ ಆರ್‌ಬಿಐ ಸೂಚಿಸಿತ್ತು.

ನೇರ ತೆರಿಗೆ ಸಂಗ್ರಹ ಶೇ 20ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): 2023–24ರ ಹಣಕಾಸು ವರ್ಷದ ಫೆಬ್ರುವರಿ 10ರವರೆಗೆ ನೇರ ತೆರಿಗೆ ಸಂಗ್ರಹದಲ್ಲಿ ಶೇ 20ರಷ್ಟು ಏರಿಕೆಯಾಗಿದ್ದು, ಒಟ್ಟು ₹15.60 ಲಕ್ಷ ಕೋಟಿ ವರಮಾನ ಸಿಕ್ಕಿದೆ.

ಇದು ಪ್ರಸಕ್ತ ಪೂರ್ಣ ಹಣಕಾಸು ವರ್ಷದ ನೇರ ತೆರಿಗೆಗಳ ಪರಿಷ್ಕೃತ ಬಜೆಟ್ ಅಂದಾಜಿನ ಶೇ 80ರಷ್ಟು ಆಗಿದೆ ಎಂದು ಕೇಂದ್ರ ನೇರ ತೆರಿಗೆಗಳ ಮಂಡಳಿಯು (ಸಿಬಿಡಿಟಿ) ತಿಳಿಸಿದೆ.

2024ರ ಫೆಬ್ರುವರಿ 10ರವರೆಗಿನ ಒಟ್ಟು ನೇರ ತೆರಿಗೆ ಸಂಗ್ರಹವು ₹18.38 ಲಕ್ಷ ಕೋಟಿಯಾಗಿದ್ದು, ಇದು ಹಿಂದಿನ ಅವಧಿಯಲ್ಲಿನ ಒಟ್ಟು ಸಂಗ್ರಹಕ್ಕಿಂತ ಶೇ 17.30ರಷ್ಟು ಹೆಚ್ಚು. ಈ ಮೊತ್ತದಲ್ಲಿ 2023ರ ಏಪ್ರಿಲ್ 1ರಿಂದ 2024ರ ಫೆಬ್ರುವರಿ 10ರವರೆಗೆ ₹2.77 ಲಕ್ಷ ಕೋಟಿ ಮರುಪಾವತಿ (ರೀಫಂಡ್) ಮಾಡಲಾಗಿದೆ. ಹೀಗಾಗಿ ಒಟ್ಟು ಸಂಗ್ರಹವು ₹15.60 ಲಕ್ಷ ಕೋಟಿ ಆಗಿದೆ. ಕಾರ್ಪೊರೇಟ್ ಆದಾಯ ತೆರಿಗೆ (ಸಿಐಟಿ) ಹೆಚ್ಚಳ ದರವು ಶೇ 9.16ರಷ್ಟಿದ್ದರೆ, ವೈಯಕ್ತಿಕ ಆದಾಯ ತೆರಿಗೆ (ಪಿಐಟಿ) ಏರಿಕೆ ದರವು ಶೇ 25.67 ಇದೆ ಎಂದು ತಿಳಿಸಿದೆ.

ಕೊಳ್ಳುಬಾಕತನ; ಉಳಿತಾಯಕ್ಕೆ ಆಘಾತ



ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಯಾವುದೇ ಖರೀದಿ ಮಾಡುವ ಮುನ್ನ ಬಜೆಟ್ ಲೆಕ್ಕಾಚಾರ ಮಾಡಿರಬೇಕು. ಅಳೆದು ತೂಗಿ ಖರ್ಚು ಮಾಡದಿದ್ದರೆ ಬಂದ ದುಡ್ಡೆಲ್ಲಾ ನೀರಿನಂತೆ ಹರಿದುಹೋಗುತ್ತದೆ. ಆದರೆ, ಸಾಮಾನ್ಯವಾಗಿ ಶಾಪಿಂಗ್‌ಗೆ ಹೋದಾಗ ಬಹುತೇಕರು ಸಿಕ್ಕಸಿಕ್ಕ ವಸ್ತುಗಳನ್ನು ಜೇಬು ಖಾಲಿಯಾಗುವ ತನಕ ಕೊಳ್ಳುತ್ತಲೇ ಇರುತ್ತಾರೆ. ಈ ಕೊಳ್ಳುಬಾಕತನವು ದೃಢೀಕರಣ ಪಕ್ಷಪಾತ, ಪೂರ್ವಗ್ರಹಪೀಡಿತ ಪಕ್ಷಪಾತ, ಅವಕಾಶ ಕೈತಪ್ಪುವ ಪಕ್ಷಪಾತ, ಮನಃಸ್ಥಿತಿ ಆಧಾರಿತ ಪಕ್ಷಪಾತ ಸೇರಿದಂತೆ ಹಲವು ಮಾದರಿಯಲ್ಲಿ ಇರುತ್ತದೆ. ಇಂತಹ ಧೋರಣೆಗಳಿಂದ ಹೊರಬಂದು ಉತ್ತಮ ಖರೀದಿ ಮಾಡುವುದು ಹೇಗೆ ಎನ್ನುವುದನ್ನು ಇಲ್ಲಿ ವಿವರವಾಗಿ ತಿಳಿಯೋಣ ಬನ್ನಿ.

ದೃಢೀಕರಣ ಪಕ್ಷಪಾತ: ನಿರ್ದಿಷ್ಟ ಬ್ರ್ಯಾಂಡ್ ಅಥವಾ ಉತ್ಪನ್ನ ಖರೀದಿಸುವಾಗ ಅದರ ಬಗ್ಗೆ ಇರುವ ಸಕಾರಾತ್ಮಕ ವಿಮರ್ಶೆಗಳನ್ನು ಮಾತ್ರ ಗಮನಿಸುತ್ತಿದ್ದೇವೆ ಎಂದರೆ ಅದು ದೃಢೀಕರಣ ಪಕ್ಷಪಾತ ಆಗುತ್ತದೆ. ಉದಾಹರಣೆಗೆ, ನಿಮಗೆ ಯಾವುದೋ ಒಂದು ಸ್ಮಾರ್ಟ್‌ಫೋನ್ ಇಷ್ಟವಾಗಿರುತ್ತದೆ ಎಂದುಕೊಳ್ಳಿ. ಆಗ ಫೋನ್ ಬಗ್ಗೆ ಸಕಾರಾತ್ಮಕ ವಿಮರ್ಶೆಗಳನ್ನು ಮಾತ್ರ ಗಮನಿಸುತ್ತೀರಿ. ನಕಾರಾತ್ಮಕ ವಿಮರ್ಶೆಗಳು ಇದ್ದರೂ ಸಹಿತ ಅದನ್ನು ಗಮನಿಸಲು ಹೋಗುವುದಿಲ್ಲ. ಹೀಗೆ ಮಾಡಿದಾಗ ಅದು ಪಕ್ಷಪಾತದ ಖರೀದಿಯಾಗುತ್ತದೆ. ಯಾವುದೇ ವಸ್ತುವನ್ನು ಕೊಳ್ಳುವ ಮುನ್ನ ಅದರ ಧನಾತ್ಮಕ ಮತ್ತು ಋಣಾತ್ಮಕ ವಿಚಾರಗಳನ್ನು ಸಮಚಿತ್ತದಿಂದ ವಿಮರ್ಶೆ ಮಾಡಿದರೆ ಈ ರೀತಿಯ ಖರೀದಿ ತಪ್ಪಿಸಬಹುದು.

ಪೂರ್ವಗ್ರಹಪೀಡಿತ ಪಕ್ಷಪಾತ: ವಸ್ತುವಿನ ವಾಸ್ತವದ ಬೆಲೆಯ ಬಗ್ಗೆ ಆಲೋಚನೆ ಮಾಡದೆ ರಿಯಾಯಿತಿ ಬೆಲೆ ಕಡೆಗೆ ಹೆಚ್ಚು ಗಮನ ಕೊಡುತ್ತಿದ್ದೀರಿ ಎಂದಾದರೆ ಅದು ಪೂರ್ವಗ್ರಹಪೀಡಿತ ಪಕ್ಷಪಾತ ಆಗುತ್ತದೆ. ಉದಾಹರಣೆಗೆ ಸೋಫಾ ಖರೀದಿಗೆ ನಿಮ್ಮ ಬಜೆಟ್ ಮಿತಿ ₹25 ಸಾವಿರ ಇರುತ್ತದೆ ಎಂದುಕೊಳ್ಳಿ. ರಿಯಾಯಿತಿ ದರದಲ್ಲಿ ಮತ್ತೊಂದು ಸೋಫಾ ₹40 ಸಾವಿರಕ್ಕೆ ಸಿಗುತ್ತದೆ ಎಂದುಕೊಳ್ಳಿ. ಆಗ ಬಜೆಟ್ ಎಷ್ಟಿದೆ ಎಂದು ಮನಗಾಣದೆ ಬಜೆಟ್ ಚೌಕಟ್ಟು ಮೀರಿ ₹40 ಸಾವಿರದ ಸೋಫಾ ಖರೀದಿಸಿದರೆ ಅದು ಪೂರ್ವಗ್ರಹಪೀಡಿತ ಪಕ್ಷಪಾತದ ಕೊಳ್ಳುವಿಕೆಯಾಗುತ್ತದೆ.

ಅವಕಾಶ ಕೈತಪ್ಪುವ ಪಕ್ಷಪಾತ: 60 ಇಂಚಿನ ಸ್ಮಾರ್ಟ್ ಟಿ.ವಿಗೆ ಶೇ 30ರಷ್ಟು ರಿಯಾಯಿತಿ, ಈ ಆಫರ್ ನಾಳೆಗೆ ಅಂತ್ಯ ಎನ್ನುವ ಜಾಹೀರಾತುಗಳನ್ನು ನೀವು ನೋಡಿರಬಹುದು. ಈ ರೀತಿಯ ಮಾರ್ಕೆಟಿಂಗ್ ತಂತ್ರಕ್ಕೆ ಮಾರು ಹೋಗಿ ನೋಡಿದ ಕೂಡಲೇ ಆ ವಸ್ತು ಅಗತ್ಯವೋ, ಇಲ್ಲವೋ ಎನ್ನುವುದನ್ನು ಲೆಕ್ಕಿಸದೆ ಖರೀದಿ ಮಾಡಿದರೆ ಅದು ಕೈತಪ್ಪುವ ಪಕ್ಷಪಾತದ ಖರೀದಿಯಾಗುತ್ತದೆ. ಮುಂದೆಂದೂ ಇಂತಹ ರಿಯಾಯಿತಿ ಸಿಗುವುದೇ ಇಲ್ಲವೇನೋ, ಇದನ್ನು ಕೊಳ್ಳದಿದ್ದರೆ ದೊಡ್ಡ ನಷ್ಟವಾಗುತ್ತದೇನೋ, ಒಳ್ಳೆಯ ಅವಕಾಶ ಕೈತಪ್ಪಿ ಹೋಗುವುದೇನೋ ಎನ್ನುವ ಧಾವಂತವನ್ನು ಸೃಷ್ಟಿಸಿ ಇಲ್ಲಿ ವಸ್ತುಗಳನ್ನು ಬಿಕರಿ ಮಾಡುವ ತಂತ್ರ ಹೆಣೆಯಲಾಗಿರುತ್ತದೆ.

ಮನಃಸ್ಥಿತಿ ಆಧಾರಿತ ಪಕ್ಷಪಾತ: ಉತ್ಪನ್ನಗಳು, ಬ್ರ್ಯಾಂಡ್‌ಗಳು ಹೇಗೆ ವಿಷಯಗಳನ್ನು ಪ್ರಸ್ತುತಪಡಿಸಿವೆ ಎನ್ನುವುದನ್ನು ಆಧರಿಸಿ ಖರೀದಿ ಮಾಡಿದರೆ ಅದು ಮನಃಸ್ಥಿತಿ ಆಧಾರಿತ ಪಕ್ಷಪಾತವಾಗುತ್ತದೆ. ಉದಾಹರಣೆಗೆ ಶೇ 100ರಷ್ಟು ನೈಸರ್ಗಿಕ, ಯಾವುದೇ ರಾಸಾಯನಿಕಗಳಿಲ್ಲ, ರೈತರಿಂದ ನೇರ ಮಾರುಕಟ್ಟೆಗೆ, ಇಂತಹ ಟಿಪ್ಪಣಿಗಳಿಂದ ಪ್ರಭಾವಿತರಾಗಿ ಖರೀದಿ ಮಾಡುವ ದೊಡ್ಡ ಸಂಖ್ಯೆಯ ಜನರಿದ್ದಾರೆ. ಕೇವಲ ಟಿಪ್ಪಣಿಗಷ್ಟೇ ಗಮನ ಕೊಡದೆ ಉತ್ಪನ್ನದ ಕುರಿತ ವಾಸ್ತವ ಅರಿತರೆ ಉತ್ತಮ ಖರೀದಿ ಸಾಧ್ಯವಾಗುತ್ತದೆ.

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)



ಅಲ್ಪ ಕುಸಿತ ದಾಖಲಿಸಿದ ಸೂಚ್ಯಂಕಗಳು

ಫೆಬ್ರುವರಿ 9ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಅಲ್ಪ ಮೊತ್ತದ ಕುಸಿತ ದಾಖಲಿಸಿವೆ.

71,595 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.67ರಷ್ಟು ಕುಸಿದಿದೆ. 21,782 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.32ರಷ್ಟು ತಗ್ಗಿದೆ. ಅಮೆರಿಕದ ಫೆಡರಲ್ ಬ್ಯಾಂಕ್ ಮತ್ತು ಆರ್‌ಬಿಐ ಬಡ್ಡಿದರ ಇಳಿಕೆ ಸದ್ಯಕ್ಕಿಲ್ಲ ಎಂಬ ಸೂಚನೆ ಕೊಟ್ಟಿದ್ದು, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಷೇರುಗಳ ಮಾರಾಟ ಭರಾಟೆ ಸೇರಿ ಹಲವು ಅಂಶಗಳು ಷೇರು ಮಾರುಕಟ್ಟೆಯ ಕುಸಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 5ರಷ್ಟು ಜಿಗಿದಿದೆ. ಹೆಲ್ತ್ ಕೇರ್ ಸೂಚ್ಯಂಕ ಶೇ 4.4, ಆಯಿಲ್ ಆ್ಯಂಡ್ ಗ್ಯಾಸ್ ಸೂಚ್ಯಂಕ ಶೇ 4, ಫಾರ್ಮಾ ಸೂಚ್ಯಂಕ ಶೇ 3.9, ಫಾರ್ಮಾ ಸೂಚ್ಯಂಕ ಶೇ 3.6 ಮತ್ತು ಮಾಧ್ಯಮ ಸೂಚ್ಯಂಕ ಶೇ 3ರಷ್ಟು ಹೆಚ್ಚಳವಾಗಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹5,871.45 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹5,325.76 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಎಲ್‌ಐಸಿ, ಅದಾನಿ ಗ್ರೀನ್ ಎನರ್ಜಿ, ಇಂಡಿಯನ್ ಆಯಿಲ್ ಕಾರ್ಪೊರೇಷನ್, ಎಸ್‌ಬಿಐ, ಮ್ಯಾನ್ ಕೈಂಡ್ ಫಾರ್ಮಾ ಮತ್ತು ಭಾರತ್ ಪೆಟ್ರೋಲಿಯಂ ಶೇ 10ಕ್ಕಿಂತ ಹೆಚ್ಚು ಗಳಿಕೆ ಕಂಡಿವೆ. ಯುಪಿಎಲ್, ಪೇಟಿಎಂ, ನೈಕಾ, ಐಟಿಸಿ ಮತ್ತು ಬಂಧನ್ ಬ್ಯಾಂಕ್ ಕುಸಿತ ಕಂಡಿವೆ.

ಬಿಎಸ್‌ಇ ಮಿಡ್ ಕ್ಯಾಪ್‌ನಲ್ಲಿ ಇಂಡಿಯನ್ ಓವರ್ ಸೀಸ್ ಬ್ಯಾಂಕ್, ನ್ಯೂ ಇಂಡಿಯಾ ಅಶೂರೆನ್ಸ್ ಕಂಪನಿ, ಯುಕೋ ಬ್ಯಾಂಕ್, ಜೀ ಎಂಟರ್ ಟೇನ್ಮೆಂಟ್ ಎಂಟರ್‌ಪ್ರೈಸಸ್, ಆಯಿಲ್ ಇಂಡಿಯಾ, ಒರೆಕಲ್ ಫೈನಾನ್ಸಿಯಲ್ ಸರ್ವಿಸಸ್ ಸಾಫ್ಟ್‌ವೇರ್, ಮ್ಯಾಕ್ಸ್ ಹೆಲ್ತ್ ಕೇರ್ ಇನ್‌ಸ್ಟಿಟ್ಯೂಟ್, ಕುಮಿನ್ಸ್ ಇಂಡಿಯಾ, ಮ್ಯಾಕ್ಸ್ ಫೈನಾನ್ಸಿಯಲ್ ಸರ್ವಿಸಸ್, ಕೆನರಾ ಬ್ಯಾಂಕ್ ಮತ್ತು ವೋಡಾಫೋನ್ ಐಡಿಯಾ ಜಿಗಿದಿವೆ.

ಎಂಡುರೆನ್ಸ್ ಟೆಕ್ನಾಲಜೀಸ್, ಬ್ಯಾಂಕ್ ಆಫ್ ಇಂಡಿಯಾ, ರಾಮ್ಕೋ ಸಿಮೆಂಟ್ಸ್, ಎಪಿಎಲ್ ಅಪೋಲೊ ಟ್ಯೂಬ್ಸ್, ಯುಎನ್‌ಒ ಮಿಂದಾ, ನೆರೋಲ್ಯಾಕ್ ಪೇಂಟ್ಸ್, ಮತ್ತು ಅರುಬಿಂದೋ ಫಾರ್ಮಾ ಕುಸಿದಿವೆ.

ಮಾರುಕಟ್ಟೆ ಮೌಲ್ಯದ ಆಧಾರದಲ್ಲಿ ನೋಡಿದಾಗ ಕಳೆದ ವಾರ ಎಚ್‌ಡಿಎಫ್‌ಸಿ ಬ್ಯಾಂಕ್ ಹೆಚ್ಚು ಮಾರುಕಟ್ಟೆ ಮೌಲ್ಯವನ್ನು ಕಳೆದುಕೊಂಡಿದ್ದು ನಂತರದಲ್ಲಿ ಐಟಿಸಿ, ಏರ್‌ಟೆಲ್ ಮತ್ತು ಕೋಟಕ್ ಮಹೀಂದ್ರ ಬ್ಯಾಂಕ್ ಇವೆ. ಮತ್ತೊಂದೆಡೆ ಎಸ್‌ಬಿಐ, ಟಿಸಿಎಸ್, ಸನ್ ಫಾರ್ಮಾ ಮಾರುಕಟ್ಟೆ ಮೌಲ್ಯ ಹೆಚ್ಚಿಸಿಕೊಂಡಿವೆ.

ಮುನ್ನೋಟ: ಈ ವಾರ ಬಿಎಎಸ್‌ಎಫ್ ಇಂಡಿಯಾ, ದಿ ಅನೂಪ್ ಎಂಜಿನಿಯರಿಂಗ್ ಲಿಮಿಟೆಡ್, ಅಂಜನಿ ಫುಡ್ಸ್ ಲಿಮಿಟೆಡ್, ಬಿನ್ನಿ ಮಿಲ್ಸ್ ಲಿಮಿಟೆಡ್, ಸೆರಾ ಸ್ಯಾನಿಟರಿ, ಫೋರ್ಸ್ ಮೋಟರ್ಸ್, ಎಚ್‌ಎಎಲ್, ಎಸ್‌ಎಐಎಲ್ ಸೇರಿ ಕೆಲ ಕಂಪನಿಗಳು ತ್ರೈಮಾಸಿಕ ವರದಿ ಪ್ರಕಟಿಸುತ್ತಿವೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ರೈತರ ನೋಂದಣಿಯಲ್ಲಿ ಅಕ್ರಮ: ಆರು ಸಿಬ್ಬಂದಿ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಧಿಕೃತ ಉಪಕರಣಗಳನ್ನು ಬಳಸಿ ರೈತರ ನೋಂದಣಿ ಮಾಡುವ ಮೂಲಕ ಅಕ್ರಮ ಎಸಗಿದ್ದ ಆರೋಪದ ಮೇಲೆ ಮಂಡ್ಯ ಮತ್ತು ಹಾಸನ ಜಿಲ್ಲೆಗಳ ಆರು ಕೊಬ್ಬರಿ ಖರೀದಿ ಕೇಂದ್ರಗಳ ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ.

ಮಂಡ್ಯ ಜಿಲ್ಲೆಯ ಪಾಂಡವಪುರ ಖರೀದಿ ಕೇಂದ್ರದ ಹಿರಿಯ ಸಹಾಯಕ ಲಿಂಗಣ್ಣ ಜಮಖಂಡಿ, ಕೆ.ಆರ್. ಪೇಟೆ ಖರೀದಿ ಕೇಂದ್ರದ ಕಿರಿಯ ಸಹಾಯಕ ಮೋನೀಶ್ ಗೌಡ, ಕಿಕ್ಕೇರಿ ಖರೀದಿ ಕೇಂದ್ರದ ಹಿರಿಯ ಸಹಾಯಕ ಮಂಜುನಾಥ ರಾಜೇ ಅರಸ್, ಹಾಸನ ಜಿಲ್ಲೆಯ ಶ್ರವಣ ಬೆಳಗೊಳ ಖರೀದಿ ಕೇಂದ್ರದ ಕಿರಿಯ ಸಹಾಯಕ ಹುಸೇನ್ ಸಾಬ್ ನದಾಫ್, ಜಾವಗಲ್ ಖರೀದಿ ಕೇಂದ್ರದ ಹಿರಿಯ ಸಹಾಯಕ ವೆಂಕಟರೆಡ್ಡಿ ಪಾಟೀಲ್ ಮತ್ತು ಗಂಡಸಿ ಖರೀದಿ ಕೇಂದ್ರದ ಕಿರಿಯ ಸಹಾಯಕ ದಿವಾಕರ ಕೆ. ಅಮಾನತುಗೊಂಡವರು.

‘ಆರು ಮಂದಿ ಸಿಬ್ಬಂದಿ ಅನಧಿಕೃತ ಉಪಕರಣಗಳನ್ನು ಬಳಸಿಕೊಂಡು ರೈತರ ಹೆಚ್ಚುವರಿ ನೋಂದಣಿ ಮಾಡಿರುವುದು ಕಂಡುಬಂದಿದೆ. ಅವರನ್ನು ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರು ಅಮಾನತು ಮಾಡಿದ್ದಾರೆ’ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

ಹಲವು ಕೇಂದ್ರಗಳಲ್ಲಿ ಈ ರೀತಿಯ ಅಕ್ರಮ ನೋಂದಣಿ ನಡೆಸಿರುವ ದೂರುಗಳಿವೆ. ಆದ್ದರಿಂದ ಎಲ್ಲ ಕೇಂದ್ರಗಳ ರೈತರ ನೋಂದಣಿ ವಿವರ ಸಲ್ಲಿಸಲು ಸೂಚಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಖರೀದಿ ಮಿತಿ ಹೆಚ್ಚಳಕ್ಕೆ ಪತ್ರ: ‘ರಾಜ್ಯದಲ್ಲಿ 2.5 ಲಕ್ಷ ಟನ್ ಕೊಬ್ಬರಿ ಉತ್ಪಾದನೆಯಾಗುತ್ತದೆ. ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ 65,000 ಟನ್ ಖರೀದಿಗೆ ಮಾತ್ರ ಅನುಮತಿ ನೀಡಲಾಗಿದೆ. ಖರೀದಿಯ ಮಿತಿಯನ್ನು ಶೇಕಡ 25ರಷ್ಟು ಹೆಚ್ಚಿಸುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ’ ಎಂದು ಸಚಿವರು ತಿಳಿಸಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹585
12 ಕ್ಕೆ	₹78
ಮೈಸೂರು	
100ಕ್ಕೆ	₹587

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹241-435

ದ್ವಿತಳಿ (ಬಿ.ವಿ) ₹253-565

ಒಎನ್‌ಜಿಸಿ ಲಾಭ: ಶೇ 14ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮತ್ತು ನೈಸರ್ಗಿಕ ಅನಿಲ ನಿಗಮ (ಒಎನ್‌ಜಿಸಿ) 2023–24ರ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದ ನಿವ್ವಳ ಲಾಭದಲ್ಲಿ ಶೇ14ರಷ್ಟು ಇಳಿಕೆ ಕಂಡಿದೆ.

ಕಚ್ಚಾ ತೈಲ ದರ ಇಳಿಕೆ ಮತ್ತು ಉತ್ಪಾದನೆ ಕಡಿಮೆ ಆಗಿರುವುದರಿಂದ ಲಾಭದಲ್ಲಿ ಇಳಿಕೆ ಆಗಿದೆ ಎಂದು ಕಂಪನಿ ಹೇಳಿದೆ.

ಕಂಪನಿಯು 2022–23ರ ಮೂರನೇ ತ್ರೈಮಾಸಿಕದಲ್ಲಿ ₹11,045 ಕೋಟಿ ನಿವ್ವಳ ಲಾಭ ಗಳಿಸಿತ್ತು. ಈ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ₹9,536 ಕೋಟಿ ಲಾಭ ಗಳಿಸಿದೆ. ಒಟ್ಟಾರೆ ಲಾಭದಲ್ಲಿ ಶೇ13.7ರಷ್ಟು ಇಳಿಕೆ ಕಂಡಿದೆ ಎಂದು ಕಂಪನಿ ತಿಳಿಸಿದೆ.

ಈ ವರ್ಷದ ಮೂರನೇ ತ್ರೈಮಾಸಿಕದಲ್ಲಿ ಕಚ್ಚಾ ತೈಲ ಬೆಲೆ ಶೇ 6.4 ಮತ್ತು ಅನಿಲ ಬೆಲೆ ಶೇ 24.2ರಷ್ಟು ಇಳಿಕೆಯಾಗಿದ್ದರೆ, ಉತ್ಪಾದನೆಯು ಕ್ರಮವಾಗಿ ಶೇ 3.3 ಮತ್ತು ಶೇ 4.3ರಷ್ಟು ಕಡಿಮೆ ಆಗಿದೆ. ಒಟ್ಟು ವರಮಾನವು ₹34,789 ಕೋಟಿ (ಶೇ 10ರಷ್ಟು) ಕುಸಿತವಾಗಿದೆ.

ಅಂಕಿ ಅಂಶಗಳು

24% ಕಂಪನಿಯ ನಿವ್ವಳ ಲಾಭದಲ್ಲಿ ಪ್ರಸಕ್ತ ಹಣಕಾಸು ವರ್ಷದ ಮೊದಲ ಒಂಬತ್ತು ತಿಂಗಳಲ್ಲಿ ಆಗಿರುವ ಕುಸಿತದ ಪ್ರಮಾಣ

₹29,767 ಕಂಪನಿಯು ಪ್ರಸಕ್ತ ಹಣಕಾಸು ವರ್ಷದ ಮೊದಲ ಒಂಬತ್ತು ತಿಂಗಳಲ್ಲಿ ಪಡೆದಿರುವ ಲಾಭ

ಅಮೆಜಾನ್‌ನ 1.2 ಕೋಟಿ ಷೇರು ಮಾರಾಟ

ಸಿಯಾಟಲ್ (ಎಪಿ): ಅಮೆಜಾನ್‌ನ ₹16 ಸಾವಿರ ಕೋಟಿಗಿಂತ ಹೆಚ್ಚಿನ ಮೌಲ್ಯದ 1.2 ಕೋಟಿ ಷೇರುಗಳನ್ನು ಮಾರಾಟ ಮಾಡಲಾಗಿದೆ ಎಂದು ಕಂಪನಿಯ ಕಾರ್ಯಕಾರಿ ಅಧ್ಯಕ್ಷ ಜೆಫ್ ಬೆಜೋಸ್ ತಿಳಿಸಿದ್ದಾರೆ.

ಫೆಬ್ರುವರಿ 7 ಮತ್ತು 8ರಂದು 1,19,97,698 ಸಾಮಾನ್ಯ ಷೇರುಗಳ ಮಾರಾಟದ ಕುರಿತು ಅಮೆರಿಕದ ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಕಮಿಷನ್‌ಗೆ ಬೆಜೋಸ್ ತಿಳಿಸಿದ್ದಾರೆ.

ಕೇಂದ್ರ ಸರ್ಕಾರಕ್ಕೆ ಎಂ.ಬಿ.ಪಾಟೀಲ ಪತ್ರ

‘ವಿಐಎಸ್‌ಪಿ ಮುಚ್ಚುವ ನಿರ್ಧಾರ ಮರುಪರಿಶೀಲಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಸ್ಥಾವರ (ವಿಐಎಸ್‌ಪಿ) ಮುಚ್ಚುವ ನಿರ್ಧಾರ ಮರುಪರಿಶೀಲಿಸಬೇಕು’ ಎಂದು ಕೇಂದ್ರ ಉಕ್ಕು ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರಿಗೆ ಕೈಗಾರಿಕಾ ಸಚಿವ ಎಂ. ಬಿ. ಪಾಟೀಲ ಪತ್ರ ಬರೆದು ಒತ್ತಾಯಿಸಿದ್ದಾರೆ.

ವಿಐಎಸ್‌ಪಿ ಖಾಸಗೀಕರಣಗೊಳಿಸಲು ಷೇರು ವಿಕ್ರಯಕ್ಕೆ ಮುಂದಾಗಿದ್ದ ಭಾರತೀಯ ಉಕ್ಕು ಪ್ರಾಧಿಕಾರದ (ಎಸ್‌ಎಐಎಲ್) ಪ್ರಯತ್ನವು ವಿಫಲವಾಗಿರುವುದನ್ನು ಸಿಂಧಿಯಾ ಅವರ ಗಮನಕ್ಕೆ ಸಚಿವರು ತಂದಿದ್ದಾರೆ.

1989ರವರೆಗೆ ಕರ್ನಾಟಕದ ಸರ್ಕಾರಿ ವಲಯದ ಉದ್ಯಮವಾಗಿದ್ದ ವಿಐಎಸ್‌ಪಿ, ಇತ್ತೀಚಿನ ವರ್ಷಗಳಲ್ಲಿ ಎಸ್‌ಎಐಎಲ್‌ನ ಅಸಮರ್ಪಕ ಬಂಡವಾಳ ಹೂಡಿಕೆ ನೀತಿಯಿಂದ ಕಾರ್ಯಾಚರಣೆಯ ಸವಾಲುಗಳನ್ನು ಎದುರಿಸುತ್ತಿದೆ. ಮೂರು ದಶಕಗಳಲ್ಲಿ ಉಕ್ಕು ಪ್ರಾಧಿಕಾರದ ಇತರ ಘಟಕಗಳಲ್ಲಿನ ಗಮನಾರ್ಹ ಹೂಡಿಕೆಗೆ ಹೋಲಿಸಿದರೆ, ವಿಐಎಸ್‌ಪಿಯಲ್ಲಿ ದುರಸ್ತಿ ಮತ್ತು ನವೀಕರಣ ಉದ್ದೇಶಗಳಿಗೆ ಕೇವಲ ₹157 ಕೋಟಿ ವೆಚ್ಚ ಮಾಡಲಾಗಿದೆ. ರಾಮದುರ್ಗದಲ್ಲಿನ 497 ಎಕರೆ ಪ್ರದೇಶದಲ್ಲಿನ ಕಬ್ಬಿಣದ ಅದಿರು ಗಣಿಗಳು ಮತ್ತು ಬಳ್ಳಾರಿ ಜಿಲ್ಲೆಯಲ್ಲಿನ ಗಣಿಗಳು ದಶಕಗಳ ಕಾಲ ವಿಐಎಸ್‌ಪಿಗೆ ಅದಿರು ಪೂರೈಸುವ ಸಾಮರ್ಥ್ಯ ಹೊಂದಿವೆ.



ಎಂ.ಬಿ ಪಾಟೀಲ

2022ರಲ್ಲಿ ನಡೆದಿದ್ದ ವಿಐಎಸ್‌ಪಿಯ ಷೇರು ವಿಕ್ರಯಕ್ಕೆ ಬಿಡ್‌ದಾರರ ನಿರಾಸಕ್ತಿ ಫಲವಾಗಿ ಹಿನ್ನಡೆ ಉಂಟಾಗಿದೆ. ಈ ಕಾರಣಕ್ಕೆ ಈ ಘಟಕ ಮುಚ್ಚುವ ಸಾಧ್ಯತೆ ಬಗ್ಗೆ ಕಾರ್ಮಿಕರ ಸಂಘಟನೆಯು ತೀವ್ರ ಕಳವಳ ವ್ಯಕ್ತಪಡಿಸಿದೆ’ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ವಿಐಎಸ್‌ಪಿಯ ತಯಾರಿಕಾ ಸಾಮರ್ಥ್ಯ, ಸ್ಥಳೀಯವಾಗಿ ಕಬ್ಬಿಣ ಅದಿರಿನ ಲಭ್ಯತೆ ಮತ್ತು ಕಾರ್ಮಿಕರ ಹಿತಾಸಕ್ತಿ ದೃಷ್ಟಿಯಿಂದ ಈ ವಿಷಯದಲ್ಲಿ ಮಧ್ಯಪ್ರವೇಶಿಸಬೇಕು. ಮೈಸೂರು ರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1918ರಲ್ಲಿ ಸರ್ ಎಂ. ವಿಶ್ವೇಶ್ವರಯ್ಯ ಅವರ ಮಾರ್ಗದರ್ಶನದಲ್ಲಿ ಆರಂಭಿಸಿದ್ದ ಈ ಉಕ್ಕು ಸ್ಥಾವರನ್ನು ಮುಚ್ಚುವ ನಿರ್ಧಾರ ಕೈಬಿಡುವಂತೆ ಉಕ್ಕು ಪ್ರಾಧಿಕಾರಕ್ಕೆ ನಿರ್ದೇಶನ ನೀಡಬೇಕು. ಸ್ಥಾವರದ ಪುನಶ್ಚೇತನಕ್ಕೆ ಅಗತ್ಯವಾಗಿರುವ ಬಂಡವಾಳ ಹೂಡಿಕೆ ಮಾಡಬೇಕು’ ಎಂದೂ ಆಗ್ರಹಿಸಿದ್ದಾರೆ.

ಪ್ರಾಧ್ಯಾಪಕಿ ವಿರುದ್ಧ ತನಿಖೆಗೆ ಸಮಿತಿ ರಚನೆ

ಕೋಯಿಕ್ಕೋಡ್ (ಕೇರಳ) (ಪಿಟಿಐ): ಮಹಾತ್ಮ ಗಾಂಧಿಯನ್ನು ಹತ್ಯೆ ಮಾಡಿದ ನಾಥೂರಾಂ ಗೋಡ್ಸೆಯನ್ನು ವೈಭವೀಕರಿಸಿ ಫೇಸ್‌ಬುಕ್‌ನಲ್ಲಿ ಕಮೆಂಟ್ ಮಾಡಿರುವ ಪ್ರಾಧ್ಯಾಪಕಿ ವಿರುದ್ಧ ತನಿಖೆ ನಡೆಸಲು ಕ್ಯಾಲಿಕಟ್‌ನ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ- (ಎನ್‌ಐಟಿ) ಸಮಿತಿಯನ್ನು ರಚಿಸಿದೆ.

‘ಸಮಿತಿಯ ವರದಿ ಆಧರಿಸಿ ಪ್ರೊ.ಎ.ಶೈಜಾ ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಮಹಾತ್ಮ ಗಾಂಧಿಯ ತತ್ವ ಮತ್ತು ಸಿದ್ಧಾಂತಗಳಿಗೆ ವಿರುದ್ಧವಾದ ಹೇಳಿಕೆಯನ್ನು ಎನ್‌ಐಟಿ ಯಾವತ್ತಿಗೂ ಬೆಂಬಲಿಸುವುದಿಲ್ಲ’ ಎಂದು ಎನ್‌ಐಟಿ ಶನಿವಾರ ತಿಳಿಸಿದೆ.



ಅಸ್ಸಾಂನ ಕಾಮರೂಪ್ ಜಿಲ್ಲೆಯ ರಂಗಿಯಾದಲ್ಲಿ ಭಾನುವಾರ ನಡೆದ ಶ್ರೀಮಂತ ಶಂಕರದೇವ ಸಂಘದ ಸಾಂಸ್ಕೃತಿಕ ರ‍್ಯಾಲಿಯಲ್ಲಿ ಭಕ್ತರು ಭಾಗವಹಿಸಿದ್ದರು– ಪಿಟಿಐ ಚಿತ್ರ

ರಾಜ್ಯಸಭಾ ಚುನಾವಣೆ: ಸಾಗರಿಕಾ ಘೋಷ್, ಸುಷ್ಮಿತಾ ದೇವ್ ಕಣಕ್ಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಶ್ಚಿಮ ಬಂಗಾಳ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯಲಿರುವ ಚುನಾವಣೆಗೆ ಪತ್ರಕರ್ತೆ ಸಾಗರಿಕಾ ಘೋಷ್ ಮತ್ತು ಮಾಜಿ ಸಂಸದೆ ಸುಷ್ಮಿತಾ ದೇವ್ ಅವರು ಟಿಎಂಸಿ ಅಭ್ಯರ್ಥಿಗಳಾಗಿ ಕಣಕ್ಕೆ ಇಳಿಯಲಿದ್ದಾರೆ. ಪಕ್ಷವು ಭಾನುವಾರ ಈ ವಿಷಯ ಪ್ರಕಟಿಸಿದೆ.

ಟಿಎಂಸಿಯ ನಾಲ್ವರು ರಾಜ್ಯಸಭಾ ಸದಸ್ಯರು ನಿವೃತ್ತರಾಗುತ್ತಿದ್ದಾರೆ. ಈ ಪೈಕಿ ಮೊಹಮ್ಮದ್ ನದೀಮುಲ್ ಹಕ್ ಅವರಿಗೆ ಪಕ್ಷವು ಟಿಕೆಟ್ ನೀಡಿದೆ. ಲೋಕಸಭೆಯ ಮಾಜಿ ಸದಸ್ಯೆ ಮಮತಾ ಬಾಲಾ ಠಾಕೂರ್ ಅವರು ಟಿಎಂಸಿಯ ನಾಲ್ಕನೇ ಅಭ್ಯರ್ಥಿಯಾಗಿ ಕಣದಲ್ಲಿ ಇರಲಿದ್ದಾರೆ.



ಸಾಗರಿಕಾ ಘೋಷ್

ಹಾಲಿ ಸದಸ್ಯರಾದ ಅಬೀರ್ ರಂಜನ್ ಬಿಸ್ವಾಸ್, ಸುಭಾಶಿಷ್ ಚಕ್ರವರ್ತಿ ಮತ್ತು ಡಾ. ಶಂತನು ಸೇನ್ ಅವರಿಗೆ ಇನ್ನೊಂದು ಅವಧಿಯನ್ನು ಪಕ್ಷವು ನಿರಾಕರಿಸಿದೆ.

ಪಶ್ಚಿಮ ಬಂಗಾಳ ಕೋಟಾದಿಂದ ರಾಜ್ಯಸಭೆ ಸದಸ್ಯರಾಗಿದ್ದ ಕಾಂಗ್ರೆಸ್ಸಿನ ಅಭಿಷೇಕ್ ಮನು ಸಿಂಘ್ವಿ ಅವರೂ ನಿವೃತ್ತರಾಗುತ್ತಿದ್ದಾರೆ. ನಾಲ್ಕೂ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳುವ ಸಂಖ್ಯಾಬಲ ಟಿಎಂಸಿ ಪಕ್ಷಕ್ಕೆ ಇದೆ. ಕಾಂಗ್ರೆಸ್ಸಿಗೆ ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ಸಂಖ್ಯಾಬಲ ಇಲ್ಲ. ಐದನೇ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವ ಅವಕಾಶ ಬಿಜೆಪಿಗೆ ಇದೆ.

ಬಿಜೆಪಿ ಅಭ್ಯರ್ಥಿಗಳ ಪಟ್ಟಿಯಲ್ಲಿ ಆರ್.ಪಿ.ಎನ್. ಸಿಂಗ್, ತ್ರಿವೇದಿ

ನವದೆಹಲಿ (ಪಿಟಿಐ): ರಾಜ್ಯಸಭಾ ಚುನಾವಣೆಗೆ ಬಿಜೆಪಿ 14 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದೆ. ಕೇಂದ್ರದ ಮಾಜಿ ಸಚಿವ ಆರ್.ಪಿ.ಎನ್. ಸಿಂಗ್, ಉತ್ತರಾಖಂಡ ಬಿಜೆಪಿ ಘಟಕದ ಅಧ್ಯಕ್ಷ ಮಹೇಂದ್ರ ಭಟ್ ಅವರ ಹೆಸರು ಅಭ್ಯರ್ಥಿಗಳ ಪಟ್ಟಿಯಲ್ಲಿ ಇದೆ.

ರಾಜ್ಯಸಭೆಯ ಹಾಲಿ ಸದಸ್ಯ ಸುಧಾಂಶು ತ್ರಿವೇದಿ ಅವರನ್ನು ಪಕ್ಷವು ಮತ್ತೆ ಕಣಕ್ಕೆ ಇಳಿಸುತ್ತಿದೆ. ರಾಜ್ಯಸಭೆಯ ಸದಸ್ಯತ್ವದ ಅವಧಿ ಪೂರ್ಣಗೊಳ್ಳುತ್ತಿರುವ ಕೇಂದ್ರ ಸಚಿವರಲ್ಲಿ ಯಾರೊಬ್ಬರ ಹೆಸರೂ ಪಟ್ಟಿಯಲ್ಲಿ ಇಲ್ಲ. ಇವರಲ್ಲಿ ಹೆಚ್ಚಿನವರು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಸಾಧ್ಯತೆ ಇದೆ.

ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್, ಪಕ್ಷದ ಮುಖ್ಯವಕ್ತಾರ ಹಾಗೂ ಮಾಧ್ಯಮ ವಿಭಾಗದ ಮುಖ್ಯಸ್ಥ ಅನಿಲ್ ಬಲೂನಿ ಅವರ ಹೆಸರು ಪಟ್ಟಿಯಲ್ಲಿಲ್ಲ. ಇವರಿಬ್ಬರೂ ಲೋಕಸಭಾ ಚುನಾವಣೆಯಲ್ಲಿ ಕಣಕ್ಕೆ ಇಳಿಯುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ. ಪಕ್ಷವು ಇನ್ನೂ ಹಲವು ಅಭ್ಯರ್ಥಿಗಳ ಹೆಸರನ್ನು ಘೋಷಿಸಬೇಕಿದೆ.

ಭಾನುವಾರ ಬಿಡುಗಡೆ ಆಗಿರುವ ಪಟ್ಟಿಯಲ್ಲಿ ಬಿಹಾರದ ಹಿರಿಯ ನಾಯಕ ಸುಶೀಲ್ ಕುಮಾರ್ ಮೋದಿ ಅವರ ಹೆಸರು ಇಲ್ಲ. ಬಿಹಾರ ವಿಧಾನಸಭೆಯಿಂದ ರಾಜ್ಯಸಭೆಗೆ ಆರು ಮಂದಿಯನ್ನು ಚುನಾಯಿಸಬೇಕಿದೆ. ಎನ್‌ಡಿಎ ಮೈತ್ರಿಕೂಟ ಹಾಗೂ ವಿರೋಧ ಪಕ್ಷಗಳ ಮೈತ್ರಿಕೂಟವು ತಲಾ ಮೂರು ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಇದೆ.

ಬಿಜೆಪಿಯ ಮಿತ್ರಪಕ್ಷವಾಗಿರುವ ಜೆಡಿ(ಯು) ಒಂದು ಸ್ಥಾನಕ್ಕೆ ಅಭ್ಯರ್ಥಿಯನ್ನು ಘೋಷಿಸುವ ನಿರೀಕ್ಷೆ ಇದೆ. ಬಿಜೆಪಿಯು ಕಣಕ್ಕೆ ಇಳಿಸುತ್ತಿರುವ ಆರ್.ಪಿ.ಎನ್. ಸಿಂಗ್ ಅವರು ರಾಜಕೀಯವಾಗಿ ಪ್ರಬಲವಾಗಿರುವ ಕುರ್ಮಿ ಸಮುದಾಯಕ್ಕೆ ಸೇರಿದವರು. ಇವರು ಬಿಜೆಪಿ ಸೇರುವ ಮೊದಲು ಕಾಂಗ್ರೆಸ್ಸಿನಲ್ಲಿ ಇದ್ದರು.

ಬಿಜೆಪಿಯ ಹರಿಯಾಣ ಘಟಕದ ಮಾಜಿ ಅಧ್ಯಕ್ಷ ಸುಭಾಷ್ ಬರಾಲಾ ಅವರು ಆ ರಾಜ್ಯದಿಂದ ಅಭ್ಯರ್ಥಿಯಾಗಿದ್ದಾರೆ. 15 ರಾಜ್ಯಗಳ ವಿಧಾನಸಭೆಗಳಿಂದ ರಾಜ್ಯಸಭೆಯ 56 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ, ಫೆಬ್ರುವರಿ 27ಕ್ಕೆ ಮತದಾನ ನಿಗದಿಯಾಗಿದೆ.

ರಣಜಿ ಕ್ರಿಕೆಟ್: ತಮಿಳುನಾಡಿಗೆ ಕಠಿಣ ಗುರಿ; ವೈಶಾಖ ಮಿಂಚು

ಮಯಂಕ್ ಬಳಗಕ್ಕೆ ಜಯದ ಅವಕಾಶ

ಪ್ರಜಾವಾಣಿ ವಾರ್ತೆ

ಚೆನ್ನೈ: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ಇಲ್ಲಿ ನಡೆಯುತ್ತಿರುವ ತಮಿಳುನಾಡು ವಿರುದ್ಧದ ರಣಜಿ ಟ್ರೋಫಿ ಪಂದ್ಯದಲ್ಲಿ ಜಯದ ಹಾದಿಯಲ್ಲಿ ಸಾಗಿದೆ.

ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಸಿ ಗುಂಪಿನ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 215 ರನ್‌ಗಳ ದೊಡ್ಡ ಮುನ್ನಡೆ ಪಡೆದ ಕರ್ನಾಟಕ ಎರಡನೇ ಇನಿಂಗ್ಸ್‌ನಲ್ಲಿ 139 ರನ್‌ಗಳಿಗೆ ಕುಸಿಯಿತು.

ಆದರೆ, 355 ರನ್‌ಗಳ ಗುರಿ ನೀಡಿರುವುದರಿಂದ ಗೆಲುವಿನ ಅವಕಾಶ ಮಯಂಕ್ ಬಳಗಕ್ಕೆ ಹೆಚ್ಚಿದೆ. ಎರಡನೇ ಇನಿಂಗ್ಸ್ ಆರಂಭಿಸಿರುವ ತಮಿಳುನಾಡು ತಂಡವು ದಿನದಾಟದ ಮುಕ್ತಾಯಕ್ಕೆ 1 ವಿಕೆಟ್‌ಗೆ 36 ರನ್ ಗಳಿಸಿದೆ.

ಗೆಲ್ಲಲು ಇನ್ನೂ 319 ರನ್‌ಗಳು ಬೇಕು. ನಾಲ್ಕನೇ ದಿನದ ಪಿಚ್‌ನಲ್ಲಿ ಇದು ಕಠಿಣ ಸವಾಲಾಗಿದೆ. ಆತಿಥೇಯರು ಡ್ರಾ ಮಾಡಿಕೊಳ್ಳಲೂ ಪ್ರಯತ್ನಿಸಬಹುದು.

ತಮಿಳುನಾಡಿನ ಆರಂಭಿಕ ಬ್ಯಾಟರ್ ಜಗದೀಶನ್ ಅವರ ವಿಕೆಟ್ ಅನ್ನು ವೈಶಾಖ ವಿಜಯಕುಮಾರ್ ಗಳಿಸಿದರು. ಕ್ರೀಸ್‌ನಲ್ಲಿ ವಿಮಲ್ ಕುಮಾರ್ (ಬ್ಯಾಟಿಂಗ್ 16) ಮತ್ತು ಪ್ರದೋಷ್ ಪಾಲ್ ಬ್ಯಾಟಿಂಗ್ 10) ಇದ್ದಾರೆ.

ವೈಶಾಖ ಅವರು ಮೊದಲ ಇನಿಂಗ್ಸ್‌ನಲ್ಲಿಯೂ ನಾಲ್ಕು ವಿಕೆಟ್ ಗಳಿಸಿದರು. ಶನಿವಾರ ದಿನದಾಟದ ಮುಕ್ತಾಯಕ್ಕೆ ತಮಿಳುನಾಡು ತಂಡವು 7 ವಿಕೆಟ್‌ಗಳಿಗೆ 129 ರನ್ ಗಳಿಸಿತ್ತು. ಮೂರನೇ ದಿನದಾಟದ ಬೆಳಿಗ್ಗೆ ಈ ಮೊತ್ತಕ್ಕೆ ಆತಿಥೇಯ ಬ್ಯಾಟರ್‌ಗಳು 22 ರನ್ ಸೇರಿಸಿದರು. ಉಳಿದ ಮೂರು ವಿಕೆಟ್‌ಗಳನ್ನೂ ವೈಶಾಖ ತಮ್ಮ ಬುಟ್ಟಿಗೆ ಹಾಕಿಕೊಂಡರು.

ವಿದ್ವತ್ ಕಾವೇರಪ್ಪ ಅವರು ಇನಿಂಗ್ಸ್‌ನಲ್ಲಿ 16 ಓವರ್ ಬೌಲಿಂಗ್ ಮಾಡಿ 14 ರನ್ ನೀಡಿ ಒಂದು ವಿಕೆಟ್ ಗಳಿಸಿದರು.


ವೈಶಾಖ ವಿಜಯಕುಮಾರ್

ಆದರೆ, 2ನೇ ಇನಿಂಗ್ಸ್‌ನಲ್ಲಿ ಕರ್ನಾಟಕದ ಬ್ಯಾಟರ್‌ಗಳು ಪರದಾಡಿದರು. ಮೊದಲ ಇನಿಂಗ್ಸ್‌ನಲ್ಲಿ ಶತಕ ಹೊಡೆದಿದ್ದ ದೇವದತ್ತ ಪಡಿಕ್ಕಲ್ 36 ರನ್ ಗಳಿಸಿದರು.

ಹಾರ್ದಿಕ್ ರಾಜ್ 20 ಮತ್ತು ವೈಶಾಖ (ಔಟಾಗದೆ 22) ಬ್ಯಾಟಿಂಗ್‌ನಲ್ಲಿಯೂ ಕಾಣಿಕೆ ನೀಡಿದರು. 56.4 ಓವರ್‌ಗಳಲ್ಲಿ 139 ರನ್‌ಗಳಿಗೆ ಆಲೌಟ್ ಆಯಿತು.

ಆತಿಥೇಯ ತಂಡದ ಎಡಗೈ ಸ್ಪಿನ್ನರ್ ಅಜಿತ್ ರಾಮ್ ಅವರು ಐದು ವಿಕೆಟ್ ಗಳಿಸಿ ಕರ್ನಾಟಕಕ್ಕೆ ಆಘಾತ ನೀಡಿದರು. ನಾಯಕ ಸಾಯಿಕಿಶೋರ್ ಕೂಡ ಉತ್ತಮ ದಾಳಿ ನಡೆಸಿ ಎರಡು ವಿಕೆಟ್ ಗಳಿಸಿದರು. ರಾಷ್ಟ್ರೀಯ ತಂಡದ ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಅವರು ಪಂದ್ಯ ವೀಕ್ಷಿಸಿದರು. ಅವರ ಗಮನ ಸೆಳೆಯಲು ಉಭಯ ತಂಡಗಳ ಆಟಗಾರರು ತಮ್ಮ ಸಾಮರ್ಥ್ಯವನ್ನು ಪಣಕ್ಕೊಡ್ಡಿದ್ದಾರೆ. ಅದರಲ್ಲೂ ಈ ಪಂದ್ಯದಲ್ಲಿ ಇದುವರೆಗೆ ಉತ್ತಮವಾಗಿ ಆಡಿರುವ ದೇವದತ್ತ ಮತ್ತು ವೈಶಾಖ ಅವರ ಮೇಲೆ ಅಜಿತ್ ಗಮನ ಹರಿದಿರಬಹುದು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಕರ್ನಾಟಕ 366 (119.4 ಓವರ್‌ಗಳಲ್ಲಿ)

ತಮಿಳುನಾಡು 151 (69.2 ಓವರ್‌ಗಳಲ್ಲಿ) (ಶನಿವಾರ 7ಕ್ಕೆ129)

ಇಂದ್ರಜಿತ್ ಸಿ ಶರತ್ ಬಿ. ವೈಶಾಖ 48 (140ಎ, 4x3)
ಮೊಹಮ್ಮದ್ ಬಿ ವೈಶಾಖ 6 (41ಎ)
ಅಜಿತ್ ಎಲ್‌ಬಿಡಬ್ಲ್ಯು ಬಿ ವೈಶಾಖ 2 (7ಎ)
ಸಂದೀಪ್ ಔಟಾಗದೆ 0 (2ಎ)
ಇತರೆ: 17 (ಬೈ 12, ಲೆಗ್‌ಬೈ 2, ನೋಬಾಲ್ 3)
ವಿಕೆಟ್ ಪತನ: 8-146 (ಮೊಹಮ್ಮದ್; 65.4), 9-150 (ಅಜಿತ್ ರಾಮ್; 67.4), 10-151 (ಬಾಬಾ ಇಂದ್ರಜಿತ್; 69.2)
ಬೌಲಿಂಗ್: ಹಾರ್ದಿಕ್ ರಾಜ್ 26–6–56–2, ವಿದ್ವತ್ ಕಾವೇರಪ್ಪ 16–8–14–1, ವೈಶಾಖ ವಿಜಯಕುಮಾರ್ 12.2–1–26–4, ಶಶಿಕುಮಾರ್ 15–1–41–3

ಎರಡನೇ ಇನಿಂಗ್ಸ್: ಕರ್ನಾಟಕ 139 (56.4 ಓವರ್‌ಗಳಲ್ಲಿ)

ಸಮರ್ಥ್ ಎಲ್‌ಬಿಡಬ್ಲ್ಯು ಬಿ ಮೊಹಮ್ಮದ್ 2 (16ಎ)
ಮಯಂಕ್ ಬಿ ಅಜಿತ್ 11 (51ಎ, 4x1)
ದೇವದತ್ತ ಸಿ ಇಂದ್ರಜಿತ್ ಬಿ ಪ್ರದೋಷ್ 36 (56ಎ, 4x5)
ಹಾರ್ದಿಕ್ ಬಿ ಸಾಯಿ 20 (35ಎ, 4x3)
ಮನೀಷ್ ಬಿ ಅಜಿತ್ 14 (54, 4x1)
ಕಿಶೋರ್ ಬಿ ಅಜಿತ್ 9 (32ಎ)
ಶರತ್ ಸಿ ಇಂದ್ರಜಿತ್ ಬಿ ಸಾಯಿ 18 (55ಎ, 4x1)
ನಿಕಿನ್ ರನ್‌ಔಟ್ (ಮೊಹಮ್ಮದ್) 0 (11ಎ)
ವೈಶಾಖ ಔಟಾಗದೆ 22 (21ಎ, 4x1, 6x2)
ಶಶಿಕುಮಾರ್ ಎಲ್‌ಬಿಡಬ್ಲ್ಯು ಅಜಿತ್ 0 (3ಎ)
ವಿದ್ವತ್ ಸಿ ಜಗದೀಶನ್ ಬಿ ಅಜಿತ್ 4 (6ಎ, 4x1)
ಇತರೆ: 3 (ಲೆಗ್‌ಬೈ 2, ವೈಡ್ 1)
ವಿಕೆಟ್ ಪತನ: 1-5 (ರವಿಕುಮಾರ್ ಸಮರ್ಥ್; 3.5), 2-32 (ಮಯಂಕ್ ಅಗರವಾಲ್; 15.1), 3-68 (ದೇವದತ್ತ ಪಡಿಕ್ಕಲ್; 25.2), 4-75 (ಹಾರ್ದಿಕ್ ರಾಜ್; 27.2), 5- 88 (ಕಿಶನ್ ಬೆದರೆ; 38.1), 6-107 (ಮನೀಷ್ ಪಾಂಡೆ; 44.6), 7-110 (ನಿಕಿನ್ ಜೋಸ್; 48.5), 8-120 (ಶರತ್ ಶ್ರೀನಿವಾಸ್; 53.3), 9-121 (ಶಶಿಕುಮಾರ್; 54.5) 10-139 (ವಿದ್ವತ್ ಕಾವೇರಪ್ಪ; 56.4)
ಬೌಲಿಂಗ್: ಸಂದೀಪ್ ವಾರಿಯರ್ 9–2–23–0, ಮೊಹಮ್ಮದ್ 5–1–13–1, ಸಾಯಿಕಿಶೋರ್ 18–3–27–2, ಅಜಿತ್ ರಾಮ್ 19.4–2–61–5, ಪ್ರದೋಷ್ ಪಾಲ್ 5–0–13–1

ತಮಿಳುನಾಡು 1 ವಿಕೆಟ್‌ಗೆ 36 (15 ಓವರ್‌ಗಳಲ್ಲಿ)

ವಿಮಲ್ ಔಟಾಗದೆ 16 (49ಎ, 4x2)
ನಾರಾಯಣ್ ಸಿ ಪಡಿಕ್ಕಲ್ ಬಿ ವೈಶಾಖ 8 (17ಎ, 4x1)
ಪ್ರದೋಷ್ ಔಟಾಗದೆ 10 (24ಎ, 4x1)
ಇತರೆ: 2 (ಬೈ 2)
ವಿಕೆಟ್ ಪತನ: 1–14 (ನಾರಾಯಣ್ ಜಗದೀಶನ್; 5.1)
ಬೌಲಿಂಗ್: ವಿದ್ವತ್ ಕಾವೇರಪ್ಪ 3–0–13–0, ವೈಶಾಖ ವಿಜಯಕುಮಾರ್ 5–1–12–1, ಶಶಿಕುಮಾರ್ 5–1–7–0, ಆರ್.ಸಿದ್ಧಾರ್ಥ್ 2–0–2–0

ಆಸ್ಟ್ರೇಲಿಯಾ ಯುವಪಡೆಗೆ ಕಿರೀಟ

ನಾಲ್ಕನೇ ಬಾರಿ ವಿಶ್ವಕಪ್ ಗೆದ್ದ ಕಾಂಗರೂ ನಾಡಿನ ತಂಡ; ಭಾರತ ತಂಡಕ್ಕೆ ನಿರಾಶೆ

ಬೆನೊನಿ, ದಕ್ಷಿಣ ಆಫ್ರಿಕಾ (ಪಿಟಿಐ): ಆರನೇ ಬಾರಿ ವಿಶ್ವಕಪ್ ಗೆದ್ದು ದಾಖಲೆ ಬರೆಯುವ ಭಾರತದ 19 ವರ್ಷದೊಳಗಿನವರ ತಂಡದ ಕನಸು ಕಮರಿತು.

ಭಾನುವಾರ ಇಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು 79 ರನ್‌ಗಳಿಂದ ಗೆದ್ದು ನಾಲ್ಕನೇ ಸಲ ಪ್ರಶಸ್ತಿ ಜಯಿಸಿತು. 2010ರ ನಂತರ ತಂಡವು ಗೆದ್ದ ವಿಶ್ವಕಪ್ ಇದಾಗಿದೆ. ಇದರೊಂದಿಗೆ 2012 ಮತ್ತು 2018ರಲ್ಲಿ ಭಾರತದ ಎದುರು ಅನುಭವಿಸಿದ್ದ ಸೋಲಿಗೆ ತಿರುಗೇಟು ನೀಡಿತು. ಹೋದ ಬಾರಿ ಚಾಂಪಿಯನ್ ಆಗಿದ್ದ ಭಾರತವು ಈ ಬಾರಿ ರನ್ನರ್ಸ್ ಅಪ್ ಆಯಿತು.

ಆಸ್ಟ್ರೇಲಿಯಾ ವೇಗಿ ಮಹ್ಲಿ ಬಿಯರ್ಡ್‌ಮ್ಯಾನ್ (15ಕ್ಕೆ3) ಅವರ ದಾಳಿಗೆ ಭಾರತ ತಂಡವು ಕುಸಿಯಿತು.

ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕ ಹ್ಯೂಗ್ ವೆಬ್‌ಜೆನ್ (48; 66ಎ) ಮತ್ತು ಹರ್ಜಾಸ್ ಸಿಂಗ್ (55; 64ಎ) ಅವರ ಬ್ಯಾಟಿಂಗ್‌ನಿಂದಾಗಿ 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 253 ರನ್ ಗಳಿಸಿತು.

ಇದಕ್ಕುತ್ತರವಾಗಿ ಭಾರತ ತಂಡವು 43.5 ಓವರ್‌ಗಳಲ್ಲಿ 174 ರನ್ ಗಳಿಸಿತು. ಟೂರ್ನಿಯುದ್ದಕ್ಕೂ ಮಿಂಚಿದ್ದ ಉದಯ್ ಸಹರಾನ್, ಸಚಿನ್ ದಾಸ್, ಮುಷೀರ್ ಖಾನ್ ಮತ್ತು ಆದರ್ಶ್ ಸಿಂಗ್ ಅವರನ್ನು ಅಲ್ಪಮೊತ್ತಕ್ಕೆ ಕಟ್ಟಿಹಾಕುವಲ್ಲಿ ಆಸ್ಟ್ರೇಲಿಯಾ ಬೌಲರ್‌ಗಳು ಸಫಲರಾದರು. ಒಂದು ಹಂತದಲ್ಲಿ ಭಾರತ ತಂಡವು 90 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿತ್ತು.

ಆರಂಭಿಕ ಬ್ಯಾಟರ್ ಆದರ್ಶ್ ಸಿಂಗ್ (47; 77ಎ) ಮತ್ತು ಮುರುಗನ್ ಅಭಿಷೇಕ್ (42; 46ಎ) ಅವರು ತಂಡಕ್ಕೆ ಬಲ ತುಂಬುವ ಪ್ರಯತ್ನ ಮಾಡಿದರು. ಆದರೆ ಉಳಿದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರು.

ಆಸ್ಟ್ರೇಲಿಯಾದ ಎಲ್ಲ ಬೌಲರ್ ಗಳು ಆತ್ಮವಿಶ್ವಾಸದಿಂದ ಶಿಸ್ತಿನ ಬೌಲಿಂಗ್ ಮಾಡಿದರು. ಬಿಯರ್ಡ್‌ಮ್ಯಾನ್ ಅಲ್ಲದೇ ರಾಫ್ ಮ್ಯಾಕ್‌ಮಿಲನ್ ಕೂಡ ಮೂರು ವಿಕೆಟ್ ಗಳಿಸಿದರು. ಕ್ಯಾಲಂ ವಿಡ್ಲೆರ್ ಎರಡು ವಿಕೆಟ್ ಗಳಿಸಿದರು. ಸೆಮಿಫೈನಲ್‌ನಲ್ಲಿ ಮಿಂಚಿದ್ದ ಟಾಮ್ ಸ್ಟ್ರೇಕರ್ ಇಲ್ಲಿ ಒಂದು ವಿಕೆಟ್ ಮಾತ್ರ ಪಡೆದರು.

ಹೋದ ವರ್ಷ ಏಕದಿನ ಕ್ರಿಕೆಟ್ ವಿಶ್ವಕಪ್ ಫೈನಲ್‌ನಲ್ಲಿ ಭಾರತ ಸೀನಿಯರ್ ತಂಡವು ಆಸ್ಟ್ರೇಲಿಯಾದ ಪ್ಯಾಟ್ ಕಮಿನ್ಸ್ ಬಳಗದ ಎದುರು ಸೋತಿತ್ತು. ಇದೀಗ ಯುವಪಡೆಯೂ ಆಸ್ಟ್ರೇಲಿಯಾ ತಂಡದ ಎದುರು ಮಣಿಯಿತು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 253 (ಹ್ಯಾರಿ ಡಿಕ್ಸನ್ 42, ಹ್ಯೂಗ್ ವೆಬ್‌ಜೆನ್ 48, ಹರ್ಜಾಸ್ ಸಿಂಗ್ 55, ರಿಯಾನ್ ಹಿಕ್ಸ್ 20, ಒಲಿವರ್ ಪೀಕ್ ಔಟಾಗದೆ 46, ರಾಜ್ ಲಿಂಬಾನಿ 38ಕ್ಕೆ3, ನಮನ್ ತಿವಾರಿ 63ಕ್ಕೆ2) ಭಾರತ: 43.5 ಓವರ್‌ಗಳಲ್ಲಿ 174 (ಆದರ್ಶ್ ಸಿಂಗ್ 47, ಮುಷೀರ್ ಖಾನ್ 22, ಮುರುಗನ್ ಅಭಿಷೇಕ್ 42, ನಮನ್ ತಿವಾರಿ ಔಟಾಗದೆ 14, ಕ್ಯಾಲಂ ವಿಡೇರ್ 35ಕ್ಕೆ2, ಮಹ್ಲಿ ಬಿಯರ್ಡ್‌ಮ್ಯಾನ್ 15ಕ್ಕೆ3, ರ್‍ಯಾಫ್ ಮ್ಯಾಕ್‌ಮಿಲನ್ 43ಕ್ಕೆ3) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 79 ರನ್‌ಗಳ ಜಯ. ಪಂದ್ಯಶ್ರೇಷ್ಠ: ಮಹ್ಲಿ ಬಿಯರ್ಡ್‌ಮ್ಯಾನ್.



ಪ್ರಶಸ್ತಿ ಜಯಿಸಿದ ಆಸ್ಟ್ರೇಲಿಯಾ 19 ವರ್ಷದೊಳಗಿನವರ ತಂಡದ ಆಟಗಾರರ ಸಂಭ್ರಮ –ಎಎಫ್‌ಪಿ ಚಿತ್ರ

ವಾಲಿಬಾಲ್ ಲೀಗ್: ಟಾರ್ಪಿಡೋಸ್ ಸಜ್ಜು

ಬೆಂಗಳೂರು: ಪ್ರೈಮ್ ವಾಲಿಬಾಲ್ ಲೀಗ್ ಮೂರನೇ ಆವೃತ್ತಿಯ ಟೂರ್ನಿಯು ಇದೇ 15ರಂದು ಆರಂಭ ವಾಗಲಿದ್ದು, ಪಂಕಜ್ ಶರ್ಮಾ ಸಾರಥ್ಯದ ಬೆಂಗಳೂರು ಟಾರ್ಪಿಡೋಸ್ ತಂಡವು ಚೊಚ್ಚಲ ಪ್ರಶಸ್ತಿ ಗೆಲ್ಲುವ ವಿಶ್ವಾಸದೊಂದಿಗೆ ಸಜ್ಜಾಗುತ್ತಿದೆ.

ಅಮೆರಿಕದ ವಾಲಿಬಾಲ್ ಆಟಗಾರ ಡೇವಿಡ್ ಲೀ ಮಾರ್ಗದರ್ಶನ ದಲ್ಲಿ ಬೆಂಗಳೂರು ತಂಡವು ನಗರದ ಯಲಹಂಕದಲ್ಲಿರುವ ಪಡುಕೋಣೆ–ದ್ರಾವಿಡ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ 3 ತಿಂಗಳಿಂದ ಸತತ ಅಭ್ಯಾಸ ನಡೆಸುತ್ತಿದೆ.

ಟಾರ್ಪಿಡೋಸ್ ಸೇರಿದಂತೆ ಒಟ್ಟು 9 ತಂಡಗಳು ಈ ಟೂರ್ನಿಯಲ್ಲಿ ಪಾಲ್ಗೊಳ್ಳಲಿವೆ. ಕಳೆದ ಆವೃತ್ತಿಯಲ್ಲಿ ಬೆಂಗಳೂರು ತಂಡವು ಫೈನಲ್‌ನಲ್ಲಿ ಅಹಮದಾಬಾದ್ ಡಿಫೆಂಡರ್ಸ್ ವಿರುದ್ಧ ಸೋತು ರನ್ನರ್ಸ್ ಅಪ್ ಸ್ಥಾನ ಪಡೆದಿತ್ತು.

ಟಾರ್ಪಿಡೋಸ್ ತಂಡ ಫೆ.15ರಂದು ಮೊದಲ ಆವೃತ್ತಿಯ ಚಾಂಪಿಯನ್ ತಂಡ ಕೋಲ್ಕತ್ತ ಥಂಡರ್‌ಬೋಲ್ಟ್ಸ್ ತಂಡದ ವಿರುದ್ಧ ಅಭಿಯಾನ ಆರಂಭಿಸಲಿದೆ. ಕನ್ನಡಿಗ ಸೃಜನ್ ಶೆಟ್ಟಿ ಸೇರಿದಂತೆ ಬ್ರೆಜಿಲ್ ಮತ್ತು ಆಸ್ಟ್ರೇಲಿಯಾದ ಆಟಗಾರರು ತಂಡದಲ್ಲಿದ್ದಾರೆ.

ಟಿ20 ಕ್ರಿಕೆಟ್: ಆಸ್ಟ್ರೇಲಿಯಾಕ್ಕೆ ಮಣಿದ ವೆಸ್ಟ್ ಇಂಡೀಸ್

ರೋಹಿತ್ ದಾಖಲೆ ಸರಿಗಟ್ಟಿದ ಮ್ಯಾಕ್ಸ್‌ವೆಲ್

ಅಡಿಲೇಡ್ (ಎಎಫ್‌ಪಿ): ಗ್ಲೆನ್ ಮ್ಯಾಕ್ಸ್‌ವೆಲ್ ಅವರ ದಾಖಲೆಯ ಶತಕದ ನೆರವಿನಿಂದ ಆಸ್ಟ್ರೇಲಿಯಾ ತಂಡವು ವೆಸ್ಟ್ ಇಂಡೀಸ್ ವಿರುದ್ಧದ ಎರಡನೇ ಟಿ20 ಪಂದ್ಯದಲ್ಲಿ 34 ರನ್‌ಗಳಿಂದ ಜಯ ಸಾಧಿಸಿತು.

ಟಿ20 ಕ್ರಿಕೆಟ್ ಮಾದರಿಯಲ್ಲಿ 35 ವರ್ಷದ ಮ್ಯಾಕ್ಸ್‌ವೆಲ್ ದಾಖಲಿಸಿದ ಐದನೇ ಶತಕ ಇದಾಗಿದೆ. ಈ ಮೂಲಕ ಅವರು ರೋಹಿತ್ ಶರ್ಮಾ ಅವರ ದಾಖಲೆಯನ್ನು ಸರಿಗಟ್ಟಿದ್ದಾರೆ. ಈ ಸಾಧನೆಯನ್ನು ರೋಹಿತ್ 143 ಇನಿಂಗ್ಸ್‌ಗಳಲ್ಲಿ ಮಾಡಿದ್ದರೆ, ಮ್ಯಾಕ್ಸ್‌ವೆಲ್ 94 ಇನಿಂಗ್ಸ್‌ಗಳಲ್ಲಿ ಪೂರೈಸಿದರು.

ಗ್ಲೆನ್ ಅವರು 50 ಎಸೆತಗಳಲ್ಲಿ ಶತಕ ಪೂರೈಸಿದರು. ಅವರ ಅಬ್ಬರದ (ಔಟಾಗದೆ 120, 55ಎ, 4x12, 6x8) ಬ್ಯಾಟಿಂಗ್ ಬಲದಿಂದ ಆಸ್ಟ್ರೇಲಿಯಾ ತಂಡವು 20 ಓವರ್‌ಗಳಲ್ಲಿ ನಾಲ್ಕು ವಿಕೆಟ್‌ಗೆ 241 ರನ್ ಗಳಿಸಿತು. ಬೃಹತ್ ಗುರಿಯನ್ನು ಬೆನ್ನಟ್ಟಿದ ವಿಂಡೀಸ್ ಪಡೆ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 207 ರನ್ ಗಳಿಸಲಷ್ಟೇ ಶಕ್ತವಾಯಿತು. ನಾಯಕ ರೋವ್ಮನ್ ಪೊವೆಲ್ (63, 36ಎ) ಕೊಂಚ ಪ್ರತಿರೋಧ ತೋರಿದರು.



ಶತಕ ಸಿಡಿಸಿದ ಗ್ಲೆನ್ ಮ್ಯಾಕ್ಸ್‌ವೆಲ್ ಸಂಭ್ರಮ –ಎಎಫ್‌ಪಿ ಚಿತ್ರ

ಮೂರು ಪಂದ್ಯಗಳ ಸರಣಿಯನ್ನು ಆತಿಥೇಯ ತಂಡವು 2–0ಯಿಂದ ಕೈವಶ ಮಾಡಿಕೊಂಡಿದೆ. ಮೂರನೇ ಪಂದ್ಯವು ಮಂಗಳವಾರ ಪರ್ತ್‌ನಲ್ಲಿ ನಡೆಯಲಿದೆ.

ಸಂಕ್ಷಿಪ್ತ ಸ್ಕೋರ್: ಆಸ್ಟ್ರೇಲಿಯಾ: 20 ಓವರ್‌ಗಳಲ್ಲಿ 4 ವಿಕೆಟ್‌ಗೆ 241 (ಮಿಚೆಲ್ ಮಾರ್ಷ್ 29, ಮ್ಯಾಕ್ಸ್‌ವೆಲ್ ಔಟಾಗದೆ 120, ಟಿಮ್ ಡೇವಿಡ್ ಔಟಾಗದೆ 31; ಜೇಸನ್ ಹೋಲ್ಡರ್ 42ಕ್ಕೆ 2). ವೆಸ್ಟ್ ಇಂಡೀಸ್: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 207 (ರೋವ್ಮನ್ ಪೊವೆಲ್ 63, ಆ್ಯಂಡ್ರೆ ರಸೆಲ್ 37; ಮಾರ್ಕಸ್ ಸ್ಟೊಯಿನಿಸ್ 36ಕ್ಕೆ 3, ಜೋಷ್ ಹ್ಯಾಜಲ್ 31ಕ್ಕೆ 2, ಸ್ಪೆನ್ಸರ್ ಜಾನ್ಸನ್ 39ಕ್ಕೆ 2). ಫಲಿತಾಂಶ: ಆಸ್ಟ್ರೇಲಿಯಾಕ್ಕೆ 34 ರನ್ ಜಯ

ಟಿ20: ಗರಿಷ್ಠ ಶತಕ ಗಳಿಸಿದವರು

ಆಟಗಾರ	ದೇಶ	ಶತಕಗಳು	ಇನಿಂಗ್ಸ್
ಗ್ಲೆನ್ ಮ್ಯಾಕ್ಸ್‌ವೆಲ್	ಆಸ್ಟ್ರೇಲಿಯಾ	5	94
ರೋಹಿತ್ ಶರ್ಮಾ	ಭಾರತ	5	143
ಸೂರ್ಯಕುಮಾರ್ ಯಾದವ್	ಭಾರತ	4	57
ಸಬಾವೂನ್ ಡೇವಿಜಿ	ಜೆಕ್ ಗಣರಾಜ್ಯ	3	31
ಕಾಲಿನ್ ಮನ್ರೊ	ನ್ಯೂಜಿಲೆಂಡ್	3	62
ಬಾಬರ್ ಆಜಂ	ಪಾಕಿಸ್ತಾನ	3	103



ಧಾರವಾಡದಲ್ಲಿ ನಡೆದ ರಾಜ್ಯಮಟ್ಟದ ಬ್ಯಾಸ್ಕೆಟ್ ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆದ ಬೆಂಗಳೂರಿನ ಜಿಎಸ್‌ಟಿ –ಕಸ್ಟಮ್ಸ್ ತಂಡದ ಆತೀಶ್, ವಾಗೀಶ್, ಪ್ರೇಮ್, ಎಂ.ರಮೇಶ್, ಅಶೋಕ್ ಕಂಚಿಬೈಲ್, ಅರುಣ್‌ಕುಮಾರ್, ವಿಜಯ್ ಬಳ್ಳಾರಿ, ರುಷಿ, ಸಂಯಮ್, ಸುಬ್ಬಯ್ಯ, ಧೀರಜ್ ರೆಡ್ಡಿ, ನವೀನ್, ಯಶಸ್ ಪ್ರಜಾವಾಣಿ ಚಿತ್ರ

ಬ್ಯಾಸ್ಕೆಟ್ ಬಾಲ್: ನಿಟ್ಟೆ ಕೆ.ಎಸ್. ಹೆಗ್ಡೆ ತಂಡ ರನ್ನರ್ ಅಪ್

ಮೈಸೂರು ಮಹಿಳಾ ತಂಡಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಧಾರವಾಡ: ಮೈಸೂರಿನ ರಾಜ್ಯ ಕ್ರೀಡಾ ಇಲಾಖೆಯ ವಸತಿ ನಿಲಯದ ಮಹಿಳಾ ತಂಡವು ರಾಜ್ಯ ಮತ್ತು ಜಿಲ್ಲಾ ಬ್ಯಾಸ್ಕೆಟ್ ಬಾಲ್ ಸಂಸ್ಥೆ ಸಹಯೋಗದಲ್ಲಿ ರೋವರ್ಸ್ ಕ್ಲಬ್ ಆಯೋಜಿಸಿದ ರಾಜ್ಯಮಟ್ಟದ ಹೊನಲು ಬೆಳಕಿನ ಬಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆಯಿತು.

ನಗರದ ರೋವರ್ಸ್ ಬ್ಯಾಸ್ಕೆಟ್‌ಬಾಲ್ ಅಂಕಣದಲ್ಲಿ ನಡೆದ ಸೆಮಿಫೈನಲ್ ಲೀಗ್ ಹಂತದ ಮೂರು ಪಂದ್ಯಗಳನ್ನು ಗೆದ್ದ ಮೈಸೂರು ವನಿತೆಯರು ಈ ಸಾಧನೆ ಮಾಡಿದರು. ನಿಟ್ಟೆಯ ಕೆ.ಎಸ್.ಹೆಗ್ಡೆ ತಂಡದವರು ಎರಡು ಪಂದ್ಯಗಳಲ್ಲಿ ಜಯಗಳಿಸಿ ರನ್ನರ್ ಅಪ್ ಸ್ಥಾನ ಪಡೆದರು.

ಭಾನುವಾರ ನಡೆದ ಸೆಮಿ ಫೈನಲ್ ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಮೈಸೂರಿನ ಕ್ರೀಡಾ ಹಾಸ್ಟೆಲ್ (ಡಿವೈಇಎಸ್) ತಂಡವು 60–53 ಅಂಕಗಳಿಂದ ಬೆಂಗಳೂರಿನ ಬೀಗಲ್ಸ್ ತಂಡವನ್ನು ಸೋಲಿಸಿತು. ಕ್ರೀಡಾ ಹಾಸ್ಟೆಲ್ ತಂಡದ ಐಶ್ವರ್ಯಾ (19) ಹಾಗೂ ಬೀಗಲ್ಸ್ ತಂಡದ ಚಂದನಾ (22) ಚಾಕಚಕ್ಯತೆಯ ಆಟ ಆಡಿದರು.

ಸೆಮಿಫೈನಲ್ ಲೀಗ್ ಹಂತದ ಐದನೇ ಪಂದ್ಯದಲ್ಲಿ ನಿಟ್ಟೆಯ ಕೆ.ಎಸ್.ಹೆಗ್ಡೆ ತಂಡವು 66–35ರಿಂದ ಧಾರವಾಡದ ರೋವರ್ಸ್ ತಂಡದ ವಿರುದ್ಧ ಜಯಿಸಿತು. ಕೆ.ಎಸ್.ಹೆಗ್ಡೆ ತಂಡದ ದಿವ್ಯಾ (20) ಮಿಂಚಿದರು.

ಜಿಎಸ್‌ಟಿ ಪುರುಷರ ತಂಡ ಚಾಂಪಿಯನ್

ಟೂರ್ನಿಯ ಪುರುಷ ವಿಭಾಗದಲ್ಲಿ ಬೆಂಗಳೂರಿನ ಜಿಎಸ್‌ಟಿ –ಕಸ್ಟಮ್ಸ್ ತಂಡದವರು ಚಾಂಪಿಯನ್ ಆದರು. ಮಂಗಳೂರಿನ ಬಾಸ್ಕೆಟ್‌ಬಾಲ್ ಕ್ಲಬ್ ತಂಡವು ರನ್ನರ್ ಅಪ್ ಸ್ಥಾನ ಪಡೆಯಿತು.
ನಗರದ ರೋವರ್ಸ್ ಬಾಸ್ಕೆಟ್ ಬಾಲ್ ಮೈದಾನದಲ್ಲಿ ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಜಿಎಸ್‌ಟಿ –ಕಸ್ಟಮ್ಸ್ ತಂಡವು ಮಂಗಳೂರಿನ ಬಿ.ಸಿ ತಂಡವನ್ನು 65–64 ಅಂಕಗಳಿಂದ ಸೋಲಿಸಿತು. ಜಿಎಸ್‌ಟಿ –ಕಸ್ಟಮ್ಸ್ ತಂಡದ ಧೀರಜ್ (35) ಗೆಲುವಿಗೆ ಕಾಣಿಕೆ ನೀಡಿದರು.

ಸನ್‌ರೈಸರ್ಸ್ ತಂಡ ಚಾಂಪಿಯನ್

ಕೇಪ್‌ಟೌನ್ (ಪಿಟಿಐ): ಸನ್‌ರೈಸರ್ಸ್ ಈಸ್ಟರ್ನ್ ಕೇಪ್ ತಂಡವು ದಕ್ಷಿಣ ಆಫ್ರಿಕಾ ಟಿ20 ಕ್ರಿಕೆಟ್ ಲೀಗ್‌ನ ಫೈನಲ್ ಪಂದ್ಯದಲ್ಲಿ ಡರ್ಬನ್ ಸೂಪರ್ ಜೈಂಟ್ಸ್ ವಿರುದ್ಧ 89 ರನ್‌ಗಳ ಜಯ ಸಾಧಿಸಿ, ಸತತ ಎರಡನೇ ಬಾರಿ ಪ್ರಶಸ್ತಿ ಗೆದ್ದುಕೊಂಡಿದೆ.

ನ್ಯೂಲ್ಯಾಂಡ್ಸ್‌ನಲ್ಲಿ ಶನಿವಾರ ನಡೆದ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಏಡನ್ ಮಾರ್ಕರಂ ನೇತೃತ್ವದ ಹಾಲಿ ಚಾಂಪಿಯನ್ ಸನ್‌ರೈಸರ್ಸ್ ತಂಡವು 20 ಓವರ್‌ಗಳಲ್ಲಿ ಮೂರು ವಿಕೆಟ್‌ಗೆ 204 ಕಲೆ ಹಾಕಿತು.

ಟಾಮ್ ಅಬೆಲ್ (55) ಮತ್ತು ಟ್ರಿಸ್ಟನ್ ಸ್ಟಬ್ಸ್ (ಔಟಾಗದೆ 56) ಅವರ ಅರ್ಧಶತಕ ಗಳಿಸಿ ಉಪಯುಕ್ತ ಕಾಣಿಕೆ ನೀಡಿದರು. ಗುರಿ ಬೆನ್ನಟ್ಟಿದ ಡರ್ಬನ್ ತಂಡವು ಸನ್‌ರೈಸರ್ಸ್‌ನ ಮಾರ್ಕೊ ಯಾನ್ಸನ್ (30ಕ್ಕೆ 5) ಅವರ ಪರಿಣಾಮಕಾರಿ ದಾಳಿಗೆ ತತ್ತರಿಸಿತು. ಹೀಗಾಗಿ, 17 ಓವರ್‌ಗಳಲ್ಲಿ 115 ರನ್‌ಗೆ ತಂಡ ಕುಸಿಯಿತು.

ಡೇನಿಯಲ್ ವೊರಾಲ್, ಒಟ್ನಿಯೆಲ್ ಬಾರ್ಟ್‌ಮನ್ ತಲಾ ಎರಡು ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್: ಸನ್‌ರೈಸರ್ಸ್ ಈಸ್ಟರ್ನ್ ಕೇಪ್: 20 ಓವರ್‌ಗಳಲ್ಲಿ 3 ವಿಕೆಟ್‌ಗೆ 204 (ಜೋರ್ಡನ್ ಹರ್ಮನ್ 42, ಟಾಮ್ ಅಬೆಲ್ 55, ಏಡನ್ ಮರ್ಕರಂ ಔಟಾಗದೆ 42, ಟ್ರಿಸ್ಟನ್ ಸ್ಟಬ್ಸ್ 56; ಕೇಶವ್ ಮಹಾರಾಜ್ 33ಕ್ಕೆ 2). ಡರ್ಬನ್ ಸೂಪರ್ ಜೈಂಟ್ಸ್: 17 ಓವರ್‌ಗಳಲ್ಲಿ 115 (ವಿಯಾನ್ ಮುಲ್ಡರ್ 38; ಮಾರ್ಕೊ ಯಾನ್ಸನ್ 30ಕ್ಕೆ 5, ಡೇನಿಯಲ್ ವೊರಾಲ್ 15ಕ್ಕೆ 2, ಒಟ್ನಿಯೆಲ್ ಬಾರ್ಟ್‌ಮನ್ 17ಕ್ಕೆ 2). ಫಲಿತಾಂಶ: ಸನ್‌ರೈಸರ್ಸ್ ಈಸ್ಟರ್ನ್ ಕೇಪ್ ತಂಡಕ್ಕೆ 89 ರನ್ ಜಯ

‘ಮೈತ್ರಿ ಸರ್ಕಾರ’ಕ್ಕೆ ತೀವ್ರ ಯತ್ನ

ಪಾಕಿಸ್ತಾನವನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡಬೇಕಿದೆ: ನವಾಜ್ ಷರೀಫ್

ಇಸ್ಲಾಮಾಬಾದ್ (ಪಿಟಿಐ): ಸಾರ್ವತ್ರಿಕ ಚುನಾವಣೆಯ ಅಂತಿಮ ಫಲಿತಾಂಶವನ್ನು ಪಾಕಿಸ್ತಾನ ಚುನಾವಣಾ ಆಯೋಗ ಭಾನುವಾರ ಪ್ರಕಟಿಸಿದ್ದು, ಜೈಲುವಾಸದಲ್ಲಿರುವ ಮಾಜಿ ಪ್ರಧಾನಿ ಇಮ್ರಾನ್‌ಖಾನ್ ಅವರ ಪಿಟಿಐ ಪಕ್ಷ ಬೆಂಬಲಿತ ಪಕ್ಷೇತರ ಅಭ್ಯರ್ಥಿಗಳು 97 ಸ್ಥಾನಗಳಲ್ಲಿ ಗೆದ್ದಿದ್ದಾರೆ.

ಮಾಜಿ ಪ್ರಧಾನಿ ನವಾಜ್ ಷರೀಫ್ ನೇತೃತ್ವದ ಪಾಕಿಸ್ತಾನ್ ಮುಸ್ಲಿಂ ಲೀಗ್–ನವಾಜ್ (ಪಿಎಂಎಲ್–ಎನ್) 76 ಸ್ಥಾನಗಳಲ್ಲಿ ಗೆಲ್ಲುವ ಮೂಲಕ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಯಾರಿಗೂ ಸ್ಪಷ್ಟ ಬಹುಮತ ಸಿಗದ ಕಾರಣ ಸರ್ಕಾರ ರಚನೆ ಕುರಿತ ಅನಿಶ್ಚಿತತೆ ಮತ್ತೆ ಮುಂದುವರಿದಿದೆ.

ನ್ಯಾಷನಲ್ ಅಸೆಂಬ್ಲಿಯ 266 ಸ್ಥಾನಗಳ ಪೈಕಿ 265 ಸ್ಥಾನಗಳಿಗೆ ಗುರುವಾರ ಮತದಾನ ನಡೆದಿತ್ತು. ಈ ಪೈಕಿ, 264 ಸ್ಥಾನಗಳ ಫಲಿತಾಂಶವನ್ನು ಪಾಕಿಸ್ತಾನ ಚುನಾವಣಾ ಆಯೋಗ ಪ್ರಕಟಿಸಿದೆ. ಪಂಜಾಬ್ ಪ್ರಾಂತ್ಯದ ಖುಷಬ್ ಕ್ಷೇತ್ರಕ್ಕೆ ನಡೆದ ಚುನಾವಣೆಯಲ್ಲಿ ಅಕ್ರಮ ನಡೆದಿವೆ ಎಂಬ ದೂರುಗಳ ಹಿನ್ನೆಲೆಯಲ್ಲಿ ಈ ಕ್ಷೇತ್ರದ ಫಲಿತಾಂಶವನ್ನು ತಡೆಹಿಡಿಯಲಾಗಿದೆ. ಸರ್ಕಾರ ರಚನೆಗೆ 133 ಸ್ಥಾನಗಳ ಸರಳ ಬಹುಮತ ಅಗತ್ಯ.

ದೇಶವನ್ನು ಆರ್ಥಿಕ ಬಿಕ್ಕಟ್ಟಿನಿಂದ ಪಾರು ಮಾಡುವುದಕ್ಕಾಗಿ ಮೈತ್ರಿ ಸರ್ಕಾರ ರಚನೆ ಸಾಧ್ಯತೆ ಕುರಿತು ಬಹುತೇಕ ರಾಜಕೀಯ ಪಕ್ಷಗಳು ಕಸರತ್ತು ಆರಂಭಿಸಿವೆ.

ದೇಶದ ಆರ್ಥಿಕತೆಯನ್ನು ಮತ್ತೆ ಹಳಿಗೆ ತರುವುದಕ್ಕಾಗಿ ಮೈತ್ರಿ ಸರ್ಕಾರ ರಚಿಸಬೇಕು ಎಂದು ಪ್ರತಿಪಾದಿಸುತ್ತಿರುವ ಪಿಎಂಎಲ್–ಎನ್ ಪಕ್ಷದ ವರಿಷ್ಠ ಹಾಗೂ ಮಾಜಿ ಪ್ರಧಾನಿ ನವಾಜ್ ಷರೀಫ್ ಅವರಿಗೆ ಸೇನೆ ಬೆಂಬಲ ವ್ಯಕ್ತಪಡಿಸಿರುವುದು ಗಮನಾರ್ಹ.

ಈ ಸಂಬಂಧ ಇತರ ಪಕ್ಷಗಳ ನಾಯಕರೊಂದಿಗೆ ಮಾತುಕತೆ ನಡೆಸುವ ಜವಾಬ್ದಾರಿಯನ್ನು ನವಾಜ್ ಅವರು ಸಹೋದರ ಶೆಹಬಾಜ್ ಷರೀಫ್ ಅವರಿಗೆ ಒಪ್ಪಿಸಿದ್ದಾರೆ. ಶೆಹಬಾಜ್ ಅವರು ಪಿಪಿಪಿ ಹಿರಿಯ ನಾಯಕರೊಂದಿಗೆ ಒಂದು ಸುತ್ತಿನ ಮಾತುಕತೆ ನಡೆಸಿದ್ದಾರೆ.

ಎಂಕ್ಯೂಎಂ–ಪಿ ಪಕ್ಷದ ನಾಯಕರನ್ನು ಒಳಗೊಂಡ ನಿಯೋಗವೊಂದು ಲಾಹೋರ್‌ನಲ್ಲಿಯೇ ಠಿಕಾಣಿ ಹೂಡಿದ್ದು, ಶೆಹಬಾಜ್ ಅವರೊಂದಿಗೆ ಮಾತುಕತೆ ನಡೆಸಿದೆ ಎಂದು ಮೂಲಗಳು ಹೇಳಿವೆ.

ಶೆಹಬಾಜ್ ಷರೀಫ್ ನೇತೃತ್ವದಲ್ಲಿ ‘ಪಾಕಿಸ್ತಾನ್ ಡೆವಲೆಪ್‌ಮೆಂಟ್ ಮೂವ್‌ಮೆಂಟ್’ (ಪಿಡಿಎಂ) ಹೆಸರಿನಲ್ಲಿ ಮೈತ್ರಿಕೂಟ ಅಸ್ತಿತ್ವಕ್ಕೆ ತಂದು, ಸರ್ಕಾರ ರಚಿಸುವ ಸಾಧ್ಯತೆ ಇದೆ ಎಂಬ ಮಾತುಗಳು ಬಲವಾಗಿ ಕೇಳಿಬರುತ್ತಿವೆ.

‘ಪಿಟಿಐ ಬೆಂಬಲಿತ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗೆಲುವು ಸಾಧಿಸಿದ್ದರೂ, ಪಿಎಂಎಲ್–ಎನ್ ಇಲ್ಲವೇ ಪಿಪಿಪಿ ಅಂತಹ ಪಕ್ಷಗಳ ಜೊತೆ ಕೈಜೋಡಿಸದೇ ಅವರಿಗೆ ಸರ್ಕಾರ ರಚಿಸಲು ಆಗುವುದಿಲ್ಲ’ ಎಂದು ಪಾಕಿಸ್ತಾನ ಸಂಸದೀಯ ಅಭಿವೃದ್ಧಿ ಮತ್ತು ಪಾರದರ್ಶಕತೆ ಸಂಸ್ಥೆಯ(ಪಿಐಎಲ್‌ಡಿಟಿ) ಅಹ್ಮದ್ ಬಿಲಾಲ್ ಮೆಹಬೂಬ್ ಅವರ ಹೇಳಿಕೆಯನ್ನು ಉಲ್ಲೇಖಿಸಿ ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್ ವರದಿ ಮಾಡಿದೆ.

‘ಪಿಟಿಐ ಬೆಂಬಲಿತ ಪಕ್ಷೇತರ ಅಭ್ಯರ್ಥಿಗಳು ಬೇರೆ ಪಕ್ಷಗಳೊಂದಿಗೆ ಸೇರಿ, ಸರ್ಕಾರ ರಚಿಸಬೇಕು ಎಂದು ನಿರ್ಧರಿಸಿದರೂ, ಪಕ್ಷೇತರರು ಪಕ್ಷವೊಂದರ ಚಿಹ್ನೆ ಹೊಂದಿರಬೇಕಾಗುತ್ತದೆ. ಇದಕ್ಕಾಗಿ, ಪಿಟಿಐ ನಾಯಕರು ಪಕ್ಷದ ಆಂತರಿಕ ಚುನಾವಣೆ ನಡೆಸಿ, ಈ ಹಿಂದಿನ ಚಿಹ್ನೆ ಮರಳಿ ಪಡೆಯಬೇಕು ಇಲ್ಲವೇ ಹೊಸ ಚಿಹ್ನೆ ಪಡೆಯ ಬೇಕಾಗುತ್ತದೆ’ ಎಂದು ಮೆಹಬೂಬ್ ವಿವರಿಸಿದ್ದಾಗಿ ಪತ್ರಿಕೆ ವರದಿ ಮಾಡಿದೆ.

ಪಿಟಿಐ ಬೆಂಬಲಿತ ಪಕ್ಷೇತರ ಅಭ್ಯರ್ಥಿಗಳು ನವಾಜ್ ಷರೀಫ್ ನೇತೃತ್ವದ ಪಿಎಂಎಲ್–ಎನ್ ಪಕ್ಷ ಸೇರಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ. ಇದನ್ನು ಪಿಟಿಐ ಮುಖಂಡ ಗೋಹರ್ ಖಾನ್ ತಳ್ಳಿ ಹಾಕಿದ್ದಾರೆ.

‘ಪಿಎಂಎಲ್–ಎನ್ ಜೊತೆ ಕೈಜೋಡಿಸಿ ಸರ್ಕಾರ ರಚಿಸುವ ಬದಲು, ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳುವುದು ಉತ್ತಮ’ ಎಂಬುದಾಗಿ ಗೋಹರ್ ಖಾನ್ ಹೇಳಿರುವುದಾಗಿ ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.



ಪಾಕಿಸ್ತಾನ ನ್ಯಾಷನಲ್ ಅಸೆಂಬ್ಲಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ವ್ಯಾಪಕ ಅಕ್ರಮ ನಡೆದಿದೆ ಎಂದು ಆರೋಪಿಸಿ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಪಿಟಿಐ ಪಕ್ಷದ ಬೆಂಬಲಿಗರು ಕರಾಚಿಯಲ್ಲಿ ಭಾನುವಾರ ಪ್ರತಿಭಟಿಸಿದರು – ಎಎಫ್‌ಪಿ ಚಿತ್ರ

ಪಕ್ಷಗಳ ಬಲಾಬಲ

ಪಾಕಿಸ್ತಾನ ತೆಹ್ರೀಕ್–ಎ–ಇನ್ಸಾಫ್(ಪಿಟಿಐ) ಬೆಂಬಲಿತ 97 ಅಭ್ಯರ್ಥಿಗಳು ಗೆದ್ದಿದ್ದರೆ, ನವಾಜ್ ಷರೀಫ್ ಅವರ ಪಾಕಿಸ್ತಾನ ಮುಸ್ಲಿಂ ಲೀಗ್–ನವಾಜ್ (ಪಿಎಂಎಲ್–ಎನ್) ಪಕ್ಷ 76 ಸ್ಥಾನಗಳನ್ನು ಗೆದ್ದಿದೆ. ಉಳಿದಂತೆ, ಬಿಲಾವಲ್ ಭುಟ್ಟೊ ಜರ್ದಾರಿ ನೇತೃತ್ವದ ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ(ಪಿಪಿಪಿ)–54, ಮುತ್ತಹಿದಾ ಕ್ವಾಮಿ ಮೂವ್‌ಮೆಂಟ್ ಪಾಕಿಸ್ತಾನ್ (ಎಂಕ್ಯೂಎಂ–ಪಿ) ಸೇರಿದಂತೆ ಇತರ ಸಣ್ಣ ಪಕ್ಷಗಳು 37 ಸ್ಥಾನಗಳಲ್ಲಿ ಗೆದ್ದಿವೆ ಎಂದು ಮೂಲಗಳು ಹೇಳಿವೆ.

ಸಂಕ್ಷಿಪ್ತ ಸುದ್ದಿ

ಮ್ಯಾನ್ಮಾರ್: ಸೇನೆ ಸೇರುವುದು ಕಡ್ಡಾಯ

ನೈಪಿತಾವ್ (ರಾಯಿಟರ್ಸ್) : ಮ್ಯಾನ್ಮಾರ್‌ನ ಮಿಲಿಟರಿ ಸರ್ಕಾರವು ದೇಶದ ಎಲ್ಲ ಯುವಕ ಮತ್ತು ಯುವತಿಯರು ಸೇನೆಯಲ್ಲಿ ಸೇವೆ ಸಲ್ಲಿಸುವುದನ್ನು ಕಡ್ಡಾಯಗೊಳಿಸಿದೆ ಎಂದು ಅಲ್ಲಿನ ಮಾಧ್ಯಮ ವರದಿ ಮಾಡಿದೆ.

18 ರಿಂದ 35 ವರ್ಷ ವಯಸ್ಸಿನ ಯುವಕರು ಮತ್ತು 18 ರಿಂದ 27 ವರ್ಷ ವಯಸ್ಸಿನ ಯುವತಿಯರು 2 ವರ್ಷಗಳ ಕಾಲ ಸೇವೆ ಸಲ್ಲಿಸಬೇಕು. 45 ವರ್ಷ ವಯಸ್ಸಿನವರೆಗಿನ ವೈದ್ಯರು ಮುಂತಾದ ಪರಿಣತರು ಮೂರು ವರ್ಷಗಳ ಕಾಲ ಸೇನೆಯಲ್ಲಿ ಸೇವೆ ಸಲ್ಲಿಸಬೇಕು.

‘ದೇಶವನ್ನು ರಕ್ಷಿಸುವ ಜವಾಬ್ದಾರಿ ಕೇವಲ ಸೈನಿಕರದ್ದಲ್ಲ, ಪ್ರತಿಯೊಬ್ಬ ನಾಗರಿಕನದ್ದು. ಹಾಗಾಗಿ ಎಲ್ಲರೂ ನಾಗರಿಕ ಸೇನಾ ಸೇವಾ ಕಾನೂನನ್ನು ಹೆಮ್ಮೆಯಿಂದ ಪಾಲಿಸಬೇಕು’ ಎಂದು ಮಿಲಿಟರಿ ಸರ್ಕಾರದ ವಕ್ತಾರ ಝೂ ಮಿನ್ ಟುನ್ ತಿಳಿಸಿದ್ದಾರೆ.

2021ರಿಂದ ಸೇನೆಯ ನಿಯಂತ್ರಣದಲ್ಲಿರುವ ಮ್ಯಾನ್ಮಾರ್‌ನಲ್ಲಿ ಯೋಧರ ಕೊರತೆ ಉಂಟಾಗಿರುವ ಹಿನ್ನೆಲೆಯಲ್ಲಿ ಸರ್ಕಾರ ಹೊಸ ಕಾನೂನನ್ನು ರೂಪಿಸಿದೆ.

ದಾಳಿಯಲ್ಲಿ ಒತ್ತೆಯಾಳು ಸಾವು: ಹಮಾಸ್

ಕೈರೊ (ರಾಯಿಟರ್ಸ್): ‘ಗಾಜಾ ಪಟ್ಟಿಯಲ್ಲಿ ಕಳೆದ 96 ತಾಸಿನಿಂದ ಇಸ್ರೇಲ್ ನಡೆಸುತ್ತಿರುವ ದಾಳಿಯಲ್ಲಿ ಇಸ್ರೇಲ್‌ನವರೇ ಆದ ಇಬ್ಬರು ಒತ್ತೆಯಾಳುಗಳು ಸಾವಿಗೀಡಾಗಿದ್ದು, ಎಂಟು ಮಂದಿ ಗಾಯಗೊಂಡಿದ್ದಾರೆ’ ಎಂದು ಹಮಾಸ್ ಬಂಡುಕೋರರ ಶಸ್ತ್ರಾಸ್ತ್ರ ವಿಭಾಗವಾದ ಅಲ್ ಖಾಸಿಮ್ ಬ್ರಿಗೇಡ್ಸ್ ಭಾನುವಾರ ತಿಳಿಸಿದೆ.

‘ಸೂಕ್ತ ಚಿಕಿತ್ಸೆ ಸಿಗದ ಕಾರಣ ಗಾಯಗೊಂಡವರ ಸ್ಥಿತಿ ಗಂಭೀರವಾಗಿದೆ’ ಎಂದು ಅದು ಹೇಳಿದೆ.

ರಾಮ್, ನಗಾಲ್‌ಗೆ ಫ್ರೆಂಚ್ ಸವಾಲು

ಬೆಂಗಳೂರು ಓಪನ್ ಟೆನಿಸ್ ಟೂರ್ನಿ ಇಂದಿನಿಂದ: ಡಬಲ್ಸ್‌ನಲ್ಲಿ ಭಾರತದ ಒಂಬತ್ತು ಆಟಗಾರರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಅಗ್ರಗಣ್ಯ ಆಟಗಾರರಾದ ಸುಮಿತ್ ನಗಾಲ್ ಮತ್ತು ರಾಮ್‌ಕುಮಾರ್ ರಾಮನಾಥನ್ ಅವರು ಸೋಮವಾರ ಇಲ್ಲಿ ಆರಂಭವಾಗಲಿರುವ ಬೆಂಗಳೂರು ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನ ಪ್ರಧಾನ ಸುತ್ತಿನಲ್ಲಿ ಫ್ರೆಂಚ್ ಆಟಗಾರರ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ.

ವಿಶ್ವ ರ‍್ಯಾಂಕಿಂಗ್‌ನಲ್ಲಿ 121ನೇ ಸ್ಥಾನದಲ್ಲಿದ್ದು, ಇಲ್ಲಿ ಎರಡನೇ ಶ್ರೇಯಾಂಕ ಪಡೆದಿರುವ ನಗಾಲ್ ಅವರು ಆರಂಭಿಕ ಸುತ್ತಿನಲ್ಲಿ ಜೆಫ್ರಿ ಬ್ಲಾಂಕಾನಿಯಾಕ್ಸ್ ವಿರುದ್ಧ ಸೆಣಸಾಡುವರು. ಈ ಫ್ರೆಂಚ್ ಆಟಗಾರನ ವಿರುದ್ಧ ಆಸ್ಟ್ರೇಲಿಯನ್ ಓಪನ್‌ನ ಕ್ವಾಲಿಫೈಯರ್ ಸೇರಿದಂತೆ ಮೂರು ಬಾರಿ ಗೆಲುವು ಸಾಧಿಸಿರುವ ನಗಾಲ್, ಇಲ್ಲಿಯೂ ತಮ್ಮ ಪ್ರಾಬಲ್ಯವನ್ನು ವಿಸ್ತರಿಸುವ ವಿಶ್ವಾಸದಲ್ಲಿದ್ದಾರೆ.



ಸುಮಿತ್ ನಗಾಲ್

ಟೂರ್ನಿಗೆ ವೈಲ್ಡ್ ಕಾರ್ಡ್ ಪ್ರವೇಶ ಪಡೆದಿರುವ ರಾಮಕುಮಾರ್ ಮೊದಲ ಸುತ್ತಿನಲ್ಲಿ ಮ್ಯಾಕ್ಸಿಮ್ ಜಾನ್ವಿಯರ್ ಅವರೊಂದಿಗೆ ಮುಖಾಮುಖಿಯಾಗುವರು. ಈ ಫ್ರೆಂಚ್ ಆಟಗಾರನೊಂದಿಗೆ ರಾಮಕುಮಾರ್ 1–1 ಗೆಲುವಿನ ದಾಖಲೆ ಹೊಂದಿದ್ದಾರೆ. ಈ ಪಂದ್ಯದಲ್ಲಿ ಮುನ್ನಡೆದ ಆಟಗಾರನಿಗೆ ಎರಡನೇ ಸುತ್ತಿನಲ್ಲಿ ಅಗ್ರ ಶ್ರೇಯಾಂಕದ ಇಟಲಿಯ ಲುಕಾ ನಾರ್ಡಿ ಎದುರಾಗುವ ಸಾಧ್ಯತೆ ಇದೆ. ಲುಕಾ ಅವರು ಮೊದಲ ಸುತ್ತಿನಲ್ಲಿ ಕ್ವಾಲಿಫೈಯರ್ ಹಂತದಲ್ಲಿ ಗೆದ್ದು ಬರುವ ಆಟಗಾರನನ್ನು ಎದುರಿಸಲಿದ್ದಾರೆ.

ಮೂರನೇ ಶ್ರೇಯಾಂಕದ ಆ್ಯಡಂ ವಾಲ್ಟನ್ (ಆಸ್ಟ್ರೇಲಿಯಾ) ಮೊದಲ ಸುತ್ತಿನಲ್ಲಿ ಭಾರತದ ಪ್ರಜ್ವಲ್ ದೇವ್ ಅವರನ್ನು ಎದುರಿಸುವರು. ಪ್ರಜ್ವಲ್ ಅವರೂ ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದ್ದಾರೆ.

ಪುರುಷರ ಡಬಲ್ಸ್‌ನಲ್ಲಿ ಫ್ರೆಂಚ್‌ನ ಡಾನ್ ಆಡೆಡ್ ಮತ್ತು ಕೊರಿಯಾದ ಯುನ್ ಸಿಯೊಂಗ್ ಚುಂಗ್ ಅವರು ಅಗ್ರ ಶ್ರೇಯಾಂಕ ಪಡೆದಿದ್ದು, ಅವರು ಆಸ್ಟ್ರೇಲಿಯಾದ ಜೋಡಿ ಟ್ರಿಸ್ಟನ್ ಸ್ಕೂಲ್‌ಕೇಟ್ ಮತ್ತು ಆ್ಯಡಂ ವಾಲ್ಟನ್ ವಿರುದ್ಧ ಅಭಿಯಾನ ಪ್ರಾರಂಭಿಸುವರು.

ಎರಡನೇ ಶ್ರೇಯಾಂಕ ಪಡೆದಿರುವ ಆಸ್ಟ್ರೇಲಿಯಾದ ಕ್ರಿಸ್ಟೋಫರ್ ಮ್ಯಾಥ್ಯೂ ರೋಮಿಯೋಸ್ ಮತ್ತು ಪೋಲೆಂಡ್‌ನ ಪಿಯೋಟರ್ ಮಾಟುಸ್ಜೆವ್ಸ್ಕಿ ಜೋಡಿಯು ಚೀನಾ ತೈಪೆಯ ರೇ ಹೋ ಮತ್ತು ಆಸ್ಟ್ರೇಲಿಯಾದ ಕ್ಯಾಲಮ್ ಪ್ಯಾಟರ್‌ಗಿಲ್ ಅವರ ಸವಾಲನ್ನು ಎದುರಿಸಲಿದೆ.

ಡಬಲ್ಸ್‌ನಲ್ಲಿ ಭಾರತದ 9 ಆಟಗಾರರು ಕಣದಲ್ಲಿದ್ದಾರೆ. ಭಾರತದ ಶ್ರೀರಾಮ್ ಬಾಲಾಜಿ ಮತ್ತು ಜರ್ಮನಿಯ ಆಂಡ್ರೆ ಬೆಗೆಮನ್ ಜೋಡಿಯು ಜರ್ಮನಿಯ ಮಾರ್ಕ್ ವಾಲ್ನರ್ ಮತ್ತು ಜೇಕಬ್ ಷ್ನೈಟರ್ ವಿರುದ್ಧ ಸೆಣಸಲಿದೆ.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯು ಈ ಎಟಿಪಿ ಚಾಲೆಂಜರ್ ಟೂರ್ನಿಯನ್ನು ನಗರದ ಕೆಎಸ್‌ಎಲ್‌ಟಿಎ ಕ್ರೀಡಾಂಗಣದಲ್ಲಿ ಆಯೋಜಿಸಿದೆ. ಅರ್ಹತಾ ಸುತ್ತಿನ ಪಂದ್ಯಗಳು ಭಾನುವಾರ ಆರಂಭವಾಗಿದ್ದು, ಫೆ.18ರಂದು ಫೈನಲ್ ನಿಗದಿಯಾಗಿದೆ.

‘ಅಂತರರಾಷ್ಟ್ರೀಯ ಟೂರ್ನಿ ಆಯೋಜಿಸುವುದರಿಂದ ಸ್ಥಳೀಯ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ಸಹಕಾರಿ. ಇಂತಹ ಟೂರ್ನಿಗಳಲ್ಲಿ ಭಾರತದ ಆಟಗಾರರನ್ನು ಪ್ರಧಾನ ಸುತ್ತಿನಲ್ಲಿ ನೋಡುವುದೇ ರೋಮಾಂಚಕನಕಾರಿ ಅನುಭವ. ಎನ್ನುತ್ತಾರೆ ಟೂರ್ನಿಯ ನಿರ್ದೇಶಕ ಸುನಿಲ್ ಯಜಮಾನ್.

ಖೇಲೊ ಇಂಡಿಯಾ 13 ವರ್ಷದೊಳಗಿನ ಫುಟ್‌ಬಾಲ್

ಕೆಂಪ್ ಜೂನಿಯರ್ ತಂಡಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪ್ ಜೂನಿಯರ್ ಎಫ್‌ಸಿ ತಂಡವು ಕೆಎಸ್‌ಎಫ್‌ಎ ಖೇಲೊ ಇಂಡಿಯಾ 13 ವರ್ಷದೊಳಗಿನ ಬಾಲಕಿಯರ ಫುಟ್‌ಬಾಲ್ ಚಾಂಪಿಯನ್ ಷಿಪ್‌ನಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿತು.

ಟೂರ್ನಿಯಲ್ಲಿ ಆಡಿರುವ ಎಲ್ಲಾ 10 ಪಂದ್ಯಗಳನ್ನು ಗೆದ್ದ ಕೆಂಪ್ ತಂಡವು ಟ್ರೋಫಿಯೊಂದಿಗೆ ₹ 50 ಸಾವಿರ ನಗದು ಬಹುಮಾನ ಪಡೆಯಿತು.

10 ಪಂದ್ಯಗಳ ಪೈಕಿ 7ರಲ್ಲಿ ಗೆದ್ದ ಆಲ್ಕೆಮಿ ಇಂಟೆಲ್ ಎಫ್‌ಎ ತಂಡವು ರನ್ನರ್ಸ್ ಅಪ್ ಸ್ಥಾನ ಪಡೆಯಿತು.

ಈ ತಂಡಕ್ಕೆ ಟ್ರೋಫಿಯೊಂದಿಗೆ ₹ 30 ಸಾವಿರ ನಗದು ಬಹುಮಾನ ದೊರೆಯಿತು.


ಪ್ರಶಸ್ತಿ ಗೆದ್ದ ಕೆಂಪ್ ಜೂನಿಯರ್ ಎಫ್‌ಸಿ ತಂಡ. ಕೆಎಸ್‌ಎಫ್‌ಎ ಕಾರ್ಯದರ್ಶಿ ಎಂ. ಕುಮಾರ್, ಉಪಾಧ್ಯಕ್ಷ ಅಸ್ಲಾಂ ಖಾನ್ ಉಪಸ್ಥಿತರಿದ್ದರು

ಕಲ್ಯಾಣನಗರದ ಕಿಕ್‌ಸ್ಟಾರ್ಟ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಕೊನೆ ಪಂದ್ಯದಲ್ಲಿ ಕೆಂಪ್ ತಂಡವು 8–0ಯಿಂದ ಪರಿಕ್ರಮ ಎಫ್‌ಸಿ ತಂಡವನ್ನು ಸುಲಭವಾಗಿ ಸೋಲಿಸಿತು.

ಮತ್ತೊಂದು ಪಂದ್ಯದಲ್ಲಿ ಆಲ್ಕೆಮಿ ತಂಡ 12–0ಯಿಂದ ಮಾತೃ ಪ್ರತಿಷ್ಠಾನ ತಂಡವನ್ನು ಮಣಿಸಿತು. ಆಲ್ಕೆಮಿಯ ಸಾಂಚಿ ರವಿಪತಿ ಎಂಟು ಗೋಲು ಗಳಿಸಿ ಮಿಂಚಿದರೆ, ಪ್ರತೀಕ್ಷಾ ವಿ. ನಾಲ್ಕು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಚೆನ್ನೈ ಓಪನ್: ಸುಮಿತ್‌ಗೆ ಪ್ರಶಸ್ತಿ

ಚೆನ್ನೈ (ಪಿಟಿಐ): ಭಾರತದ ಸುಮಿತ್ ನಗಾಲ್ ಅವರು ಚೆನ್ನೈ ಓಪನ್ ಟೆನಿಸ್ ಟೂರ್ನಿಯ ಫೈನಲ್‌ನಲ್ಲಿ ಇಟಲಿಯ ಲುಕಾ ನಾರ್ಡಿ ಅವರನ್ನು ಮಣಿಸಿ ಚಾಲೆಂಜರ್ ಮಟ್ಟದ ಐದನೇ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದರು. ಈ ಸಾಧನೆಯೊಂದಿಗೆ ಅವರು ವೃತ್ತಿಜೀವನದಲ್ಲಿ ಮೊದಲ ಬಾರಿಗೆ ವಿಶ್ವ ರ‍್ಯಾಂಕಿಂಗ್‌ನ ಅಗ್ರ 100ರಲ್ಲಿ ಸ್ಥಾನ ಖಚಿತಪಡಿಸಿಕೊಂಡರು.

ಭಾನುವಾರ ನಡೆದ ಪಂದ್ಯದಲ್ಲಿ ನಗಾಲ್ ಅವರು 6–1, 6–4ರಿಂದ ಗೆಲುವು ಸಾಧಿಸಿದರು. ಸೋಮವಾರ ಪ್ರಕಟವಾಗಲಿರುವ ಹೊಸ ರ‍್ಯಾಂಕಿಂಗ್ ಪಟ್ಟಿಯಲ್ಲಿ ನಗಾಲ್ ಅವರಿಗೆ 98ನೇ ಸ್ಥಾನಕ್ಕೆ ಬಡ್ತಿ ದೊರೆಯಲಿದೆ.

2019ರಲ್ಲಿ ಪ್ರಜ್ಞೇಶ್ ಗುಣೇಶ್ವರನ್ 75ನೇ ರ‍್ಯಾಂಕ್ ಪಡೆದಿದ್ದರು. ಅದಾದ ಬಳಿಕ ಅಗ್ರ 100ರಲ್ಲಿ ಸ್ಥಾನ ಪಡೆದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ನಗಾಲ್ ಪಾತ್ರವಾಗಲಿದ್ದಾರೆ.

ಆಸ್ಟ್ರೇಲಿಯನ್ ಓಪನ್‌ನ ಮುಖ್ಯ ಸುತ್ತಿಗೆ ಅರ್ಹತೆ ಪಡೆದಿದ್ದ 26 ವರ್ಷದ ನಗಾಲ್, ಮೊದಲ ಸುತ್ತಿನಲ್ಲಿ ಅಲೆಕ್ಸಾಂಡರ್ ಬುಬ್ಲಿಕ್ (23ನೇ ಕ್ರಮಾಂಕ) ಅವರನ್ನು ಸೋಲಿಸಿ ಈ ಋತುವಿನಲ್ಲಿ ಉತ್ತಮ ಆರಂಭ ಪಡೆದಿದ್ದರು.

ಬಾಕ್ಸಿಂಗ್: ಅಮಿತ್, ಸಚಿನ್‌ಗೆ ಚಿನ್ನ

ಸೋಫಿಯಾ, ಬಲ್ಗೇರಿಯಾ (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್‌ನ ಪದಕ ವಿಜೇತ ಅಮಿತ್ ಪಂಘಲ್ ಮತ್ತು ರಾಷ್ಟ್ರೀಯ ಚಾಂಪಿಯನ್ ಸಚಿನ್ ಅವರು ಇಲ್ಲಿ ನಡೆಯುತ್ತಿರುವ 75ನೇ ಸ್ಟ್ರಾಂಡ್ಜಾ ಸ್ಮಾರಕ ಬಾಕ್ಸಿಂಗ್ ಟೂರ್ನಿಯಲ್ಲಿ ಚಿನ್ನ ಗೆದ್ದಿದ್ದಾರೆ.

2019ರ ವಿಶ್ವ ಚಾಂಪಿಯನ್‌ಷಿಪ್‌ನ ಬೆಳ್ಳಿ ಪದಕ ವಿಜೇತ ಅಮಿತ್ (51 ಕೆಜಿ) ಅವರು ಪುರುಷರ ಫ್ರೀಸ್ಟೈಲ್ ವಿಭಾಗದ ಫೈನಲ್‌ನಲ್ಲಿ 5–0ಯಿಂದ ಕಜಕಿಸ್ತಾನದ ಸಂಜಾರ್ ತಾಷ್ಕೆನ್‌ಬೇ ವಿರುದ್ಧ ಗೆಲುವು ಸಾಧಿಸಿದರು.

ವಿಶ್ವ ಯೂತ್ ಚಾಂಪಿಯನ್ ಸಚಿನ್ (57 ಕೆಜಿ) ಅವರು ಫೈನಲ್ ಸ್ಪರ್ಧೆಯಲ್ಲಿ 5–0ಯಿಂದ ಉಜ್ಬೇಕಿಸ್ತಾನದ ಶಖ್ಜೋದ್ ಮುಜಾಫರೋವ್ ವಿರುದ್ಧ ಜಯ ಪಡೆದರು.

ಹಾಲಿ ವಿಶ್ವ ಚಾಂಪಿಯನ್ ನಿಖತ್ ಝರೀನ್ ಅವರು 2–3ರಿಂದ ಉಜ್ಬೇಕಿಸ್ತಾನದ ಸಬೀನಾ ಬೊಬೊಕುಲೋವಾ ಅವರಿಗೆ ಸೋತರು. ಇದರೊಂದಿಗೆ ತನ್ನ ಮೂರನೇ ಸ್ಟ್ರಾಂಡ್ಜಾ ಚಿನ್ನದ ಪದಕವನ್ನು ತಪ್ಪಿಸಿಕೊಂಡರು.


ಅಮಿತ್ ಪಂಘಲ್

ನಂತರ ಅರುಂಧತಿ ಚೌಧರಿ (66 ಕೆಜಿ), ಬರುನ್ ಸಿಂಗ್ ಶಗೋಲ್ಶೆಮ್ (48 ಕೆಜಿ) ಮತ್ತು ರಜತ್ (67 ಕೆಜಿ) ತಮ್ಮ ಬೌಟ್‌ಗಳಲ್ಲಿ ಬೆಳ್ಳಿ ಪದಕ ಗೆದ್ದುಕೊಂಡರು.

ಭಾರತವು ಎರಡು ಚಿನ್ನ, ನಾಲ್ಕು ಬೆಳ್ಳಿ ಸೇರಿದಂತೆ ಒಟ್ಟು 8 ಪದಕಗಳನ್ನು ಗೆದ್ದುಕೊಂಡಿದೆ.

ಪ್ರೊ ಕಬಡ್ಡಿ: ಸೆಮಿಗೆ ಪುಣೇರಿ ಪಲ್ಟನ್

ಕೋಲ್ಕತ್ತ: ಸಾಂಘಿಕ ಆಟ ಪ್ರದರ್ಶಿಸಿದ ಪುಣೇರಿ ಪಲ್ಟನ್ ತಂಡವು ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಭಾನುವಾರ 56–29ರಿಂದ ತಮಿಳು ತಲೈವಾಸ್ ವಿರುದ್ಧ ಸುಲಭ ಜಯ ಸಾಧಿಸಿ, ಪಾಯಿಂಟ್ ಪಟ್ಟಿಯಲ್ಲಿ ಮತ್ತೆ ಅಗ್ರ ಸ್ಥಾನಕ್ಕೆ ಏರಿತು.

ನೇತಾಜಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಪಲ್ಟನ್ ತಂಡವು ಆರಂಭದಿಂದಲೇ ಪಾರಮ್ಯ ಮೆರೆಯಿತು.

ಮಧ್ಯಂತರದ ವೇಳೆಗೆ 28–10 ಮುನ್ನಡೆ ಪಡೆದ ತಂಡವು ಉತ್ತರಾರ್ಧದಲ್ಲೂ ಹಿಡಿತ ಸಾಧಿಸಿ, 27 ಪಾಯಿಂಟ್ಸ್ ಅಂತರದ ಗೆಲುವು ಪಡೆದು, ಸೆಮಿಫೈನಲ್‌ಗೆ ಲಗ್ಗೆ ಇಟ್ಟಿದೆ.

ಪಲ್ಟನ್ ತಂಡದ ಪರವಾಗಿ ಪಂಕಜ್ ಮೊಹಿತೆ ರೈಡಿಂಗ್‌ನಲ್ಲಿ (12) ಮಿಂಚಿ ‘ಸೂಪರ್ ಟೆನ್’ ಸಾಧನೆ ಮಾಡಿದರು. ಮೊಹಮ್ಮದ್ ರೇಜಾ, ಮೋಹಿತ್ ಗೋಯತ್ ಕ್ರಮವಾಗಿ 8 ಮತ್ತು 7 ಅಂಕ ಗಳಿಸಿದರು. ಎದುರಾಳಿ ತಂಡವನ್ನು ಮೂರು ಬಾರಿ ಆಲೌಟ್ ಮಾಡಿ 6 ಅಂಕ ಸಂಪಾದಿಸಿತು.

ತಲೈವಾಸ್ ಪರ ಮೊಹಮ್ಮದ್ ರೇಜಾ ಶಾಡ್ಲೂಯಿ ಮತ್ತು ಹಿಮಾಂಶು ನರ್ವಾಲ್ ಕ್ರಮವಾಗಿ 6 ಮತ್ತು 5 ಅಂಕ ಸಂಪಾದಿಸಿದರು.

ಆಡಿರುವ 19 ಪಂದ್ಯಗಳ ಪೈಕಿ 14ರಲ್ಲಿ ಗೆದ್ದು 81 ಪಾಯಿಂಟ್ಸ್ ಸಂಪಾದಿಸಿರುವ ಪಲ್ಟನ್ ಅಂಕಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದರೆ, 77 ಅಂಕ ಪಡೆದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡ ಎರಡನೇ ಸ್ಥಾನದಲ್ಲಿದೆ.

ಬುಲ್ಸ್‌ಗೆ ಸೋಲು: ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ತಂಡವು 28–50ರಿಂದ ಗುಜರಾತ್ ಜೈಂಟ್ಸ್ ತಂಡಕ್ಕೆ ಮಣಿಯಿತು. ಜೈಂಟ್ಸ್ ಪರವಾಗಿ ಪಾರ್ಟಿಕ್ ದಹಿಯಾ (13) ರೈಡಿಂಗ್‌ನಲ್ಲಿ ಮಿಂಚಿದರು. ಅವರಿಗೆ ನಿತಿನ್ (7) ಮತ್ತು ಫಜಲ್ ಅತ್ರಾಚಲಿ (6) ಸಾಥ್ ನೀಡಿದರು.

ಬೆಂಗಳೂರು ತಂಡದ ಪರವಾಗಿ ರಕ್ಷಿತ್ ಮತ್ತು ವಿಕಾಸ್ ಖಂಡೋಲ ತಲಾ ಆರು ಅಂಕ ಗಳಿಸಿದರು.

ಈ ಸೋಲಿನೊಂದಿಗೆ ಬುಲ್ಸ್ ತಂಡವು ಪಾಯಿಂಟ್ ಪಟ್ಟಿಯಲ್ಲಿ 8ನೇ ಸ್ಥಾನಕ್ಕೆ ಇಳಿದಿದೆ.